بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّی عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ

# ಬದರ್

ವಾರ ಪತ್ರಿಕೆ

WEEKLY BADAR QADIAN KANNADA

ಸಂಪಾದಕರು:
ತಾರಿಖ್ ಅಹ್ಮದ್ ಇದ್ರೀಸ್.

ಸಂಪುಟ: 07, ಸಂಚಿಕೆ: 40, 01 ಅಕ್ಟೋಬರ್ 2026, 01 ಅಖಾ 1405 ಹಿಜರಿ ಶಮ್‌ಸಿ,
19 ರಬೀಉಸ್ಸಾನಿ 1448 ಹಿಜರಿ ಖಮರಿ. (www.akhbarbadr.in)

## ಅಲ್ಲಾಹನ ಉಪದೇಶ

**"ಅಲ್ಲಾಹ್ ಮತ್ತು ಅವನ ರಸೂಲ್(ಸ) ಅವರ ಕರೆಯನ್ನು ಸ್ವೀಕರಿಸದ ಜೀವನವು ನಿಜವಾದ ಜೀವನವಲ್ಲ."**

يٰۤاَيُّهَا الَّذِيۡنَ اٰمَنُوا اسۡتَجِيۡبُوۡا لِلّٰهِ وَلِلرَّسُوۡلِ اِذَا دَعَاكُمۡ لِمَا يُحۡيِيۡكُمۡ‌ۚ وَاعۡلَمُوۡۤا اَنَّ اللّٰهَ يَحُوۡلُ بَيۡنَ الۡمَرۡءِ وَقَلۡبِهٖ وَاَنَّهٗۤ اِلَيۡهِ تُحۡشَرُوۡنَ ﴿۲۵﴾

(ಅಲ್‌ಅನ್‌ಫ಼ಾಲ್ : 25)

**ಅಂದರೆ: ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಮತ್ತು ಸಂದೇಶವಾಹಕನಿಗೆ ಅವರು ನಿಮ್ಮನ್ನು ಬದುಕಿಸಲಿಕ್ಕಾಗಿ ಕರೆಯುವಾಗ ಓಗೊಡಿರಿ. ಖಂಡಿತವಾಗಿಯೂ ಅಲ್ಲಾಹನು ಮನುಷ್ಯನಿಗೂ ಅವನ ಹೃದಯಕ್ಕೂ ಮಧ್ಯೆ ಇದ್ದಾನೆಂದೂ ಅವನೆಡೆಗೆಯೇ ನೀವೆಲ್ಲರೂ ಒಂದುಗೂಡಿಸಲ್ಪಡುವಿರೆಂದೂ ಅರಿತುಕೊಳ್ಳಿರಿ.**



## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ನೀವು ಅಲ್ಲಾಹನಲ್ಲಿ ದುವಾ (ಪ್ರಾರ್ಥನೆ) ಮಾಡುವಾಗ, ನಿಮ್ಮ ದುವಾ ಖಂಡಿತವಾಗಿಯೂ ಸ್ವೀಕರಿಸಲ್ಪಡುತ್ತದೆ ಎಂಬ ದೃಢವಾದ ವಿಶ್ವಾಸದೊಂದಿಗೆ ಪ್ರಾರ್ಥಿಸಿರಿ**

عَنۡ أَبِي سَعِيدِ بۡنِ الۡمُعَلَّى رَضِيَ اللّٰهُ عَنۡهُ، قَالَ: كُنۡتُ أُصَلِّي، فَمَرَّ بِي رَسُولُ اللّٰهِ صَلَّى اللّٰهُ عَلَيۡهِ وَسَلَّمَ فَدَعَانِي، فَلَمۡ آتِهِ حَتَّى صَلَّيۡتُ، ثُمَّ أَتَيۡتُهُ، فَقَالَ: "مَا مَنَعَكَ أَنۡ تَأۡتِيَ، أَلَمۡ يَقُلِ اللّٰهُ: يَأَيُّهَا الَّذِينَ آمَنُوا اسۡتَجِيبُوا لِلّٰهِ وَلِلرَّسُولِ إِذَا دَعَاكُمۡ (سورة الأنفال آية :25)" ثُمَّ قَالَ: "لَأُعَلِّمَنَّكَ أَعۡظَمَ سُورَةٍ فِي الۡقُرۡآنِ قَبۡلَ أَنۡ أَخۡرُجَ"، فَذَهَبَ رَسُولُ اللّٰهِ صَلَّى اللّٰهُ عَلَيۡهِ وَسَلَّمَ لِيَخۡرُجَ، فَذَكَرۡتُ لَهُ، وَقَالَ مُعَاذٌ: حَدَّثَنَا شُعۡبَةُ، عَنۡ خُبَيۡبِ بۡنِ عَبۡدِ الرَّحۡمٰنِ، سَمِعَ حَفۡصًا، سَمِعَ أَبَا سَعِيدٍ رَجُلًا مِنۡ أَصۡحَابِ النَّبِيِّ صَلَّى اللّٰهُ عَلَيۡهِ وَسَلَّمَ بِهٰذَا، وَقَالَ: هِيَ" الۡحَمۡدُ لِلّٰهِ رَبِّ الۡعَالَمِينَ ( الفاتحة:2) السَّبۡعُ الۡمَثَانِي".

[صحيح البخاری/ كتاب تفسير القرآن/حديث: 4647]

ಹಝ್ರತ್ ಅಬೂ ಸಈದ್ ಬಿನ್ ಮುಅಲ್ಲಾ (ರ.ಅ.) ಅವರು ವಿವರಿಸುತ್ತಾರೆ: ನಾನು ನಮಾಝ್ ಮಾಡುತ್ತಿದ್ದಾಗ ಹಝ್ರತ್ ಪೈಗಂಬರ್(ಸ)ರು ನನ್ನನ್ನು ಕರೆದರು. ಆದರೆ ನಾನು ನಮಾಝ್ ಮುಗಿಯುವವರೆಗೆ ಅವರ ಬಳಿಗೆ ಹೋಗಲು ಸಾಧ್ಯವಾಗಲಿಲ್ಲ. ನಮಾಝ್ ಮುಗಿಸಿದ ನಂತರ ನಾನು ಅವರ ಸೇವೆಗೆ ಹಾಜರಾದೆ. ಆಗ ಅವರು(ಸ), "ನೀನು ಬರಲು ತಡವಾದದ್ದು ಏಕೆ? ಅಲ್ಲಾಹನು ನಿನಗೆ ಈ ಆಜ್ಞೆಯನ್ನು ನೀಡಿಲ್ಲವೇ? **ಯಾ ಅಯ್ಯುಹಲ್ಲಝೀನ ಆಮನುಸ್ತಜೀಬುಲಿಲ್ಲಾಹಿ ವಲಿರ್‌ರಸೂಲಿ ಇಝಾ ದಆಕುಮ್**– 'ಓ ಸತ್ಯವಿಶ್ವಾಸಿಗಳೇ! ಅಲ್ಲಾಹನು ಮತ್ತು ಅವನ ಸಂದೇಶವಾಹಕರು ನಿಮ್ಮನ್ನು ಕರೆದಾಗ, ಅವರ ಕರೆಯನ್ನು ಸ್ವೀಕರಿಸಿ (ಅದಕ್ಕೆ ವಿಧೇಯರಾಗಿ).'" ನಂತರ ಹುಝೂರ್(ಸ) ಹೇಳಿದರು: "ನೀನು ಮಸ್ಜಿದ್‌ನಿಂದ ಹೊರಡುವ ಮೊದಲು, ನಾನು ನಿನಗೆ ಖುರ್‌ಆನ್‌ನ ಅತ್ಯಂತ ಮಹತ್ವದ ಒಂದು ಸೂರವನ್ನು ಕಲಿಸುತ್ತೇನೆ." ಸ್ವಲ್ಪ ಸಮಯದ ನಂತರ ಅವರು(ಸ) ಹೊರಗೆ ತೆರಳಲು ಮುಂದಾದಾಗ, ನಾನು ಅವರಿಗೆ ಆ ಮಾತನ್ನು ನೆನಪಿಸಿದೆ. ಆಗ ಅವರು(ಸ) ಹೇಳಿದರು: "ಅದು 'ಅಲ್‌ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್' (ಸೂರತುಲ್ ಫಾತಿಹಾ) ಆಗಿದೆ. ಇದರಲ್ಲಿ ಏಳು ಆಯತ್‌ಗಳಿವೆ ಮತ್ತು ಅವುಗಳನ್ನು ಪ್ರತಿಯೊಂದು ನಮಾಝ್‌ನಲ್ಲಿ ಪುನಃ ಪುನಃ ಪಠಿಸಲಾಗುತ್ತದೆ."



## ಹಝ್ರತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆ

**ಹಝ್ರತ್ ಪೈಗಂಬರ್ ಮುಹಮ್ಮದ್(ಸ) ಅವರ ಮಹೋನ್ನತ ದೈವಿಕ ಶಕ್ತಿಯ ಪವಾಡಗಳು**

ಹಝ್ರತ್ ಅಕ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಅದೇ ರೀತಿಯಲ್ಲಿ, ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರ ಮತ್ತೊಂದು ಮುಅಜಿಝಾ (ಪವಾಡ) ಚಂದ್ರನು ವಿಭಜನೆಯಾಗುವುದು (ಶಕ್ಕುಲ್ ಖಮರ್) ಆಗಿದೆ. ಇದು ಕೂಡ ಅದೇ ದೈವಿಕ ಶಕ್ತಿಯಿಂದ ಪ್ರಕಟವಾಯಿತು. ಇದಕ್ಕಾಗಿ ಯಾವುದೇ ದುವಾ (ಪ್ರಾರ್ಥನೆ) ಮಾಡಲಾಗಿರಲಿಲ್ಲ. ಏಕೆಂದರೆ ದೈವಿಕ ಶಕ್ತಿಯಿಂದ ತುಂಬಿದ್ದ ಅವರ ಬೆರಳಿನ ಒಂದು ಸೂಚನೆಯಿಂದಲೇ ಅದು ಸಂಭವಿಸಿತು. ಈ ರೀತಿಯ ಇನ್ನೂ ಅನೇಕ ಮುಅಜಿಝಾತ್‌ಗಳಿವೆ. ಅವುಗಳನ್ನು ಹಝ್ರತ್ ಮುಹಮ್ಮದ್(ಸ) ಅವರು ತಮ್ಮ ವೈಯಕ್ತಿಕ ಅಧಿಕಾರ ಮತ್ತು ದೈವಿಕ ಸಾಮರ್ಥ್ಯದ ಮೂಲಕ ಪ್ರದರ್ಶಿಸಿದರು; ಅವುಗಳೊಂದಿಗೆ ಯಾವುದೇ ದುವಾ ಇರಲಿಲ್ಲ. ಹಲವಾರು ಸಂದರ್ಭಗಳಲ್ಲಿ ಕೇವಲ ಒಂದು ಪಾತ್ರೆಯಲ್ಲಿದ್ದ ಸ್ವಲ್ಪ ನೀರಿನೊಳಗೆ ಅವರು ತಮ್ಮ ಬೆರಳುಗಳನ್ನು ಇಟ್ಟಾಗ, ಆ ನೀರು ಅಷ್ಟೊಂದು ಹೆಚ್ಚಾಯಿತು ಎಂದರೆ ಇಡೀ ಸೈನ್ಯವು, ಅದರ ಒಂಟೆಗಳು ಮತ್ತು ಕುದುರೆಗಳು ಸಹ ಆ ನೀರನ್ನು ಕುಡಿದವು. ಆದರೂ ಆ ನೀರು ಕಡಿಮೆಯಾಗದೆ, ಮೊದಲಿನಷ್ಟೇ ಪ್ರಮಾಣದಲ್ಲಿ ಉಳಿದಿತ್ತು. ಹಾಗೆಯೇ ಅನೇಕ ಸಂದರ್ಭಗಳಲ್ಲಿ ಕೇವಲ ಎರಡು ಅಥವಾ ನಾಲ್ಕು ರೊಟ್ಟಿಗಳ ಮೇಲೆ ಅವರು ತಮ್ಮ ಕೈಯನ್ನು ಇಟ್ಟಾಗ, ಸಾವಿರಾರು ಹಸಿದ ಮತ್ತು ಬಾಯಾರಿದ ಜನರು ಅವುಗಳಿಂದ ಹೊಟ್ಟೆತುಂಬಾ ಆಹಾರ ಪಡೆದರು. ಕೆಲವೊಮ್ಮೆ ಸ್ವಲ್ಪ ಪ್ರಮಾಣದ ಹಾಲಿಗೆ ತಮ್ಮ ಪವಿತ್ರ ತುಟಿಗಳ ಮೂಲಕ ಬರಕತ್ ನೀಡಿದಾಗ, ಒಂದು ಸಂಪೂರ್ಣ ಗುಂಪಿನ ಜನರ ಹೊಟ್ಟೆ ಅದರಿಂದಲೇ ತುಂಬಿತು. ಮತ್ತೆ ಕೆಲವು ಸಂದರ್ಭಗಳಲ್ಲಿ ಉಪ್ಪಾಗಿದ್ದ ಬಾವಿಯ ನೀರಿಗೆ ತಮ್ಮ ಬಾಯಿಯ ಲಾಲಾರಸವನ್ನು ಹಾಕಿದಾಗ, ಆ ನೀರು ಅತ್ಯಂತ ಸಿಹಿಯಾದ ನೀರಾಗಿ ಮಾರ್ಪಟ್ಟಿತು. ಕೆಲವೊಮ್ಮೆ ತೀವ್ರವಾಗಿ ಗಾಯಗೊಂಡವರ ಮೇಲೆ ತಮ್ಮ ಕೈಯನ್ನು ಇಟ್ಟಾಗ, ಅವರು ಗುಣಮುಖರಾದರು. ಮತ್ತೆ ಕೆಲವು ಸಂದರ್ಭಗಳಲ್ಲಿ ಯುದ್ಧದ ಸಂದರ್ಭದಲ್ಲಿ ಗಾಯಗೊಂಡು ಕಣ್ಣಿನ ಗುಡ್ಡೆಗಳು (ಕಣ್ಣಿನ ಗೋಳಗಳು) ಹೊರಗೆ ಬಂದಿದ್ದವರ ಕಣ್ಣುಗಳನ್ನು ತಮ್ಮ ಪವಿತ್ರ ಕೈಯ ಬರಕತ್‌ನಿಂದ ಪುನಃ ಸರಿಪಡಿಸಿದರು. ಇದೇ ರೀತಿಯಲ್ಲಿ, ಅವರು ತಮ್ಮ ವೈಯಕ್ತಿಕ ಅಧಿಕಾರ ಮತ್ತು ಸಾಮರ್ಥ್ಯದ ಮೂಲಕ ಇನ್ನೂ ಅನೇಕ ಕಾರ್ಯಗಳನ್ನು ನೆರವೇರಿಸಿದರು. ಆದರೆ ಆ ಎಲ್ಲ ಕಾರ್ಯಗಳೊಂದಿಗೆ ಒಂದು ಅದೃಶ್ಯವಾದ ದೈವಿಕ ಶಕ್ತಿ ಕೂಡ ಸಂಯುಕ್ತವಾಗಿತ್ತು."

**(ಆಯಿನಾ-ಎ-ಕಮಾಲಾತ್-ಎ-ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ 5, ಪುಟ 65-66)**

## ತಫ಼್ಸೀರ್ ಕಬೀರ್‌ನಿಂದ ಉಲ್ಲೇಖ

**ಇಹ್ಯಾ-ಎ-ಮೌತಾ ಎಂದರೆ ಮೃತರಂತಾಗಿರುವ ರೋಗಿಗಳನ್ನು ಪುನಃ ಜೀವಂತಗೊಳಿಸುವುದು.**

ಹಝ್ರತ್ ಮುಸ್ಲಿಹ್ ಮೌಊದ್ (ರ.ಅ.) ಅವರು **"ಕಝಾಲಿಕ ಯುಹ್‌ಯಿಲ್ಲಾಹುಲ್ ಮೌತಾ"** ಎಂಬ ಆಯತ್‌ನಲ್ಲಿರುವ **"ಇಹ್ಯಾಇಲ್ ಮೌತಾ"** (ಮೃತರನ್ನು ಜೀವಂತಗೊಳಿಸುವುದು) ಎಂಬುದರ ತಫ಼್ಸೀರ್‌ನಲ್ಲಿ ಹೀಗೆ ವಿವರಿಸುತ್ತಾರೆ:

**"ಕಝಾಲಿಕ ಯುಹ್‌ಯಿಲ್ಲಾಹುಲ್ ಮೌತಾ"** ಇದರಲ್ಲಿ **ಇಹ್ಯಾಇಲ್ ಮೌತಾ** ಎಂಬುದಕ್ಕೆ ಎರಡು ಅರ್ಥಗಳಿವೆ. ಮೊದಲನೆಯ ಅರ್ಥವೆಂದರೆ: "ಈ ರೀತಿಯಾಗಿ ಅಲ್ಲಾಹನು ಮೃತರನ್ನು ಜೀವಂತಗೊಳಿಸುತ್ತಾನೆ", ಅಂದರೆ ನಿಜವಾಗಿಯೂ ಮರಣ ಹೊಂದಿದವರನ್ನು ಪುನಃ ಜೀವಂತಗೊಳಿಸಿ, ಅವರನ್ನು ಈ ಲೋಕಕ್ಕೆ ಹಿಂದಿರುಗಿಸುತ್ತಾನೆ. ಆದರೆ ಈ ಸ್ಥಳದಲ್ಲಿ ಈ ಅರ್ಥವನ್ನು

*(ಪುಟ ಸಂಖ್ಯೆ-08 ರಲ್ಲಿ ಮುಂದುವರಿಸಲಾಗಿದೆ)*

**ಅಹ್ಮದಿಯಾ ವಾರ್ತೆ**

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ (ಅ.ಸ.) ಮತ್ತು ಮೃತರನ್ನು ಜೀವಂತಗೊಳಿಸುವ ಮಹಾನ್ ನಿಶಾನೆ!

ಸಯ್ಯಿದುನಾ ಹಝ್ರತ್ ಅಕ್ದಸ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ(ಅ.ಸ.) ಅವರನ್ನು ಸರ್ವಶಕ್ತನಾದ ಅಲ್ಲಾಹನು ಮಸೀಹ್ ಮೌಊದ್ ಮತ್ತು ಮಹ್ದೀ ಮಊದ್ ಎಂಬ ಸ್ಥಾನಮಾನದಿಂದ ಅಲಂಕರಿಸಿದ್ದಾನೆ. ಹಝ್ರತ್ ಅಕ್ದಸ್(ಅ.ಸ.) ಅವರು ತಾವು ಮಸೀಹನ ಮಸೀಲ್ (ಪ್ರತಿರೂಪ) ಆಗಿರುವುದಾಗಿ ದಾವೆ ಮಾಡಿದರು. ಮಸೀಹನ ಕುರಿತು ಪವಿತ್ರ ಖುರ್‌ಆನ್ ಮತ್ತು ಇಂಜೀಲಿನಲ್ಲಿ ಅವರು ಅಲ್ಲಾಹನ ಅನುಮತಿಯಿಂದ ಮೃತರನ್ನು ಜೀವಂತಗೊಳಿಸುತ್ತಿದ್ದರು, ರೋಗಿಗಳನ್ನು ಗುಣಪಡಿಸುತ್ತಿದ್ದರು ಮತ್ತು ಕುರುಡರಿಗೆ ದೃಷ್ಟಿಯನ್ನು ನೀಡುತ್ತಿದ್ದರು ಎಂದು ಉಲ್ಲೇಖಿಸಲಾಗಿದೆ. ಇದರ ಅರ್ಥ ಮುಖ್ಯವಾಗಿ ಆಧ್ಯಾತ್ಮಿಕವಾಗಿ ಮೃತರಾಗಿರುವವರಿಗೆ ಜೀವನ ನೀಡುವುದು, ಆಧ್ಯಾತ್ಮಿಕ ರೋಗಿಗಳನ್ನು ಗುಣಪಡಿಸುವುದು ಮತ್ತು ಆಧ್ಯಾತ್ಮಿಕ ಕುರುಡರಿಗೆ ದೃಷ್ಟಿಯನ್ನು ನೀಡುವುದು ಎಂಬುದಾಗಿದೆ. ಆದರೆ ಸರ್ವಶಕ್ತನಾದ ಅಲ್ಲಾಹನು ತನ್ನ ವಿಶೇಷ ಕೃಪೆಯಿಂದ ಮಸೀಹ್ ಹಾಗೂ ಇತರ ಅನೇಕ ಪ್ರವಾದಿಗಳಿಗೆ, ವಿಶೇಷವಾಗಿ ನಮ್ಮ ಪ್ರಿಯ ಪ್ರವಾದಿ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರಿಗೆ, ದೈಹಿಕವಾಗಿಯೂ ಒಂದು ಶಕ್ತಿಯನ್ನು ನೀಡಿದ್ದನು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಅದರ ಮೂಲಕ ಮರಣದ ಅಂಚಿಗೆ ತಲುಪಿದ್ದವರು, ಮರಣಾಸನ್ನರಾಗಿದ್ದವರು ಮತ್ತು ಲೌಕಿಕ ವೈದ್ಯರು ಚಿಕಿತ್ಸೆ ನೀಡುವಲ್ಲಿ ನಿರಾಶರಾಗಿದ್ದಂತಹ ರೋಗಿಗಳನ್ನೂ ಅವರು ಅಲ್ಲಾಹನ ಅನುಮತಿಯಿಂದ ಮರಣದ ಬಾಯಿಂದ ಪಾರು ಮಾಡಿದರು.

ಇಂತಹ ಮಹಾನ್ ಮುಅಜಿಝಾತ್‌ಗಳು (ನಿಶಾನೆಗಳು) ಇಂದಿಗೂ ಹಝ್ರತ್ ಅಕ್ದಸ್ ಮಸೀಹ್ ಮೌಊದ್(ಅ.ಸ.) ಅವರ ಮೂಲಕವೂ ಪ್ರಕಟವಾಗಿವೆ. ಈ ನಿಶಾನೆಗಳನ್ನು ನೋಡಿದಾಗ ಹಿಂದಿನ ಪ್ರವಾದಿಗಳು ಮತ್ತು ಈಸಾ ಮಸೀಹರ ನಿಶಾನೆಗಳ ಮೇಲೆಯೂ ಪರಿಪೂರ್ಣ ವಿಶ್ವಾಸ ಉಂಟಾಗುತ್ತದೆ. ಇಲ್ಲದಿದ್ದರೆ ಅವು ಇಂದಿನ ಕಾಲದಲ್ಲಿ ಕೇವಲ ಕೇಳಿಬಂದ ವಿಷಯಗಳ ರೂಪದಲ್ಲೇ ಉಳಿಯುತ್ತವೆ.

ಕೆಳಗೆ ಸಯ್ಯಿದುನಾ ಹಝ್ರತ್ ಅಕ್ದಸ್ ಮಸೀಹ್ ಮೌಊದ್(ಅ.ಸ.) ಅವರ ಮೂಲಕ ಪ್ರಕಟವಾದ ಇಂತಹ ನೂರಾರು ಮುಅಜಿಝಾತ್‌ಗಳಲ್ಲಿ ಸದ್ಯಕ್ಕೆ ಕೇವಲ ಒಂದು ಮುಅಜಿಝಾದ ಉಲ್ಲೇಖ ಮಾಡಲಾಗುತ್ತಿದೆ.

ಅಬ್ದುಲ್ ಕರೀಮ್ ಸಾಹಿಬ್ ಅವರ ಅದ್ಭುತ ಘಟನೆ

ಇದು 1906ರ ಘಟನೆ. ಖಾದಿಯಾನ್‌ಗೆ ಅಬ್ದುಲ್ ಕರೀಮ್ ಎಂಬ ಒಬ್ಬ ವಿದ್ಯಾರ್ಥಿ ವಿದ್ಯಾಭ್ಯಾಸಕ್ಕಾಗಿ ಬಂದರು ಮತ್ತು ಮದರಸಾ ಅಹ್ಮದಿಯ್ಯಾ ಖಾದಿಯಾನ್‌ನ ನಾಲ್ಕನೇ ತರಗತಿಗೆ ಪ್ರವೇಶ ಪಡೆದರು.

ಅವರೊಂದಿಗೆ ಏನು ಸಂಭವಿಸಿತು ಎಂಬುದನ್ನು ಹಝ್ರತ್ ಅಕ್ದಸ್ ಮಸೀಹ್ ಮೌಊದ್(ಅ.ಸ.) ಅವರ ಪವಿತ್ರ ವಚನಗಳಲ್ಲಿಯೇ ಓದೋಣ:

"ಅಬ್ದುಲ್ ಕರೀಮ್ ಎಂಬ ಹೆಸರಿನ, ಅಬ್ದುರ್ ರಹ್ಮಾನ್ ಅವರ ಪುತ್ರ, ಹೈದರಾಬಾದ್ ದಕ್ಕನ್ ನಿವಾಸಿ, ನಮ್ಮ ಮದರಸಾದಲ್ಲಿ ಒಬ್ಬ ವಿದ್ಯಾರ್ಥಿಯಾಗಿದ್ದಾನೆ. ಖುಝಾ ಮತ್ತು ಖದರ್‌ನಿಂದ ಅವನನ್ನು ಹುಚ್ಚು ನಾಯಿಯೊಂದು ಕಚ್ಚಿತು. ಚಿಕಿತ್ಸೆಗೆ ನಾವು ಅವನನ್ನು ಕಸೌಲಿಗೆ ಕಳುಹಿಸಿದೆವು. ಕೆಲವು ದಿನಗಳವರೆಗೆ ಕಸೌಲಿಯಲ್ಲಿ ಅವನ ಚಿಕಿತ್ಸೆ ನಡೆಯಿತು. ನಂತರ ಅವನು ಖಾದಿಯಾನ್‌ಗೆ ಹಿಂದಿರುಗಿದನು. ಕೆಲವು ದಿನಗಳು ಕಳೆದ ನಂತರ, ಹುಚ್ಚು ನಾಯಿ ಕಚ್ಚಿದ ಬಳಿಕ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ಹುಚ್ಚುತನದ ಲಕ್ಷಣಗಳು ಅವನಲ್ಲಿ ಮತ್ತೆ ಕಾಣಿಸಿಕೊಂಡವು. ಅವನು ನೀರಿಗೂ ಹೆದರಲು ಪ್ರಾರಂಭಿಸಿದನು ಮತ್ತು ಭಯಾನಕ ಸ್ಥಿತಿ ಉಂಟಾಯಿತು. ಆಗ ಆ ಪರದೇಶಿ ಹಾಗೂ ಅಸಹಾಯಕ ಬಾಲಕನಿಗಾಗಿ ನನ್ನ ಹೃದಯವು ತೀವ್ರವಾಗಿ ಕಳವಳಗೊಂಡಿತು ಮತ್ತು ಅವನಿಗಾಗಿ ದುವಾ ಮಾಡಲು ನನ್ನಲ್ಲಿ ವಿಶೇಷವಾದ ಗಮನ ಮತ್ತು ತವಜ್ಜೋಹ್ (ಆಧ್ಯಾತ್ಮಿಕ ಏಕಾಗ್ರತೆ) ಉಂಟಾಯಿತು. ಪ್ರತಿಯೊಬ್ಬರೂ ಆ ಬಡ ಹುಡುಗನು ಇನ್ನೂ ಕೆಲವು ಗಂಟೆಗಳಲ್ಲೇ ಸಾಯುವನೆಂದು ಭಾವಿಸುತ್ತಿದ್ದರು. ಅನಿವಾರ್ಯವಾಗಿ ಅವನನ್ನು ಬೋರ್ಡಿಂಗ್‌ನಿಂದ ಹೊರಗೆ ತೆಗೆದು, ಇತರರಿಂದ ಪ್ರತ್ಯೇಕವಾಗಿ ಒಂದು ಮನೆಯಲ್ಲಿ ಬಹಳ ಎಚ್ಚರಿಕೆಯಿಂದ ಇರಿಸಲಾಯಿತು. ಕಸೌಲಿಯ ಇಂಗ್ಲಿಷ್ ವೈದ್ಯರಿಗೆ ತಂತಿ ಸಂದೇಶ ಕಳುಹಿಸಿ, ಈ ಸ್ಥಿತಿಯಲ್ಲಿ ಅವನಿಗೆ ಯಾವುದೇ ಚಿಕಿತ್ಸೆ ಸಾಧ್ಯವೇ ಎಂದು ಕೇಳಲಾಯಿತು. ಅಲ್ಲಿಂದ ತಂತಿ ಮೂಲಕ ಉತ್ತರ ಬಂತು: 'ಈಗ ಅವನಿಗೆ ಯಾವುದೇ ಚಿಕಿತ್ಸೆ ಇಲ್ಲ.' ಆದರೆ ಈ ಬಡ ಪರದೇಶಿ ಹುಡುಗನಿಗಾಗಿ ನನ್ನ ಹೃದಯದಲ್ಲಿ ಬಹಳ ತವಜ್ಜೋಹ್ ಉಂಟಾಯಿತು. ನನ್ನ ಸ್ನೇಹಿತರೂ ಅವನಿಗಾಗಿ ದುವಾ ಮಾಡಲು ಬಹಳ ಒತ್ತಾಯಿಸಿದರು. ಏಕೆಂದರೆ ಪರದೇಶದಲ್ಲಿದ್ದ ಆ ಹುಡುಗನು ಕರುಣೆಗೆ ಅರ್ಹನಾಗಿದ್ದನು. ಅಲ್ಲದೆ, ಅವನು ಸತ್ತರೆ ಅವನ ಮರಣವು ವಿರೋಧಿಗಳಿಂದ ನಮ್ಮ ವಿರುದ್ಧ ಕೆಟ್ಟ ರೀತಿಯಲ್ಲಿ ಬಳಸಲ್ಪಡಬಹುದೆಂಬ ಭಯವೂ ಹೃದಯದಲ್ಲಿ ಉಂಟಾಯಿತು. ಆಗ ನನ್ನ ಹೃದಯವು ಅವನಿಗಾಗಿ ತೀವ್ರವಾದ ನೋವು ಮತ್ತು ಕಳವಳದಿಂದ ತುಂಬಿತು. ಸ್ವಾಭಾವಿಕವಾಗಿ ತನ್ನ ಇಚ್ಛೆಯಿಂದ ಉಂಟುಮಾಡಿಕೊಳ್ಳಲು ಸಾಧ್ಯವಾಗದ, ಬದಲಾಗಿ ಕೇವಲ ಅಲ್ಲಾಹ್ ತಆಲಾದಿಂದಲೇ ಉಂಟಾಗುವ ಒಂದು ಅಸಾಮಾನ್ಯ ತವಜ್ಜೋಹ್ ನನ್ನಲ್ಲಿ ಉಂಟಾಯಿತು. ಅದು ಉಂಟಾದಾಗ ಅಲ್ಲಾಹ್‌ನ ಅನುಮತಿಯಿಂದ ಅಂತಹ ಪರಿಣಾಮವನ್ನು ಉಂಟುಮಾಡುತ್ತದೆ; ಅದರ ಮೂಲಕ ಮೃತನೂ ಜೀವಂತನಾಗುವಷ್ಟು ಪರಿಣಾಮ ಉಂಟಾಗಬಹುದು. ಹೀಗೆ ಅವನಿಗಾಗಿ ಅಲ್ಲಾಹ್ ಕಡೆಗೆ ಸಂಪೂರ್ಣವಾಗಿ ಮುಖಮಾಡುವ ಸ್ಥಿತಿ ನನಗೆ ದೊರೆಯಿತು. ಆ ತವಜ್ಜೋಹ್ ತನ್ನ ಪರಮಾವಧಿಯನ್ನು ತಲುಪಿದಾಗ ಮತ್ತು ಆ ನೋವು ನನ್ನ ಹೃದಯದ ಮೇಲೆ ಸಂಪೂರ್ಣವಾಗಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದಾಗ, ವಾಸ್ತವವಾಗಿ ಮೃತನಂತಾಗಿದ್ದ ಆ ರೋಗಿಯ ಮೇಲೆ ಈ ತವಜ್ಜೋಹ್‌ನ ಪರಿಣಾಮಗಳು ಕಾಣಿಸಿಕೊಳ್ಳಲು ಪ್ರಾರಂಭಿಸಿದವು. ಒಂದೆಡೆ ಅವನು ನೀರಿಗೆ ಹೆದರುತ್ತಿದ್ದನು ಮತ್ತು ಬೆಳಕಿನಿಂದ ಓಡಿಹೋಗುತ್ತಿದ್ದನು; ಮತ್ತೊಂದೆಡೆ ಏಕಾಏಕಿ ಅವನ ಸ್ವಭಾವವು ಆರೋಗ್ಯದ ಕಡೆಗೆ ತಿರುಗಿತು ಮತ್ತು ಅವನು ಹೇಳಿದನು: 'ಈಗ ನನಗೆ ನೀರಿನ ಭಯವಿಲ್ಲ.' ಆಗ ಅವನಿಗೆ ನೀರು ನೀಡಲಾಯಿತು. ಅವನು ಯಾವುದೇ ಭಯವಿಲ್ಲದೆ ನೀರನ್ನು ಕುಡಿದನು. ಅಷ್ಟೇ ಅಲ್ಲ, ನೀರಿನಿಂದ ವುಝೂ ಮಾಡಿ ನಮಾಝ್ ಕೂಡ ನಿರ್ವಹಿಸಿದನು. ಇಡೀ ರಾತ್ರಿ ನಿದ್ರಿಸಿದನು ಮತ್ತು ಅವನ ಭಯಾನಕ ಹಾಗೂ ಅಸಹಜ ಸ್ಥಿತಿ ಸಂಪೂರ್ಣವಾಗಿ ದೂರವಾಯಿತು. ಹೀಗೆ ಕೆಲವು ದಿನಗಳಲ್ಲಿ ಅವನು ಸಂಪೂರ್ಣವಾಗಿ ಗುಣಮುಖನಾದನು. ತಕ್ಷಣವೇ ನನ್ನ ಹೃದಯದಲ್ಲಿ ಈ ವಿಷಯವನ್ನು ಹಾಕಲಾಯಿತು: ಅವನಲ್ಲಿ ಉಂಟಾದ ಈ ಹುಚ್ಚುತನದ ಸ್ಥಿತಿಯ ಉದ್ದೇಶ ಅವನನ್ನು ನಾಶಮಾಡುವುದಾಗಿರಲಿಲ್ಲ; ಬದಲಾಗಿ ಅಲ್ಲಾಹನ ಒಂದು ನಿಶಾನೆ ಪ್ರಕಟವಾಗಬೇಕೆಂಬುದಾಗಿತ್ತು. ಅನುಭವಿಗಳಾದ ಜನರು ಹೇಳುತ್ತಾರೆ: ಯಾರನ್ನಾದರೂ ಹುಚ್ಚು ನಾಯಿ ಕಚ್ಚಿ, ಹುಚ್ಚುತನದ ಲಕ್ಷಣಗಳು ಪ್ರಕಟವಾದ ನಂತರ, ಅಂತಹ ಸ್ಥಿತಿಯಿಂದ ಯಾರಾದರೂ ಬದುಕುಳಿದಿರುವುದು ಜಗತ್ತಿನಲ್ಲಿ ಎಂದಿಗೂ ಕಂಡುಬಂದಿಲ್ಲ."

(ತತಿಮ್ಮಾ ಹಖೀಖತುಲ್ ವಹೀ, ಪುಟ 46–47)

ಇಂದು Rabies ರೋಗದ ಲಸಿಕೆ ಕಂಡುಹಿಡಿದು ನೂರ ಇಪ್ಪತ್ತೈದು ವರ್ಷಗಳಿಗಿಂತಲೂ ಹೆಚ್ಚು ಕಾಲ ಕಳೆದಿದೆ. ಅದರ ಆವಿಷ್ಕಾರಕ Louis Pasteur ಅವರ ಸಂಶೋಧನೆಯು ವರ್ಷದಿಂದ ವರ್ಷಕ್ಕೆ ಯಶಸ್ವಿ ಹಂತಗಳನ್ನು ದಾಟುತ್ತಾ ಬಂದಿದೆ. ಹುಚ್ಚು ನಾಯಿಯ ಕಚ್ಚುವಿಕೆಯ ನಂತರ ಈ ಲಸಿಕೆಯ ಪರಿಣಾಮಕಾರಿತ್ವದಿಂದ ಅನೇಕ ರೋಗಿಗಳ ಜೀವ ಉಳಿಯುತ್ತದೆ. ಆದರೆ ಒಮ್ಮೆ ರೋಗಿಯಲ್ಲಿ ರೇಬೀಸ್‌ನ ತೀವ್ರ ಲಕ್ಷಣಗಳು ಹಾಗೂ ಹುಚ್ಚುತನದ ದಾಳಿ ಸಂಪೂರ್ಣವಾಗಿ ಕಾಣಿಸಿಕೊಂಡ ನಂತರ, ಆ ಸ್ಥಿತಿಯಲ್ಲಿ ಈ ಲಸಿಕೆ ಪರಿಣಾಮಕಾರಿಯಾಗಿ ಕೆಲಸ ಮಾಡುವಂತಹ ಯಾವುದೇ ಚಿಕಿತ್ಸೆಯನ್ನು ಇಂದಿನವರೆಗೂ ವೈದ್ಯಕೀಯ ವಿಜ್ಞಾನವು ಕಂಡುಹಿಡಿದಿಲ್ಲ. ಆದರೆ ಸಯ್ಯಿದುನಾ ಹಝ್ರತ್ ಅಕ್ದಸ್ ಮಸೀಹ್ ಮೌಊದ್(ಅ.ಸ.) ಅವರ ಮೂಲಕ ಸರ್ವಶಕ್ತನಾದ ಅಲ್ಲಾಹನು ಒಂದು ಮಹಾನ್ ನಿಶಾನೆಯನ್ನು ಪ್ರಕಟಿಸಿದನು. ಹುಚ್ಚುತನದ ದಾಳಿ ಸಂಭವಿಸಿ, ಎಲ್ಲಾ ಲಕ್ಷಣಗಳು ಪ್ರಕಟವಾಗಿದ್ದ ಮತ್ತು ವೈದ್ಯರು ಲಿಖಿತವಾಗಿ:

"Sorry, Nothing Can be done for Abdul Kareem"

ಎಂದು ಉತ್ತರ ನೀಡಿದ್ದ ಆ ವ್ಯಕ್ತಿಗೆ, ಹಝ್ರತ್ ಮಸೀಹ್ ಮೌಊದ್(ಅ.ಸ.) ಅವರ ದುವಾಗಳ ಮೂಲಕ ಅಲ್ಲಾಹ್ ತಆಲಾ ಅದ್ಭುತವಾಗಿ ಶಿಫಾ (ಆರೋಗ್ಯ) ನೀಡಿದನು. ವೈದ್ಯಕೀಯ ವಿಜ್ಞಾನದ ದೃಷ್ಟಿಯಿಂದ ಇದು ಅತ್ಯಂತ ಆಶ್ಚರ್ಯಕರವಾದ ಘಟನೆ. ಇಂತಹ ಘಟನೆಯ ಉದಾಹರಣೆ ಇಂದಿನವರೆಗೂ ಜಗತ್ತಿನಲ್ಲಿ ಕಂಡುಬರುವುದಿಲ್ಲ. ನಿಶ್ಚಯವಾಗಿಯೂ ಇದು ಹಝ್ರತ್ ಅಕ್ದಸ್ ಮಸೀಹ್ ಮೌಊದ್(ಅ.ಸ.) ಅವರ ಸತ್ಯತೆಯ ಒಂದು ಜೀವಂತ ಮತ್ತು ಪ್ರಕಾಶಮಾನ ನಿಶಾನೆಯಾಗಿದೆ.

ಅಬ್ದುಲ್ ಕರೀಮ್ ಸಾಹಿಬ್ ಅವರಿಗೆ ಈ ಘಟನೆ 1907ರಲ್ಲಿ ಸಂಭವಿಸಿತು. ಅದರ ನಂತರ ಅವರು 1939ರಲ್ಲಿ ನಿಧನರಾದರು. ಅಂದರೆ

*(ಪುಟ ಸಂಖ್ಯೆ 09 ರಲ್ಲಿ ಮುಂದುವರಿಸಲಾಗಿದೆ)*



# ಖುತ್‌ಬ ಜುಮುಅ

## ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಅದ್ವಿತೀಯ ಕೃತಜ್ಞತಾ ಭಾವ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **07–08–2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಹಝ್ರತ್ ಪೈಗಂಬರ್(ಸ)ರ ಕೃತಜ್ಞತೆಯ ಗುಣಮಟ್ಟ, ಅವರ ಕಾರ್ಯಗಳು ಮತ್ತು ನುಡಿಗಳ ಪ್ರಸ್ತಾಪವನ್ನು ಜಲ್ಸದ ಹಿಂದಿನ ಖುತ್ಬಾದಲ್ಲಿ ನಾನು ಮಾಡಿದ್ದೆ. ಅದೇ ವಿಷಯವಾಗಿ ಇಂದೂ ವಿವರಿಸಲಿದ್ದೇನೆ.

ಅಲ್ಲಾಹನ ಕೃತಜ್ಞತೆಯ ಕಡೆಗೆ ಗಮನ ಸೆಳೆಯುತ್ತಾ, ಅತಿ ಸಣ್ಣ ವಿಷಯಗಳಿಗೂ ಕೃತಜ್ಞತೆ ಸಲ್ಲಿಸುವಂತೆ ನಬಿ(ಸ) ಉಪದೇಶಿಸಿದ್ದಾರೆ. ಹಝ್ರತ್ ಅನಸ್ ಬಿನ್ ಮಾಲಿಕ್(ರ) ವಿವರಿಸುತ್ತಾರೆ, ರಸೂಲುಲ್ಲಾಹ್(ಸ) ಹೀಗೆ ಹೇಳಿದರು: 'ದಾಸನು ತುತ್ತು ತಿನ್ನುವಾಗ ಅದಕ್ಕಾಗಿ ಅಲ್ಲಾಹನ ಪ್ರಶಂಸೆ ಮಾಡಿದರೆ, ಅಥವಾ ಗುಟುಕು ಕುಡಿಯುವಾಗ ಅದಕ್ಕಾಗಿ ಅವನ ಪ್ರಶಂಸೆ ಮಾಡಿದರೆ, ಅಲ್ಲಾಹನು ತನ್ನ ದಾಸನ ಆ ಕಾರ್ಯದಿಂದ ಸಂತೋಷಪಡುತ್ತಾನೆ.'

(ಸಹೀಹ್ ಮುಸ್ಲಿಮ್ ಅನುವಾದ ಕಿತಾಬುಝ್ಝಿಕ್ರ್ ವದ್ದುಆ ವತ್ತೌಬ ವಲ್ ಇಸ್ತಿಗ್‌ಫ಼ಾರ್,......., ಹದೀಸ್–4901, ಸಂಪುಟ–14, ಪುಟ–107, ನೂರ್ ಫ಼ೌಂಡೇಷನ್)

ಅದೇ ರೀತಿ ಹಝ್ರತ್ ಆಯಿಶಾ(ರ) ಹೇಳುತ್ತಾರೆ: ಒಂದು ದಿನ ನಬಿ(ಸ) ಮನೆಗೆ ಬಂದಾಗ, ಒಂದು ರೊಟ್ಟಿಯ ತುಂಡು ಬಿದ್ದಿರುವುದನ್ನು ನೋಡಿದರು. ಅವರು ಆ ರೊಟ್ಟಿಯ ತುಂಡನ್ನು ಎತ್ತಿ, ಅದನ್ನು ಸ್ವಚ್ಛಗೊಳಿಸಿ ತಿಂದರು ಮತ್ತು ಹೀಗೆ ಹೇಳಿದರು: 'ಹೇ ಆಯಿಶಾ, ಗೌರವಾನ್ವಿತ ವಸ್ತುವನ್ನು ಗೌರವಿಸು. ಈ ಆಹಾರದ ಅನುಗ್ರಹವು ಯಾವುದಾದರೂ ಸಮುದಾಯದಿಂದ ಒಮ್ಮೆ ಹೊರಟುಹೋದರೆ, ಮತ್ತೆ ಅವರಿಗೆ ಮರಳಿ ಸಿಗುವುದಿಲ್ಲ'.
(ಸುನನ್ ಇಬ್ನೆ ಮಾಜ್ಜ, ಕಿತಾಬುಲ್ ಅತ್‌ಇಮ, ಹದೀಸ್–3353)

ಇದು ಅವರ ಕಾರ್ಯವಾಗಿತ್ತು. ಅವರು ಬಾಹ್ಯವಾಗಿ ಪ್ರತಿಯೊಂದು ಸಣ್ಣ ವಿಷಯಕ್ಕೂ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರು. ಅವನ ಅನುಗ್ರಹಗಳಿಗಾಗಿ ಕೃತಜ್ಞತೆ ಸಲ್ಲಿಸುತ್ತಿದ್ದರು ಮತ್ತು ತಮ್ಮ ಮನೆಯವರಿಗೂ ಇದನ್ನೇ ಉಪದೇಶಿಸುತ್ತಿದ್ದರು.

ಆದ್ದರಿಂದ ನಮಗೆ ಜೀವನಾಧಾರದಲ್ಲಿ ಅಭಿವೃದ್ಧಿಯ ಆಸೆಯಿದ್ದರೆ, ನಾವು ಅಲ್ಲಾಹನ ಪ್ರತಿಯೊಂದು ಅನುಗ್ರಹಕ್ಕೂ ಕೃತಜ್ಞತೆ ಸಲ್ಲಿಸುವ ಅಗತ್ಯವಿದೆ. ಹಝ್ರತ್ ಇಬ್ನು ಅಬ್ಬಾಸ್(ರ) ವಿವರಿಸುತ್ತಾರೆ: ಮಕ್ಕಾ ವಿಜಯದ ದಿನ ರಸೂಲುಲ್ಲಾಹ್(ಸ) ತಮ್ಮ ಚಿಕ್ಕಪ್ಪನ ಮಗಳಾದ ಉಮ್ಮು ಹಾನಿ ಬಿಂತ್ ಅಬೀ ತಾಲಿಬ್(ರ)ರ ಮನೆಗೆ ಹೋದರು. ಆ ಸಮಯದಲ್ಲಿ ಅವರಿಗೆ ಹಸಿವಾಗಿತ್ತು. 'ತಿನ್ನಲು ನಿಮ್ಮ ಬಳಿ ಏನಾದರೂ ಇದೆಯೇ?' ಎಂದು ನಬಿ(ಸ) ಕೇಳಿದರು. ಅವರು ಹೇಳಿದರು: 'ಒಣಗಿದ ರೊಟ್ಟಿಯ ತುಂಡುಗಳ ಹೊರತು ನನ್ನ ಬಳಿ ಬೇರೇನೂ ಇಲ್ಲ ಮತ್ತು ಅವುಗಳನ್ನು ನಿಮ್ಮ ಮುಂದೆ ತರಲು ನನಗೆ ನಾಚಿಕೆಯಾಗುತ್ತಿದೆ'. 'ಅದನ್ನೇ ತೆಗೆದುಕೊಂಡು ಬಾ' ಎಂದು ನಬಿ(ಸ) ಹೇಳಿದರು. ನಬಿ(ಸ) ಅವುಗಳನ್ನು ನೀರಿನಲ್ಲಿ ಹಾಕಿ ಪುಡಿ ಮಾಡಿದರು. ಉಮ್ಮು ಹಾನಿ(ರ) ಉಪ್ಪು ತಂದರು. 'ಏನಾದರೂ ಪಲ್ಯವಿದೆಯೇ?' ಎಂದು ನಬಿ(ಸ) ಕೇಳಿದರು. ಅವರು ಹೇಳಿದರು: 'ಯಾ ರಸೂಲಲ್ಲಾಹ್, ಸ್ವಲ್ಪ ಸಿರ್ಕೆ ಹೊರತು ಬೇರೇನೂ ಇಲ್ಲ'. 'ಅದನ್ನೇ ತೆಗೆದುಕೊಂಡು ಬಾ' ಎಂದು ನಬಿ(ಸ) ಹೇಳಿದರು. ನಬಿ(ಸ) ಅದನ್ನು ತಮ್ಮ ಊಟದ ಮೇಲೆ ಸುರಿದು ತಿಂದರು ಮತ್ತು ಅಲ್ಲಾಹನಿಗೆ ಪ್ರಶಂಸೆ ಸಲ್ಲಿಸಿದರು. ನಂತರ ಹೀಗೆ ಹೇಳಿದರು: 'ಸಿರ್ಕೆ ಎಂತಹ ಅತ್ಯುತ್ತಮ ಪಲ್ಯವಾಗಿದೆ. ಹೇ ಉಮ್ಮು ಹಾನಿ, ಯಾವ ಮನೆಯಲ್ಲಿ ಸಿರ್ಕೆ ಇರುತ್ತದೆಯೋ ಆ ಮನೆ ಬಡವರ ಮನೆ ಅಲ್ಲ'. (ಅಲ್‌ಮುಜಮುಲ್ ಸಗೀರ್ ಅನುವಾದ, ಪುಟ–615–616, ಹದೀಸ್–951, ಶಬ್ಬೀರ್ ಬ್ರದರ್ಸ್ ಲಾಹೋರ್ 2014)

ಇದು ಅವರ ಕೃತಜ್ಞತೆಯ ಗುಣಮಟ್ಟವಾಗಿತ್ತು. ನಾವು ಈ ದೇಶಗಳಲ್ಲಿ ವಾಸಿಸುತ್ತೇವೆ. ಅಸಂಖ್ಯಾತ ಅನುಗ್ರಹಗಳಿಂದ ನಾವು ಲಾಭ ಪಡೆಯುತ್ತೇವೆ, ಆದರೂ ನಾವು ಅಲ್ಲಾಹನ ಕೃತಜ್ಞತೆಯ ಹಕ್ಕನ್ನು ಪೂರೈಸುವುದಿಲ್ಲ. ಬದಲಾಗಿ ಕೆಲವೊಮ್ಮೆ ಸಣ್ಣ ಸಣ್ಣ ವಿಷಯಗಳಿಗೂ ದೂರುತ್ತೇವೆ. ಮನೆಯವರೊಂದಿಗೆ 'ಇದನ್ನು ತರಲಿಲ್ಲ, ಅದನ್ನು ತರಲಿಲ್ಲ' ಎಂದು ದೂರುತ್ತೇವೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಇಂತಹ ಕೃತಜ್ಞತಾಗೇಡಿಗಳ ಚಿತ್ರಣವನ್ನು ಮತ್ತು ಸಹಾಬಿಯರ ಕೃತಜ್ಞತೆಯ ಚಿತ್ರಣವನ್ನು ಅತ್ಯಂತ ಪರಿಣಾಮಕಾರಿಯಾಗಿ ವಿವರಿಸಿದ್ದಾರೆ. ಅವರು ಹೇಳುತ್ತಾರೆ:

'ನಿಮ್ಮ ದೇಹದ ಮೇಲೆ ಎಂದಾದರೂ ಹರಿದ ಬಟ್ಟೆಯಿದ್ದರೆ ನೀವು ಅಳಲಾರಂಭಿಸುತ್ತೀರಿ ಮತ್ತು ನಮಗೆ ಧರಿಸಲು ಇರುವುದು ಹರಿದ ಬಟ್ಟೆಯಾಗಿದೆ, ನಮ್ಮ ಹಣೆಬರಹವೇ ಸರಿ ಇಲ್ಲ ಎಂದು ಹೇಳುತ್ತೀರಿ. ಆದರೆ ಸಹಾಬಿಯರಿಗೆ ಹರಿದ ಬಟ್ಟೆ ಸಿಕ್ಕರೂ ಅವರು ಅಲ್ಲಾಹನ ಸನ್ನಿಧಿಯಲ್ಲಿ ತಲೆ ಬಾಗುತ್ತಿದ್ದರು. ಅವರ ನಾಲಿಗೆ ಅವನ ಉಪಕಾರದ ಸ್ಮರಣೆಯನ್ನು ಮಾಡುತ್ತಿತ್ತು ಮತ್ತು 'ನಮ್ಮ ದೇವನು ನಮಗೆ ಎಂತಹ ಒಳ್ಳೆಯ ಬಟ್ಟೆಯನ್ನು ನೀಡಿದ್ದಾನೆ' ಎಂದು ಹೇಳುತ್ತಿದ್ದರು. ಅವರಿಗೆ ನಾಲ್ಕು ದಿನಗಳ ನಂತರ ಒಣ ರೊಟ್ಟಿಯ ತುಂಡೊಂದು ಸಿಕ್ಕರೂ ಅವರ ಕಣ್ಣುಗಳಲ್ಲಿ ಸಂತೋಷದ ಹೊಳಪು ಮೂಡುತ್ತಿತ್ತು ಮತ್ತು 'ಅಲ್‌ಹಮ್ದುಲಿಲ್ಲಾಹ್, ದೇವನು ನಮಗೆ ತನ್ನ ಅನುಗ್ರಹವನ್ನು ಕರುಣಿಸಿದ್ದಾನೆ' ಎಂದು ಹೇಳುತ್ತಿದ್ದರು. ಇಂದು ಪಲಾವ್ ಸಿಗುವಾಗ ಜೊತೆಗೆ ಜರ್ದಾ ಕೂಡ ಇರಬೇಕಿತ್ತು ಎಂಬ ಹಂಬಲ ಇರುತ್ತದೆ. ಯಾರಿಗೆ ಪಲಾವ್ ಮತ್ತು ಜರ್ದಾ ಸಿಗುತ್ತದೆಯೋ ಅವನು ಕೂಡ ರಕ್ತದ ಕಣ್ಣೀರು ಸುರಿಸುತ್ತಾನೆ ಮತ್ತು ಜರ್ದಾದ ಜೊತೆಗೆ ಫಿರ್ನಿ ಕೂಡ ಇರಬೇಕಿತ್ತು ಎನ್ನುತ್ತಾನೆ. ಯಾರಿಗೆ ಬೇಳೆಸಾರು ಸಿಗುತ್ತದೆಯೋ ಅವನು ಮಾಂಸಕ್ಕಾಗಿ ಅಳುತ್ತಾನೆ. ಯಾರಿಗೆ ಮಾಂಸ ಸಿಗುತ್ತದೆಯೋ ಅವನು ಅನ್ನಕ್ಕಾಗಿ ಪರದಾಡುತ್ತಾನೆ. ಹೀಗೆ ಅವರು ಬಹಳ ವಿವರವಾಗಿ ವಿವರಿಸಿದ್ದಾರೆ.

ಅವರು ಹೇಳುತ್ತಾರೆ: ಆದರೆ ಆ ಸಹಾಬಿಯರ ಸ್ಥಿತಿ ಹೇಗಿತ್ತು? ಅಲ್ಲಿ ಒಣ ರೊಟ್ಟಿಯ ತುಂಡು ಸಿಕ್ಕರೂ ಸಹಾಬಿಯರು ಹೀಗೆ ಹೇಳುತ್ತಿದ್ದರು: 'ನಾವು ಈ ತುಂಡಿಗೂ ಅರ್ಹರಾಗಿರಲಿಲ್ಲ, ದೇವನು ನಮಗೆ ಈ ತುಂಡನ್ನು ಕರುಣಿಸಿರುವುದು ಅವನ ಕೃಪೆಯಾಗಿದೆ'. ಇದರ ಪರಿಣಾಮವಾಗಿ ಆ ಒಣ ರೊಟ್ಟಿಯ ತುಂಡು ಅವರ ಮೈಗೆ ಹಿಡಿಸುತ್ತಿತ್ತು. ಅವರಲ್ಲಿ ಉನ್ನತ ಧೈರ್ಯವನ್ನು ಮೂಡಿಸುತ್ತಿತ್ತು. ಅವರಲ್ಲಿ ಕೃತಜ್ಞತೆಯ ಭಾವನೆಯನ್ನು ಇನ್ನಷ್ಟು ಹೆಚ್ಚಿಸುತ್ತಿತ್ತು.

ಮಕ್ಕಾ ವಿಜಯದ ದಿನ, ಅರಬರ ಪ್ರಾಬಲ್ಯ ಕೊನೆಗೊಂಡ ಮತ್ತು ಹಝ್ರತ್ ಪೈಗಂಬರ್(ಸ) ಹತ್ತು ಸಾವಿರ ಪವಿತ್ರ ಅನುಯಾಯಿಗಳೊಂದಿಗೆ ಮಕ್ಕಾವನ್ನು ಪ್ರವೇಶಿಸಿದ ದಿನ, ತಮ್ಮ ಸಂಪೂರ್ಣ ಜೀವನವನ್ನು ಇಸ್ಲಾಂ ವಿರೋಧದಲ್ಲಿ ಕಳೆದಿದ್ದ ಮಕ್ಕಾದ ದೊಡ್ಡ ದೊಡ್ಡ ನಾಯಕರು ತಲೆಬಾಗಿ ಅವರ ಮುಂದೆ ಹಾಜರಾದರು. ಹಝ್ರತ್ ಪೈಗಂಬರ್(ಸ) ಹೇಳಿದರು: 'ಹೋಗಿ, ನಾನು ನಿಮಗೆ ಏನೂ ಹೇಳುವುದಿಲ್ಲ. ನೀವೆಲ್ಲರೂ ನನ್ನ ಕಡೆಯಿಂದ ಸ್ವತಂತ್ರರಾಗಿದ್ದೀರಿ'. ಈ ಘೋಷಣೆ ಮಾಡಿದ ನಂತರ, ನಬಿ(ಸ) ಹಝ್ರತ್ ಉಮ್ಮು ಹಾನಿ(ರ)ರ ಮನೆಗೆ ಹೋದರು. ಉಮ್ಮು ಹಾನಿ(ರ) ರಸೂಲುಲ್ಲಾಹ್(ಸ)ರ ಚಿಕ್ಕಪ್ಪನ ಮಗಳಾಗಿದ್ದರು. 'ತಿನ್ನಲು ಏನಾದರೂ ಇದೆಯೇ?' ಎಂದು ನಬಿ(ಸ) ಕೇಳಿದರು. ಅವರು ಹೇಳಿದರು: 'ತಿನ್ನಲು ಏನೂ ಇಲ್ಲ, ನನ್ನ ಬಳಿಯಿದ್ದರೆ ನಾನೇ ತಿನ್ನಿಸುತ್ತಿದ್ದೆ, ಹಲವು ದಿನಗಳ ಹಿಂದಿನ ಒಂದು ಒಣ ರೊಟ್ಟಿಯನ್ನು ಹೊರತುಪಡಿಸಿ'. ಆಗ ನಬಿ(ಸ) ಹೇಳಿದರು: 'ಸರಿ ಅದನ್ನೇ ತೆಗೆದುಕೊಂಡು ಬಾ'. ಅವರು ಆ ರೊಟ್ಟಿಯನ್ನು ತಂದಾಗ ನಬಿ(ಸ) ಹೇಳಿದರು: 'ಇದು ಬಹಳ ಒಳ್ಳೆಯ ರೊಟ್ಟಿ, ನನ್ನ ಮನೆಯಲ್ಲಿ ತಿನ್ನಲು ಏನೂ ಇಲ್ಲ ಎಂದು ನೀನು ಸುಮ್ಮನೆ ಬೇಸರಪಡುತ್ತಿದ್ದೀಯಾ'. ನಂತರ ಅವರು ನೀರು ತಂದರು, ನಬಿ(ಸ) ರೊಟ್ಟಿಯನ್ನು ನೀರಿನಲ್ಲಿ ನೆನೆಸಿ, 'ಪಲ್ಯವಿದೆಯೇ?' ಎಂದು ಕೇಳಿದರು. ಅವರು ಹೇಳಿದರು: 'ನನ್ನ ಬಳಿ ರೊಟ್ಟಿಯೇ ಇರಲಿಲ್ಲ, ಪಲ್ಯ ಎಲ್ಲಿಂದ ಬರಬೇಕು? ನನ್ನ ಬಳಿ ಸ್ವಲ್ಪ ವಿನೆಗರ್ ಇದೆ' . ರಸೂಲುಲ್ಲಾಹ್(ಸ) ಹೇಳಿದರು: 'ಎಷ್ಟು ಒಳ್ಳೆಯ ಪಲ್ಯ'. ಅವರು ವಿನೆಗರ್ ತಂದರು ಮತ್ತು ನಬಿ(ಸ) ರೊಟ್ಟಿಯನ್ನು ನೆನೆಸಿ ತಿನ್ನಲಾರಂಭಿಸಿದರು.

ಹಝ್ರತ್ ಪೈಗಂಬರ್(ಸ) ವಿನೆಗರನ್ನು ಕೂಡ ದೇವನ ಅನುಗ್ರಹವೆಂದು ಭಾವಿಸಿದರು ಮತ್ತು ಅದರಿಂದ ಒಣ ರೊಟ್ಟಿಯನ್ನು ತಿಂದು

ಅವನ ಕೃಪೆಗೆ ಕೃತಜ್ಞತೆ ಸಲ್ಲಿಸಿದರು. ವಾಸ್ತವದಲ್ಲಿ ಜೀರ್ಣಕ್ರಿಯೆಯು ಹೃದಯದಲ್ಲಿ ಮೂಡುವ ಮನುಷ್ಯನ ಉಲ್ಲಾಸದಿಂದ ಉಂಟಾಗುತ್ತದೆ. ಸಂತೋಷದಿಂದ ಒಂದು ಸಾಮಾನ್ಯ ವಸ್ತುವನ್ನು ತಿಂದರೂ ಅದು ಬಹಳಷ್ಟು ಶಕ್ತಿಯನ್ನು ನೀಡುತ್ತದೆ. ಆದರೆ ದುಃಖದಿಂದ ಎಷ್ಟೇ ಒಳ್ಳೆಯ ವಸ್ತುವನ್ನು ತಿಂದರೂ ಅದು ಮನುಷ್ಯನ ಒಳಗೆ ಯಾವುದೇ ಶಕ್ತಿಯನ್ನು ಉಂಟುಮಾಡುವುದಿಲ್ಲ. ಅವರು ಹೇಳುತ್ತಾರೆ: ನಮಗೆ ಹೆಚ್ಚು ವಸ್ತುಗಳು ಸಿಗಬೇಕು, ಆದರೆ ಕಡಿಮೆ ಸಿಕ್ಕಿದೆ ಎಂದು ಜನರು ಭಾವಿಸುತ್ತಾರೆ, ಆದರೆ ಸಹಾಬಿಯರು ಪ್ರತಿಯೊಂದು ವಸ್ತುವಿನ ಬಗ್ಗೆಯೂ, 'ನಮಗೆ ಕಡಿಮೆ ಸಿಗಬೇಕಿತ್ತು ಆದರೆ ಹೆಚ್ಚು ಸಿಕ್ಕಿದೆ' ಎಂದು ಭಾವಿಸುತ್ತಿದ್ದರು. ಅವರ ಕೃತಜ್ಞತೆಯ ರೀತಿ ಹೇಗಿತ್ತೆಂದರೆ, ಸ್ವಲ್ಪ ಸಿಕ್ಕರೂ 'ಇದೇ ಬಹಳಷ್ಟಿದೆ' ಎನ್ನುತ್ತಿದ್ದರು. ಈ ಕಾರಣದಿಂದಾಗಿ, ಅವರ ಒಂದೊಂದು ರೊಟ್ಟಿಯೂ ಅವರಿಗೆ ನೀಡುತ್ತಿದ್ದ ಲಾಭವು ನಿಮಗೆ ಹತ್ತು ರೊಟ್ಟಿ ತಿಂದರೂ ಸಿಗುವುದಿಲ್ಲ.

ನಂತರ ಅವರು ಹೇಳಿದರು: ಇದು ಏಕೆಂದರೆ, ನಿಮ್ಮಲ್ಲಿ ಕೆಲವರು ಇನ್ನೂ ಈಮಾನಿನ, ಸತ್ಯವಿಶ್ವಾಸದ ಸಿಹಿಯನ್ನು ಸವಿದಿಲ್ಲ. ದೇವನು ನಿಮ್ಮನ್ನು ಒಂದು ಅತಿದೊಡ್ಡ ಆಧ್ಯಾತ್ಮಿಕ ಕಾರ್ಯಕ್ಕಾಗಿ ಸೃಷ್ಟಿಸಿದ್ದಾನೆ ಎಂಬ ವಾಸ್ತವ ನಿಮ್ಮ ಹೃದಯಗಳಿಗೆ ಗೊತ್ತೇ ಇಲ್ಲವೆಂಬಂತಿವೆ. ದೇವನು ಯಾರನ್ನು ಆಧ್ಯಾತ್ಮಿಕ ಕ್ರಾಂತಿ ಮತ್ತು ಬದಲಾವಣೆಗಾಗಿ ಸೃಷ್ಟಿಸುತ್ತಾನೋ, ಅವರ ಮುಂದೆ ಪ್ರಪಂಚದ ಅತಿ ದೊಡ್ಡ ರಾಜನೂ ಶೂನ್ಯನಾಗಿದ್ದಾನೆ. ಆದರೆ ನೀವು ನಿಮ್ಮ ಸ್ಥಾನವನ್ನು ಅರ್ಥಮಾಡಿಕೊಂಡು ನಿಮ್ಮ ಕರ್ತವ್ಯಗಳ ಸರಿಯಾದ ಅರಿವನ್ನು ಮೂಡಿಸಿಕೊಳ್ಳುವ ಬದಲು, ಅತ್ಯಂತ ಕೀಳು ಮತ್ತು ಸಣ್ಣಪುಟ್ಟ ವಿಷಯಗಳ ಕಡೆಗೆ ಆಕರ್ಷಿತರಾಗುತ್ತೀರಿ. ನೀವು ಅತ್ಯಂತ ಕೀಳು ಮತ್ತು ಸಣ್ಣಪುಟ್ಟ ವಿಷಯಗಳ ಕಡೆಗೆ ಆಕರ್ಷಿತರಾಗಿ, 'ನನಗೆ ಅದು ಸಿಗಲಿಲ್ಲ, ಇದು ಸಿಗಲಿಲ್ಲ' ಎನ್ನುತ್ತೀರಿ. ದೇವನು ನಿಮ್ಮನ್ನು ಯಾವ ಉದ್ದೇಶಕ್ಕಾಗಿ ಸೃಷ್ಟಿಸಿದ್ದಾನೆ ಎಂಬ ಅರಿವು ನಿಮ್ಮಲ್ಲಿ ಮೂಡುವವರೆಗೆ ಮತ್ತು ನಿಮ್ಮ ಸ್ಥಾನಮಾನವನ್ನು ನೀವು ಗುರುತಿಸಿಕೊಳ್ಳುವವರೆಗೆ, ನೀವು ಏನು ಕೆಲಸ ಮಾಡಲು ಸಾಧ್ಯ? ದೇವನು ನಿಮ್ಮನ್ನು ಆ ಸ್ಥಾನದಲ್ಲಿ ನಿಲ್ಲಿಸಿದ್ದಾನೆ, ಅಲ್ಲಿ ನಿಮ್ಮ ಹೃದಯವು ಸದಾ ಸಂತೋಷದ ಅಲೆಗಳಿಂದ ತುಂಬಿರಬೇಕು ಮತ್ತು ನಿಮ್ಮಲ್ಲಿ ಸದಾ ಎಚ್ಚರಿಕೆ ಹಾಗೂ ಚುರುಕುತನ ಕಾಣಬೇಕು. ಇದು ನಿಮ್ಮಲ್ಲಿ ಮೂಡಿದರೆ, ತಕ್ಷಣವೇ ನಿಮ್ಮಲ್ಲಿ ಎಂತಹ ಶಕ್ತಿ ಹುಟ್ಟಿಕೊಳ್ಳುವುದೆಂದರೆ, ಅತ್ಯಂತ ಕಡಿಮೆ ಆಹಾರವೂ ನಿಮ್ಮನ್ನು ಕೆಲಸ ಮಾಡಲು ಸಮರ್ಥರನ್ನಾಗಿಸುತ್ತದೆ. (ಅಮಲ್ ಕೆ ಬಗೈರ್ ಕಾಮಿಯಾಬಿ ಹಾಸಿಲ್ ನಹೀ ಜೊ ಸಕ್ತಿ, ಅನ್ವಾರುಲ್ ಉಲೂಮ್, ಸಂಪುಟ–18, ಪುಟ–475–479) (ಅಸದುಲ್‌ಗ್ಹಾಬ, ಸಂಪುಟ–7, ಪುಟ–393, ದಾರುಲ್ ಕುತುಬ್ ಇಲ್ಮಿಯಾ)

ಹಾಗಾಗಿ ಇದು ಆ ಸೂತ್ರವಾಗಿದೆ, ಇದನ್ನು ಸಾಮಾನ್ಯವಾಗಿ ಕಡಿಮೆ ಸಂಪನ್ಮೂಲಗಳಿರುವ ಪ್ರತಿಯೊಬ್ಬ ಅಹ್ಮದಿಯೂ, ಆದರೆ ವಿಶೇಷವಾಗಿ 'ವಕ್ಫೆ ಝಿಂದಗಿ'ಯವರು ತಮ್ಮ ಕೃತಜ್ಞತೆಯ ಗುಣಮಟ್ಟವನ್ನು ಹೆಚ್ಚಿಸಲು ಬಳಸಬೇಕು. ಇದರ ಬಹಳ ಅಗತ್ಯವಿದೆ, ಅದೇ ರೀತಿ ತಮ್ಮ ಹೆಂಡತಿ–ಮಕ್ಕಳಲ್ಲೂ ಇದರ ಅರಿವನ್ನು ಸಾಧ್ಯವಾದಷ್ಟು ಮೂಡಿಸುವ ಅಗತ್ಯವಿದೆ. ಏಕೆಂದರೆ ಯಾವ ಉದ್ದೇಶಕ್ಕಾಗಿ ವಕ್ಫೆ ಝಿಂದಗಿಯವರು ತಮ್ಮನ್ನು ಸಮರ್ಪಿಸಿಕೊಂಡಿದ್ದಾರೋ ಅದು ಬಹಳ ದೊಡ್ಡ ಉದ್ದೇಶವಾಗಿದೆ, ಆ ದೊಡ್ಡ ಉದ್ದೇಶವನ್ನು ಸಾಧಿಸಲು ಆ ಗುರಿ ಸಾಧಿಸಿದವರ ಮಾದರಿಗಳು ಕಣ್ಣ ಮುಂದಿರಬೇಕು, ಅವುಗಳನ್ನು ಪಾಲಿಸಲು ಪ್ರಯತ್ನಿಸಬೇಕು, ಆಗ ಮಾತ್ರ ಆ ಉದ್ದೇಶವೂ ಈಡೇರಲು ಸಾಧ್ಯ.

ಹಝ್ರತ್ ಪೈಗಂಬರ್(ಸ) ತಮ್ಮ ಸಹಾಬಿಯರ ಸೇವೆ ಮತ್ತು ಕೃತಜ್ಞತೆಯೊಂದಿಗೆ ಅವರಿಗೆ ಎಷ್ಟೊಂದು ಪ್ರಾರ್ಥನೆಗಳನ್ನು ಮಾಡುತ್ತಿದ್ದರು ಎಂಬುದರ ಬಗ್ಗೆ ಒಂದು ವರದಿಯಿದೆ. ಹಝ್ರತ್ ಅಬೂ ಖತಾದಾ(ರ)ರಿಂದ ವರದಿಯಾಗಿದೆ, ಅವರು ಹೇಳುತ್ತಾರೆ: ರಸೂಲುಲ್ಲಾಹ್(ಸ) ಹೇಳಿದರು: 'ನೀವು ನಿಮ್ಮ ಇಡೀ ಸಂಜೆ ಮತ್ತು ಇಡೀ ರಾತ್ರಿ ನಡೆಯುವಿರಿ ಮತ್ತು ನಾಳೆ ಇನ್‌ಶಾ ಅಲ್ಲಾಹ್ ನೀರನ್ನು ತಲುಪುವಿರಿ'. ಯಾವುದೋ ಪ್ರಯಾಣದಲ್ಲಿದ್ದರು. ಜನರು ಯಾರು ಯಾರ ಕಡೆಗೂ ಗಮನಹರಿಸದಂತೆ ನಡೆಯುತ್ತಿದ್ದರು. ಹಝ್ರತ್ ಅಬೂ ಖತಾದಾ(ರ) ಹೇಳುತ್ತಾರೆ: ರಸೂಲುಲ್ಲಾಹ್(ಸ) ನಡೆಯುತ್ತಲೇ ಇದ್ದರು, ಮಧ್ಯರಾತ್ರಿ ಕಳೆಯಿತು. ನಾನು ಅವರ ಪಕ್ಕದಲ್ಲಿದ್ದೆ, ರಸೂಲುಲ್ಲಾಹ್(ಸ)ರಿಗೆ ನಿದ್ರೆ ಆವರಿಸಿತು ಮತ್ತು ಅವರು ತಮ್ಮ ಸವಾರಿಯ ಮೇಲೆ ಒಂದು ಬದಿಗೆ ವಾಲಿದರು. ನಾನು ಅವರ ಬಳಿ ಹೋಗಿ, ಅವರನ್ನು ಎಬ್ಬಿಸದೆ ಆಸರೆ ನೀಡಿದೆ. ಅವರು ಸರಿಯಾಗಿ ತಮ್ಮ ಸವಾರಿಯ ಮೇಲೆ ಕುಳಿತುಕೊಂಡರು. ನಂತರ ಅವರು ನಡೆಯುತ್ತಲೇ ಹೋದರು, ಹೆಚ್ಚಿನ ರಾತ್ರಿ ಕಳೆಯಿತು, ಅವರು ಮತ್ತೆ ನಿದ್ರೆಯಿಂದ ತಮ್ಮ ಸವಾರಿಯ ಮೇಲೆ ವಾಲಿದರು. ಅವರು ಹೇಳುತ್ತಾರೆ: ನಾನು ಮತ್ತೆ ಅವರನ್ನು ಎಬ್ಬಿಸದೆ ಆಸರೆ ನೀಡಿದೆ, ಅವರು ಮತ್ತೆ ತಮ್ಮ ಸವಾರಿಯ ಮೇಲೆ ಸರಿಯಾಗಿ ಕುಳಿತುಕೊಂಡರು. ಹೀಗೆಯೇ ನಡೆಯುತ್ತಾ, ಮುಂಜಾನೆಯ ಕೊನೆಯ ಭಾಗ ಬಂತು. ಆಗ ನಬಿ(ಸ) ಮೊದಲೆರಡು ಬಾರಿಗಿಂತ ಹೆಚ್ಚು ವಾಲಿದರು, ಎಷ್ಟರಮಟ್ಟಿಗೆ ಎಂದರೆ ನಬಿ(ಸ) ತಿರುಗಿ ಬೀಳುವಂತಿದ್ದರು. ನಾನು ನಬಿ(ಸ)ರ ಬಳಿ ತಲುಪಿ ಆಸರೆ ನೀಡಿದೆ. ಆಗ ನಬಿ(ಸ) ತಲೆ ಎತ್ತಿ 'ಯಾರು?' ಎಂದು ಕೇಳಿದರು. ನಾನು 'ಅಬೂಖತಾದಾ' ಎಂದು ಹೇಳಿದೆ. ನಬಿ(ಸ) ಕೇಳಿದರು: 'ನೀನು ಯಾವಾಗನಿಂದ ಹೀಗೆ ನನ್ನ ಜೊತೆ ನಡೆಯುತ್ತಿದ್ದೀಯಾ?'. ನಾನು ಹೇಳಿದೆ: 'ರಾತ್ರಿಯಿಂದ ನಾನು ನಿಮ್ಮ ಜೊತೆ ನಡೆಯುತ್ತಿದ್ದೇನೆ'. ಆಗ ನಬಿ(ಸ) ಹೇಳಿದರು: 'ನೀನು ತನ್ನ ಪ್ರವಾದಿಯನ್ನು ರಕ್ಷಿಸಿದಂತೆಯೇ ಅಲ್ಲಾಹನು ನಿನ್ನನ್ನು ರಕ್ಷಿಸಲಿ'. ನಬಿ(ಸ) ಅತ್ಯಂತ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. (ಸಹೀಹ್ ಮುಸ್ಲಿಮ್ ಅನುವಾದ, ಕಿತಾಬುಲ್ ಮಸಾಜಿದ್ ವ ಮವಾಝಿ ಅಸ್ಸಲಾತ್....., ಹದೀಸ್–(311)1091, ಸಂಪುಟ–3, ಪುಟ–165–166, ನೂರ್ ಫೌಂಡೇಷನ್)

ಹಝ್ರತ್ ಪೈಗಂಬರ್(ಸ) ತಮ್ಮ ಕೃತಜ್ಞತೆಯ ಗುಣಮಟ್ಟದ ಎಂತಹ ಮಾದರಿಯನ್ನು ನಮ್ಮ ಮುಂದಿಟ್ಟಿದ್ದಾರೆ ಎಂದು ಒಂದು ವರದಿಯಲ್ಲಿ ಬರುತ್ತದೆ. ಹಝ್ರತ್ ಉಮಾಮ(ರ)ರಿಂದ ವರದಿಯಾಗಿದೆ, ರಸೂಲುಲ್ಲಾಹ್(ಸ) ಹೇಳಿದರು: 'ನನ್ನ ಪ್ರಭು, ಮಕ್ಕಾದ ಕಣಿವೆಯನ್ನು ನನಗಾಗಿ ಚಿನ್ನವನ್ನಾಗಿ ಮಾಡುವ ಪ್ರಸ್ತಾಪ ಮುಂದಿಟ್ಟನು. ಆಗ ನಾನು ಹೇಳಿದೆ, ಹೇ ನನ್ನ ಪ್ರಭೂ, ಬೇಡ, ಬದಲಾಗಿ ನಾನು ಒಂದು ದಿನ ಹಸಿವಿನಿಂದಿರಲು ಮತ್ತು ಒಂದು ದಿನ ಹೊಟ್ಟೆತುಂಬಾ ತಿನ್ನಲು ಬಯಸುತ್ತೇನೆ. ನಾನು ಹೊಟ್ಟೆತುಂಬ ತಿನ್ನುವಾಗ ನಿನ್ನ ಪ್ರಶಂಸೆ ಮತ್ತು ಸ್ತುತಿ ಮಾಡಲೆಂದು ಹಾಗೂ ನಿನಗೆ ಕೃತಜ್ಞತೆ ಸಲ್ಲಿಸಲು ಬಯಸುತ್ತೇನೆ, ಮತ್ತು ನಾನು ಹಸಿವಿನಿಂದ ಇರುವಾಗ ನಿನ್ನ ಸನ್ನಿಧಿಯಲ್ಲಿ ವಿನಯದಿಂದ ಬೇಡಿಕೊಳ್ಳಲೆಂದು ಮತ್ತು ನಿನ್ನೊಡನೆ ಪ್ರಾರ್ಥಿಸಲು ಬಯಸುತ್ತೇನೆ.' ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ)ರಿಂದ ವರದಿಯಾಗಿದೆ, ಅವರು ಹೇಳುತ್ತಾರೆ: ರಸೂಲುಲ್ಲಾಹ್(ಸ) ನೀರು ಕುಡಿಯುವಾಗ, ಪಾತ್ರೆಯಿಂದ ಬಾಯಿ ತೆಗೆದು ಮೂರು ಗುಟುಕುಗಳಲ್ಲಿ ಕುಡಿಯುತ್ತಿದ್ದರು. ಒಂದೇ ಉಸಿರಿನಲ್ಲಿ ಇಡೀ ಗ್ಲಾಸ್ ಕುಡಿಯುತ್ತಿರಲಿಲ್ಲ, ಬದಲಾಗಿ ಮೂರು ಗುಟುಕುಗಳಲ್ಲಿ ನೀರು ಕುಡಿಯುತ್ತಿದ್ದರು. ಪ್ರತಿಯೊಂದು ಗುಟುಕಿನಲ್ಲೂ ಅಲ್ಲಾಹನ ಪ್ರಶಂಸೆ ಮಾಡುತ್ತಿದ್ದರು ಮತ್ತು ಕೊನೆಯ ಗುಟುಕಿನ ನಂತರ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರು. (ಕಿತಾಬ್ ಅಖ್ಲಾಖುನ್ನಬೀ(ಸ) ವ ಆದಾಬಿಹಿ, ಇಬ್ನೆ ಹಯಾನುಲ್ ಅಸ್‌ಬಹಾನಿ, ಪುಟ–191, ದಾರುಲ್ ಕಿತಾಬುಲ್ ಅರಬಿ 1986)

'ನೀರಿನ ಒಂದು ಗುಟುಕು ಕುಡಿದರೂ ಕೃತಜ್ಞತೆ ಸಲ್ಲಿಸಿ, ಅವನ ಪ್ರಶಂಸೆ ಮಾಡುತ್ತಿದ್ದರು'. ಇದು ಕೃತಜ್ಞತೆಯೊಂದಿಗೆ ನೀರು ಕುಡಿಯುವ ವಿಧಾನವಾಗಿದೆ. ಏಕಾಏಕಿ ಕುಡಿಯುವ ಬದಲು ನಿಧಾನವಾಗಿ ಕುಡಿಯುವುದು ಆರೋಗ್ಯಕ್ಕೂ ಅಗತ್ಯವಾಗಿದೆ.

ಬುಖಾರಿಯಲ್ಲಿ ಹಝ್ರತ್ ಅಬೂಹುರೈರಾ(ರ)ರ ಒಂದು ಸುದೀರ್ಘ ವರದಿಯಿದೆ. ಅವರು ಹೇಳುತ್ತಾರೆ: 'ಯಾರ ಹೊರತು ಬೇರೆ ಆರಾಧ್ಯರಿಲ್ಲವೋ ಆ ಅಲ್ಲಾಹನ ಮೇಲಾಣೆ. ಒಂದು ದಿನ ಹಸಿವಿನಿಂದಾಗಿ ನನ್ನ ಹೊಟ್ಟೆಗೆ ಆಸರೆ ನೀಡಲು ಅದನ್ನು ನೆಲಕ್ಕೆ ಒತ್ತಿಕೊಂಡಿದ್ದೆ. ನಾನು ನನ್ನ ಹೊಟ್ಟೆಗೆ ಆಸರೆ ನೀಡಲು ನೆಲಕ್ಕೆ ಒತ್ತಿಕೊಂಡಿರುತ್ತಿದ್ದೆ ಮತ್ತು ಕೆಲವೊಮ್ಮೆ ಹಸಿವಿನಿಂದ ನನ್ನ ಹೊಟ್ಟೆಗೆ ಕಲ್ಲು ಕಟ್ಟಿಕೊಳ್ಳುತ್ತಿದ್ದೆ.' ಇದು ಕೇವಲ ಒಂದು ದಿನದ ಮಾತಲ್ಲ, ಹಲವು ದಿನಗಳ ಮಾತಾಗಿತ್ತು. ಅವರು ಹೇಳುತ್ತಾರೆ: 'ಒಂದು ದಿನ ನಾನು ಜನರ ದಾರಿಯಲ್ಲಿ ಕುಳಿತೆ, ನನ್ನ ಸ್ಥಿತಿ ಬಹಳ ಹದಗೆಟ್ಟಿತ್ತು. ಜನರು ಬರುವ ದಾರಿಯದು. ಅಲ್ಲಿಂದ ಹಝ್ರತ್ ಅಬೂಬಕರ್(ರ) ಹಾದುಹೋದರು. ನಾನು ಅವರೊಡನೆ ಪವಿತ್ರ ಖುರ್‌ಆನಿನ ಒಂದು ಆಯತ್ ಬಗ್ಗೆ ಕೇಳಿದೆ. ಬಡವರ ಬಗ್ಗೆ ಕಾಳಜಿ ವಹಿಸುವ, ಬೇಡದವರ ಬಗ್ಗೆ, ಹಸಿದ ಜನರ ಬಗ್ಗೆಯಿರುವ ಆಯತ್. ಅವರು ನನಗೆ ಅದರ ಅರ್ಥವನ್ನು ವಿವರಿಸಿ ಹೊರಟುಹೋದರು. ಅದರ ನಂತರ ಹಝ್ರತ್ ಉಮರ್(ರ) ಹಾದುಹೋದರು. ಅವರೂ ಅದೇ ರೀತಿ ನನಗೆ ಅದರ ಅರ್ಥವನ್ನು ವಿವರಿಸಿ ಹೊರಟುಹೋದರು. ಅದರ ನಂತರ ಹಝ್ರತ್ ಪೈಗಂಬರ್(ಸ) ನನ್ನ ಬಳಿಯಿಂದ ಹಾದುಹೋದರು ಮತ್ತು ಅವರು ನನ್ನನ್ನು ನೋಡಿದಾಗ ಮುಗುಳ್ನಕ್ಕರು, ನನ್ನ ಮುಖದ ಸ್ಥಿತಿ ಮತ್ತು ನನ್ನ ಒಳಗಿನ ಸ್ಥಿತಿಯನ್ನು ಅವರು ಅರ್ಥಮಾಡಿಕೊಂಡರು. 'ಅಬಾ ಹಿರ್' ಎಂದು ಕರೆದರು. ನಾನು 'ಹಾಜರಿದ್ದೇನೆ, ಯಾ ರಸೂಲಲ್ಲಾಹ್' ಎಂದೆ. 'ನನ್ನ ಹಿಂದೆ ಬಾ' ಎಂದು ಅವರು ಹೇಳಿದರು. ಅವರು ಮನೆಗೆ ಹೋದರು, ನಾನೂ ಅವರ ಹಿಂದೆ ಹಿಂದೆ ಹೋದೆ. ಅವರು ಒಳಗೆ ಹೋದರು, ನನಗೂ ಒಳಗೆ ಹೋಗಲು ಅನುಮತಿ ನೀಡಿದರು. ಒಳಗೆ ಅವರ ಕೋಣೆಯಲ್ಲಿ ಹಾಲಿನ ಬಟ್ಟಲೊಂದು ಇತ್ತು. 'ಇದು ಎಲ್ಲಿಂದ ಬಂತು?' ಎಂದು ಮನೆಯವರೊಡನೆ ಕೇಳಿದರು. ಅವರು 'ಯಾರೋ ಉಡುಗೊರೆಯಾಗಿ ನೀಡಿದ್ದಾರೆ' ಎಂದರು. 'ಅಬಾ ಹಿರ್' ಎಂದು ಕರೆದರು. ನಾನು 'ಹಾಜರಿದ್ದೇನೆ, ಯಾ ರಸೂಲಲ್ಲಾಹ್' ಎಂದೆ. ಅವರು 'ಅಹ್ಲೆ ಸುಫ್ಫಾರ ಬಳಿ ಹೋಗಿ ಅವರನ್ನು ನನ್ನ ಬಳಿ ಕರೆದುಕೊಂಡು ಬಾ' ಎಂದರು. ಇವರು ಹೆಚ್ಚಾಗಿ ಹಸಿವಿನಿಂದಲೇ ಇರುತ್ತಿದ್ದ ಮತ್ತು ಸದಾ ಹೊರಗೇ ಕುಳಿತಿರುತ್ತಿದ್ದ ಜನರಾಗಿದ್ದರು. ಜನರು

ಅವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಊಟ ಇತ್ಯಾದಿ ನೀಡುತ್ತಿದ್ದರು. ಅವರನ್ನು ಕರೆತರುವಂತೆ ನೀವು ಆದೇಶಿಸಿದರು. ಅಬುಹುರೈರ(ರ) ಹೇಳುತ್ತಾರೆ: 'ನನಗೆ ಅವರನ್ನು ಕರೆಯುವುದು ಇಷ್ಟವಾಗಲಿಲ್ಲ. ನಾನು ಹೀಗೆ ಯೋಚಿಸಿದೆ: ಅಹ್ಲೆ ಸುಫ್ಫಾರಿಗೆ ಇಷ್ಟು ಸ್ವಲ್ಪ ಹಾಲು ಹೇಗೆ ಸಾಕಾಗುವುದು? ನಾನು ಈ ಹಾಲನ್ನು ಕುಡಿಯಲು ಹೆಚ್ಚು ಅರ್ಹನಾಗಿದ್ದೆ, ಇದರಿಂದ ನನಗೆ ಶಕ್ತಿ ಬರುತ್ತಿತ್ತು. ಅವರು ಬಂದರೆ ಮತ್ತು ಅವರಿಗೆ ನೀಡಲು ನಬಿ(ಸ) ನನಗೆ ಆದೇಶಿಸಿದರೆ, ನಾನು ನೀಡಲೇಬೇಕಾಗುತ್ತದೆ. ಅನಂತರ ಈ ಹಾಲಿನಿಂದ ನನಗೇನಾದರೂ ಸಿಗುವುದು ಎಂದು ನನಗೆ ಅನಿಸುವುದಿಲ್ಲ'. ಆದರೆ ಅಲ್ಲಾಹನು ಮತ್ತು ಅವನ ರಸೂಲ್(ಸ)ರ ವಿಧೇಯತೆಯ ಹೊರತು ಬೇರೆ ದಾರಿಯಿರಲಿಲ್ಲ. ಇದಲ್ಲದೆ ಬೇರೆ ದಾರಿಯಿರಲಿಲ್ಲ. ಕೊನೆಗೆ ನಾನು ಅವರ ಬಳಿ ಹೋಗಿ ಅವರನ್ನು ಕರೆದೆ, ಅಹ್ಲೆ ಸುಫ್ಫಾದವರು ಬಂದರು ಮತ್ತು ತಮ್ಮ ಜಾಗದಲ್ಲಿ ಕುಳಿತುಕೊಂಡರು. 'ಅಬಾ ಹಿರ್, ಅಬೂ ಹುರೈರಾ' ಎಂದು ನಬಿ(ಸ) ಕರೆದರು. 'ಹಾಜರಿದ್ದೇನೆ, ಯಾ ರಸೂಲಲ್ಲಾಹ್' ಎಂದು ನಾನು ಹೇಳಿದೆ. 'ಇದನ್ನು ತೆಗೆದುಕೊಂಡು ಅವರಿಗೆ ಕೊಡು' ಎಂದು ನಬಿ(ಸ) ಹೇಳಿದರು. ಅವರು ಹೇಳುತ್ತಾರೆ: 'ನಾನು ಆ ಬಟ್ಟಲನ್ನು ತೆಗೆದುಕೊಂಡೆ. ಒಬ್ಬನಿಗೆ ಕೊಡುತ್ತಿದ್ದೆ, ಅವನು ಹೊಟ್ಟೆತುಂಬಾ ಕುಡಿಯುತ್ತಿದ್ದನು, ನಂತರ ಎರಡನೇ, ಮೂರನೇ ಹೀಗೆ ಕುಡಿಯುತ್ತಾ ಹೋದರು. ಕೊನೆಗೆ ನಬಿ(ಸ)ರ ಬಳಿ ತಲುಪುವಷ್ಟರಲ್ಲಿ, ಅಲ್ಲಿ ಕುಳಿತಿದ್ದವರೆಲ್ಲರೂ ಹೊಟ್ಟೆತುಂಬಾ ಕುಡಿದಿದ್ದರು, ಅವರು ಚೆನ್ನಾಗಿ ಹಾಲನ್ನು ಕುಡಿದಿದ್ದರು. ನಬಿ(ಸ) ಆ ಬಟ್ಟಲನ್ನು ತೆಗೆದುಕೊಂಡು ತಮ್ಮ ಕೈಯಲ್ಲಿಟ್ಟುಕೊಂಡರು, ನನ್ನ ಕಡೆ ನೋಡಿ ಮುಗುಳ್ನಕ್ಕು, 'ಅಬೂ ಹುರೈರಾ' ಎಂದರು. ನಾನು 'ಹಾಜರಿದ್ದೇನೆ, ಯಾ ರಸೂಲಲ್ಲಾಹ್' ಎಂದೆ. ನಬಿ(ಸ) ಹೇಳಿದರು: 'ನಾನು ಮತ್ತು ನೀನು ಉಳಿದಿದ್ದೇವೆ'. ನಾನು ಹೇಳಿದೆ: 'ಯಾ ರಸೂಲಲ್ಲಾಹ್, ನೀವು ನಿಜ ಹೇಳಿದಿರಿ'. 'ಕುಳಿತುಕೋ ಮತ್ತು ಕುಡಿ' ಎಂದು ನಬಿ(ಸ) ಹೇಳಿದರು. ನಾನು ಕುಳಿತುಕೊಂಡೆ ಮತ್ತು ಕುಡಿಯಲಾರಂಭಿಸಿದೆ. 'ಇನ್ನೂ ಕುಡಿ' ಎಂದು ನಬಿ(ಸ) ಹೇಳಿದರು. ನಾನು ಇನ್ನೂ ಕುಡಿದೆ. 'ಇನ್ನೂ ಕುಡಿ' ಎಂದು ಹೇಳುತ್ತಲೇ ಇದ್ದರು. ನಾನು ಎಷ್ಟೊಂದು ಕುಡಿದೆನೆಂದರೆ, ಕೊನೆಗೆ ನಾನು 'ಇನ್ನು ಸಾಧ್ಯವಿಲ್ಲ, ನಿಮ್ಮನ್ನು ಸತ್ಯದೊಂದಿಗೆ ಕಳುಹಿಸಿದವನ ಆಣೆ, ಈಗ ಇದನ್ನು ಇಳಿಸಲು ನನಗೆ ಯಾವುದೇ ದಾರಿಯಿಲ್ಲ' ಎಂದೆ. ಹೊಟ್ಟೆ ಸಂಪೂರ್ಣವಾಗಿ ತುಂಬಿಹೋಗಿತ್ತು. 'ನನಗೆ ಕೊಡು' ಎಂದು ನಬಿ(ಸ) ಹೇಳಿದರು. ನಾನು ಬಟ್ಟಲನ್ನು ನಬಿ(ಸ)ರಿಗೆ ನೀಡಿದೆ. ನಬಿ(ಸ) ಹಸಿವಿನಿಂದ ಇದ್ದರೂ, ಮೊದಲು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿದರು ಮತ್ತು ಆ ಉಳಿದ ಹಾಲನ್ನು ಕುಡಿದರು. ಇದು ನಬಿ(ಸ)ರ ಕೃತಜ್ಞತೆಯಾಗಿತ್ತು ಮತ್ತು ಆ ಕೃತಜ್ಞತೆಯಿಂದಾಗಿ ಅಲ್ಲಾಹನು ಎಂತಹ ಬರಕತ್ ನೀಡಿದನೆಂದರೆ, ಎಲ್ಲ ಸಹಾಬಿಯರು ಕುಡಿದರು ಮತ್ತು ನಬಿ(ಸ) ಕೂಡ ಅದರಿಂದ ತಮ್ಮ ಹಸಿವನ್ನು ನೀಗಿಸಿದರು.'

ಹಝ್ರತ್ ಆಯಿಶಾ(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ಹೇಳಿದರು, ಯಾರ ಮೇಲಾದರೂ ಉಪಕಾರ ಮಾಡಲಾದರೆ, ಅವನು ಅದಕ್ಕೆ ಪ್ರತಿಫಲ ನೀಡಬೇಕು. ಮತ್ತು ಅದಕ್ಕೆ ಶಕ್ತಿಯಿಲ್ಲದವನು ಆ ಉಪಕಾರವನ್ನು ಜನರ ಮುಂದೆ ಪ್ರಸ್ತಾಪಿಸಬೇಕು. ಏಕೆಂದರೆ ಯಾರು ಪ್ರಸ್ತಾಪಿಸುತ್ತಾನೋ ಅವನು ಕೃತಜ್ಞತೆ ಸಲ್ಲಿಸುತ್ತಾನೆ. ಮತ್ತು ಯಾರು ತನಗೆ ಇಲ್ಲದ ಹಿರಿಮೆಯನ್ನು ತಾನೇ ಕೃತಕವಾಗಿ ಆರೋಪಿಸಿಕೊಳ್ಳುತ್ತಾನೋ, ಅವನು ಸುಳ್ಳಿನ ಎರಡು ಉಡುಪುಗಳನ್ನು ಧರಿಸಿದ ವ್ಯಕ್ತಿಯಂತಾಗುತ್ತಾನೆ, ಅಂದರೆ ತಲೆಯಿಂದ ಕಾಲಿನವರೆಗೆ ಸುಳ್ಳನಾಗಿದ್ದಾನೆ. (ಮುಸ್ನದ್ ಇಮಾಮ್ ಅಹ್ಮದ್ ಬಿನ್ ಹಂಬಲ್, ಮುಸ್ನದ್ ಆಯಿಶಾ, ಸಂಪುಟ-8, ಪುಟ-142-143, ಹದೀಸ್-25100, ಆಲಮುಲ್ ಕುತುಬ್)

ಒಂದು ವರದಿಯಲ್ಲಿ ಬರುತ್ತದೆ: ನಬಿ(ಸ)ರ ಸೋದರಮಾವ ಅಸ್ವದ್ ಬಿನ್ ವಹಬ್ ಬಿನ್ ಅಬ್ದ್ ಮನಾಫ್ ಬಿನ್ ಜುಹ್ರಾ ನಬಿ(ಸ) ಸನ್ನಿಧಿಗೆ ಹಾಜರಾಗಲು ಅನುಮತಿ ಕೇಳಿದರು. ನಬಿ(ಸ) ಹೇಳಿದರು: 'ಹೇ ನನ್ನ ಮಾವ, ಒಳಗೆ ಬನ್ನಿ.' ಅವರು ಒಳಗೆ ಬಂದರು. ರಸೂಲುಲ್ಲಾಹ್(ಸ) ಅವರಿಗಾಗಿ ತಮ್ಮ ಚಾದರವನ್ನು ಹಾಸಿದರು. 'ಇದರ ಮೇಲೆ ಕುಳಿತುಕೊಳ್ಳಿ, ಏಕೆಂದರೆ ಸೋದರಮಾವ ತಂದೆಯ ಸ್ಥಾನದಲ್ಲಿರುತ್ತಾನೆ. ಹೇ ಮಾವ, ಯಾರ ಮೇಲಾದರೂ ಉಪಕಾರ ಮಾಡಲಾದರೆ ಮತ್ತು ಅವನು ಕೃತಜ್ಞತೆ ಸಲ್ಲಿಸದಿದ್ದರೆ, ಕನಿಷ್ಠ ಆ ಉಪಕಾರದ ಪ್ರಸ್ತಾಪವಾದರೂ ಮಾಡಬೇಕು. ಏಕೆಂದರೆ ಅವನು ಅದನ್ನು ಪ್ರಸ್ತಾಪಿಸುವಾಗ, ಅವನು ಕೃತಜ್ಞತೆ ಸಲ್ಲಿಸಿದಂತೆಯೇ'.
(ಅಸ್ಸೀರತುಲ್ ಹಲಬೀಯಾ, ಸಂಪುಟ-2, ಪುಟ-313, ದಾರುಲ್ ಕುತುಬ್ ಇಲ್ಮಿಯಾ 2008)

ಕೃತಜ್ಞತೆಯ ಈ ಮಗ್ಗುಲನ್ನು ಹಝ್ರತ್ ಪೈಗಂಬರ್(ಸ)ರ ಜೀವನ ಚರಿತ್ರೆಯಲ್ಲಿ ನಾವು ಹೇಗೆ ಕಾಣುತ್ತೇವೆ ಎಂಬುದಕ್ಕೆ ಹಲವು ಘಟನೆಗಳಿವೆ. ನಬಿ(ಸ) ಯಾವಾಗಲೂ ತಮ್ಮ ಉಪಕಾರಿಗಳನ್ನು ಸ್ಮರಿಸುತ್ತಿದ್ದರು ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಅವರ ಪ್ರಸ್ತಾಪ ಮಾಡುತ್ತಿದ್ದರು.

ಉದಾಹರಣೆಗೆ, ನಬಿ(ಸ)ರ ಧರ್ಮಪತ್ನಿಯಾಗಿದ್ದ ಹಝ್ರತ್ ಖದೀಜಾ(ರ), ಹಜ್ಜ್ ಹಜ್ಜ್‌ಗೂ ಹಝ್ರತ್ ಪೈಗಂಬರ್(ಸ)ರನ್ನು ಗೌರವಿಸಿ ಅವರೊಂದಿಗೆ ಉತ್ತಮವಾಗಿ ವರ್ತಿಸಿದ್ದರು. ಅವರು ಮಕ್ಕಾದ ಶ್ರೀಮಂತ ಮಹಿಳೆಯಾಗಿದ್ದರು. ನಬಿ(ಸ) ಅವರೊಂದಿಗೆ ಅವರ ವಿವಾಹವಾದಾಗ, ಅವರು ತಮ್ಮ ಸಂಪೂರ್ಣ ಸಂಪತ್ತನ್ನು ನಬಿ(ಸ)ರ ಪಾದಗಳಿಗೆ ಅರ್ಪಿಸಿದರು ಮತ್ತು 'ನಿಮಗೆ ಇಷ್ಟಬಂದಂತೆ ಬಳಸಿ' ಎಂದು ಹೇಳಿದರು. ನಂತರ ಪ್ರವಾದಿತ್ವದ ವಾದದ ಬಳಿಕ ಪ್ರತಿ ಕಷ್ಟ ಮತ್ತು ಪ್ರತಿ ಬಿಕ್ಕಟ್ಟಿನಲ್ಲಿ ಸಂಪೂರ್ಣ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ನಬಿ(ಸ)ರಿಗೆ ಬೆಂಬಲವಾಗಿ ನಿಂತರು, ಕೊನೆಗೆ ನುಬುವ್ವತ್‌ನ ಹತ್ತನೇ ವರ್ಷದಲ್ಲಿ ಅವರು ನಿಧನರಾದರು. ನಬಿ(ಸ) ತಮ್ಮ ಈ ನಿಷ್ಠಾವಂತ ಪತ್ನಿಯ ಉಪಕಾರಗಳನ್ನು ತಮ್ಮ ಕೊನೆಯುಸಿರು ಇರುವ ವರೆಗೂ ಸ್ಮರಿಸಿದರು ಮತ್ತು ಸದಾ ಅವರ ಸದ್ಗುಣಗಳನ್ನು ಪ್ರಸ್ತಾಪಿಸುತ್ತಿದ್ದರು. ಎಷ್ಟೊಂದು ಪ್ರಸ್ತಾಪಿಸುತ್ತಿದ್ದರೆಂದರೆ, ನಬಿ(ಸ)ರ ಇತರ ಪತ್ನಿಯರಿಗೂ ಹೊಟ್ಟೆಕಿಚ್ಚಾಗುತ್ತಿತ್ತು.

ಹಝ್ರತ್ ಆಯಿಶಾ(ರ) ವಿವರಿಸುತ್ತಾರೆ: ನಬಿ(ಸ) ಹಝ್ರತ್ ಖದೀಜಾ(ರ)ರ ಬಗ್ಗೆ ಪ್ರಸ್ತಾಪಿಸುವಾಗ, ಅವರನ್ನು ಹೊಗಳುತ್ತಿದ್ದರು ಮತ್ತು ಅತ್ಯಂತ ಉತ್ತಮವಾಗಿ ಹೊಗಳುತ್ತಿದ್ದರು. ಒಂದು ದಿನ ನನಗೆ ಹೊಟ್ಟೆಕಿಚ್ಚಾಯಿತು ಮತ್ತು ನಾನು ನಬಿ(ಸ)ರೊಡನೆ, 'ಅಲ್ಲಾಹನು ನಿಮಗೆ ಅವರಿಗಿಂತ ಉತ್ತಮ ಪತ್ನಿಯರನ್ನು ದಯಪಾಲಿಸಿದ್ದರೂ, ನೀವು ಆ ವೃದ್ಧೆಯನ್ನೇಕೆ ಸದಾ ಸ್ಮರಿಸುತ್ತಿರುತ್ತೀರಿ?' ಎಂದು ಕೇಳಿದೆ. ಆಗ ನಬಿ(ಸ) ಹೇಳಿದರು: 'ಅಲ್ಲಾಹನು ನನಗೆ ಅವಳಿಗಿಂತ ಉತ್ತಮ ಪತ್ನಿಯನ್ನು ನೀಡಿಲ್ಲ. ಏಕೆಂದರೆ ಇತರರು ನನ್ನನ್ನು ನಿರಾಕರಿಸಿದಾಗ ಖದೀಜಾ ನನ್ನನ್ನು ನಂಬಿದಳು. ಜನರು ನನ್ನನ್ನು ನಿರಾಕರಿಸಿದಾಗ ಅವಳು ನನ್ನನ್ನು ನಂಬಿದಳು. ಜನರು ನನ್ನನ್ನು ಸಂಪತ್ತಿನಿಂದ ವಂಚಿತರನ್ನಾಗಿಸಿದಾಗ, ಅವಳು ತನ್ನ ಸಂಪತ್ತಿನಿಂದ ನನಗೆ ಸಹಾಯ ಮಾಡಿದಳು ಮತ್ತು ಅಲ್ಲಾಹನು ಅವಳ ಮೂಲಕವೇ ನನಗೆ ಮಕ್ಕಳನ್ನು ಕರುಣಿಸಿದನು, ಆದರೆ ಇತರ ಮಹಿಳೆಯರಿಂದ ನನಗೆ ಮಕ್ಕಳನ್ನು ನೀಡಲಿಲ್ಲ.'
(ಮುಸ್ನದ್ ಇಮಾಮ್ ಅಹ್ಮದ್ ಬಿನ್ ಹಂಬಲ್, ಮುಸ್ನದ್ ಆಯಿಶಾ, ಸಂಪುಟ-8, ಪುಟ-204, ಹದೀಸ್-25376, ಆಲಮುಇಲ್ ಕುತುಬ್ 1998)

ನಬಿ(ಸ) ತಮ್ಮ ಇಡೀ ಜೀವನದಲ್ಲಿ ಅವರ ಸೇವೆಗಳನ್ನು ಸ್ಮರಿಸಿದರು ಮತ್ತು ಸದಾ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಿದ್ದರು.

ಅದೇ ರೀತಿ, ಯಾವ ರೀತಿಯಲ್ಲಾದರೂ ಸಹಾಯ ಮಾಡಿದ ತಮ್ಮ ಸ್ನೇಹಿತರಿಗೆ ಅವರು ಬಹಳ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಿದ್ದರು. ಒಮ್ಮೆ ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬೂಬಕರ್(ರ) ನಡುವೆ ಭಿನ್ನಾಭಿಪ್ರಾಯ ಉಂಟಾಯಿತು. ಈ ವಿಷಯವು ರಸೂಲುಲ್ಲಾಹ್(ಸ)ರಿಗೆ ತಲುಪಿದಾಗ, ಅವರು ಇತರರಿಗೆ ಹಝ್ರತ್ ಅಬೂಬಕರ್(ರ)ರ ದೊಡ್ಡ ದೊಡ್ಡ ಉಪಕಾರಗಳನ್ನು ನೆನಪಿಸಿದರು ಮತ್ತು ಸಹಾಬಿಯರೊಡನೆ ಅವರಿಗೆ ತೊಂದರೆ ಕೊಡದಂತೆ ಉಪದೇಶಿಸಿದರು. ಕೊನೆಗೆ ಇಬ್ಬರೂ ವಿಷಯವನ್ನು ಹಝ್ರತ್ ಪೈಗಂಬರ್(ಸ)ರ ಬಳಿ ತಂದರು, ಇಬ್ಬರಿಗೂ ತಪ್ಪಿನ ಅರಿವಾಗಿತ್ತು. ಹಝ್ರತ್ ಅಬೂಬಕರ್(ರ), ನಾನು ಹಝ್ರತ್ ಉಮರ್(ರ) ಮೇಲೆ ದೌರ್ಜನ್ಯವೆಸಗಿದೆ, ನಾನು ಕ್ಷಮೆಯಾಚಿಸುತ್ತೇನೆ ಎನ್ನುತ್ತಿದ್ದರು. ಹಝ್ರತ್ ಉಮರ್(ರ), ನಾನು ದೌರ್ಜನ್ಯವೆಸಗಿದೆ, ಕ್ಷಮೆಯಾಚಿಸುತ್ತೇನೆ ಎನ್ನುತ್ತಿದ್ದರು. ಹೇಗಿದ್ದರೂ ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ)ರ ಮಾತುಗಳಿಗೆ ಗಮನಹರಿಸಲಿಲ್ಲ, ಬದಲಾಗಿ ಅವರು ಹಝ್ರತ್ ಅಬೂಬಕರ್(ರ)ರೊಂದಿಗೆ ಏಕೆ ವಾಗ್ವಾದ ಮಾಡಿದರು ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಂತರ ನಬಿ(ಸ), ಹೀಗೆ ಹೇಳಿದರು: 'ಅಬೂಬಕರ್, ಅಲ್ಲಾಹನು ನಿಮ್ಮ ತಪ್ಪುಗಳನ್ನು ಮುಚ್ಚಿಹಾಕಲಿ ಮತ್ತು ಕ್ಷಮಿಸಲಿ'. ನಂತರ ಹಝ್ರತ್ ಉಮರ್(ರ) ಕೂಡ ಪಶ್ಚಾತ್ತಾಪಪಟ್ಟು ಹಝ್ರತ್ ಅಬೂಬಕರ್(ರ)ರ ಮನೆಗೆ ಹೋದರು. ಇಬ್ಬರೂ ಒಟ್ಟಿಗೆ ಕುಳಿತಿದ್ದಾಗ ನಬಿ(ಸ) ಹೀಗೆ ಹೇಳಿದರು: 'ಹೇ ಜನರೇ, ಅಲ್ಲಾಹನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನು. ನೀವು ನನ್ನನ್ನು ಸುಳ್ಳುಗಾರ ಎಂದಿರಿ ಮತ್ತು ಅಬೂಬಕರ್ ಸತ್ಯವಂತನೆಂದರು. ಅವರು ತಮ್ಮ ಪ್ರಾಣ ಮತ್ತು ಸಂಪತ್ತಿನೊಂದಿಗೆ ನನ್ನ ಬಗ್ಗೆ ಸಹಾನುಭೂತಿ ತೋರಿದರು. ಹಾಗಾಗಿ ನೀವು ನನ್ನ ಒಡನಾಡಿಯನ್ನು ನನಗಾಗಿ ಬಿಡುತ್ತೀರೋ ಇಲ್ಲವೋ?' ನೀವು ಎರಡು ಬಾರಿ ಹೀಗೆ ಹೇಳಿದರು. ಅದರ ನಂತರ ಹಝ್ರತ್ ಅಬೂಬಕರ್(ರ)ರಿಗೆ ಎಂದಿಗೂ ತೊಂದರೆ ನೀಡಲಾಗಲಿಲ್ಲ. ಯಾವಾಗಲೂ ಅವರ ಬಗ್ಗೆ ಕಾಳಜಿ ವಹಿಸಲಾಗುತ್ತಿತ್ತು.

(ಸಹೀಹ್ ಅಲ್‌ಬುಖಾರಿ, ಕಿತಾಬ್ ಫಝಾಯಿಲ್ ಅಸ್ಸಹಾಬ ಅನ್ನಬೀ(ಸ), ಹದೀಸ್-3661, ಅನುವಾದ ಸಂಪುಟ-7, ಪುಟ-153-154, ನಝಾರತ್ ಇಶಾಅತ್)

ಹಝ್ರತ್ ಅಬೂ ಸಯೀದ್ ಖುದ್ರಿ(ರ)ರಿಂದ ವರದಿಯಾಗಿದೆ, ಅವರು ಹೇಳಿದರು: ರಸೂಲುಲ್ಲಾಹ್(ಸ) ಜನರನ್ನು ಉದ್ದೇಶಿಸಿ ಮಾತನಾಡಿದರು ಮತ್ತು ಹೀಗೆ ಹೇಳಿದರು: 'ಅಲ್ಲಾಹನು ಒಬ್ಬ ದಾಸನಿಗೆ ಲೌಕಿಕತೆಯನ್ನು ಆರಿಸಿಕೊಳ್ಳುವ ಅಥವಾ ಅಲ್ಲಾಹನ ಬಳಿ ಇರುವ ಅನುಗ್ರಹವನ್ನು ಆರಿಸಿಕೊಳ್ಳುವ ಆಯ್ಕೆಯನ್ನು ನೀಡಿದನು. ಆ ದಾಸನು ಅಲ್ಲಾಹನ ಬಳಿ ಇರುವ ಅನುಗ್ರಹವನ್ನು

ಆರಿಸಿಕೊಂಡನು'. ಅಬೂ ಸಯೀದ್(ರ) ಹೇಳುತ್ತಾರೆ: ಇದನ್ನು ಕೇಳಿ ಹಝ್ರತ್ ಅಬೂಬಕರ್(ರ) ಅಳಲಾರಂಭಿಸಿದರು. ರಸೂಲುಲ್ಲಾಹ್(ಸ) ಕೇವಲ ಆಯ್ಕೆ ನೀಡಲಾದ ಒಬ್ಬ ದಾಸನ ಬಗ್ಗೆ ಪ್ರಸ್ತಾಪಿಸುತ್ತಿದ್ದಾರೆ ಮತ್ತು ಹಝ್ರತ್ ಅಬೂಬಕರ್ ಅದನ್ನು ಕೇಳಿ ಅಳಲಾರಂಭಿಸಿದ್ದು ನಮಗೆ ಆಶ್ಚರ್ಯ ತಂದಿತು. ವಾಸ್ತವದಲ್ಲಿ ಅದು ರಸೂಲುಲ್ಲಾಹ್(ಸ)ರ ಕುರಿತು ಆಗಿತ್ತು, ಅವರಿಗೆ ಆ ಆಯ್ಕೆಯನ್ನು ನೀಡಲಾಗಿತ್ತು. ವರದಿಗಾರರು ಹೇಳುತ್ತಾರೆ, 'ನಮ್ಮ ಸಹಾಬಿಯರಲ್ಲಿ ಹಝ್ರತ್ ಅಬೂಬಕರ್(ರ)ರಿಗೆ ಈ ವಿಷಯದ ಅರಿವು ಅತಿ ಹೆಚ್ಚಾಗಿತ್ತು, ಹಾಗಾಗಿ ಅವರು ಅತ್ತರು.' ರಸೂಲುಲ್ಲಾಹ್(ಸ) ಹೇಳಿದರು: ತಮ್ಮ ಒಡನಾಟದ ದೃಷ್ಟಿಯಿಂದ ಮತ್ತು ಸಂಪತ್ತನ್ನು ಖರ್ಚು ಮಾಡುವ ದೃಷ್ಟಿಯಿಂದ ನಿಮ್ಮಲ್ಲಿ ನನ್ನ ಮೇಲೆ ಅತಿ ಹೆಚ್ಚು ಉಪಕಾರ ಮಾಡಿದವರು ಅಬೂಬಕರ್ ಆಗಿದ್ದಾರೆ. ನಾನು ನನ್ನ ಪ್ರಭುವಿನ ಹೊರತು ಬೇರೆ ಯಾರನ್ನಾದರೂ ಆಪ್ತ ಮಿತ್ರನನ್ನಾಗಿ (ಖಲೀಲ್) ಮಾಡಿಕೊಳ್ಳುವುದಿದ್ದರೆ, ನಾನು ಅಬೂಬಕರ್‌ನನ್ನು ಆರಿಸಿಕೊಳ್ಳುತ್ತಿದ್ದೆ.'

(ಸಹೀಹ್ ಅಲ್‌ಬುಖಾರಿ, ಕಿತಾಬ್ ಫ಼ಝಾಎಲ್ ಅಸ್‌ಹಾಬುನ್ನಬೀ(ಸ), ಬಾಬ್ ಖೌಲನ್ನಬೀ(ಸ)...., ಹದೀಸ್–3654, ಅನುವಾದ ಸಂಪುಟ–7, ಪುಟ–149–150, ನಝಾರತ್ ಇಶಾಅತ್)

ಹಝ್ರತ್ ಅಬೂಬಕರ್(ರ)ರ ಅಳುವಿಕೆಗೆ ಕಾರಣವೇನೆಂದರೆ, ಈ ಮಾತುಗಳನ್ನು ಕೇಳಿ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರನ್ನು ತನ್ನ ಬಳಿಗೆ ಕರೆಯಲು ಬಯಸಿದ್ದಾನೆ ಎಂದು ಅವರಿಗೆ ಅರಿವಾಯಿತು.

ಮುಸ್ಲಿಮರ ಮೇಲೆ ಮಕ್ಕಾದಲ್ಲಿ ವಿವಿಧ ರೀತಿಯ ದೌರ್ಜನ್ಯಗಳನ್ನು ಎಸಗಲಾದಾಗ, ಅವರು ದೇವನ ಆಜ್ಞೆಯ ಮೇರೆಗೆ ಅಬಿಸ್ಸೀನಿಯಾಗೆ ವಲಸೆ ಹೋದರು. ಆ ಸಮಯದಲ್ಲಿ ಅಬಿಸ್ಸೀನಿಯಾದ ರಾಜನು ಅವರಿಗೆ ತನ್ನ ದೇಶದಲ್ಲಿ ಆಶ್ರಯ ನೀಡಿದನು. ರಸೂಲುಲ್ಲಾಹ್(ಸ) ನಜಾಶಿ ರಾಜನ ಈ ಉಪಕಾರವನ್ನು ಸದಾ ಸ್ಮರಿಸಿದರು ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಈ ಉಪಕಾರದ ಕೃತಜ್ಞತೆಯನ್ನು ತಮ್ಮ ಮಾತುಗಳು ಮತ್ತು ಕಾರ್ಯಗಳ ಮೂಲಕ ವ್ಯಕ್ತಪಡಿಸಿದರು. ಅದರಂತೆ ನಜಾಶಿಯ ನಿಯೋಗವು ರಸೂಲುಲ್ಲಾಹ್(ಸ) ಸನ್ನಿಧಿಗೆ ಬಂದಾಗ, ರಸೂಲುಲ್ಲಾಹ್(ಸ)ರನ್ನು ಸ್ವಾಗತಿಸಲು ಎದ್ದು ನಿಂತರು ಮತ್ತು ಹೀಗೆ ಹೇಳಿದರು, 'ಇವರು ನಮ್ಮ ಒಡನಾಡಿಗಳನ್ನು ಬಹಳ ಗೌರವದಿಂದಿರಿಸಿದ್ದರು, ಬಹಳ ಸನ್ಮಾನಿಸಿದ್ದರು. ಅವರ ಈ ಉಪಕಾರದ ಋಣವನ್ನು ನಾನೇ ಸ್ವತಃ ತೀರಿಸುವುದನ್ನು ನಾನು ಇಷ್ಟಪಡುತ್ತೇನೆ.'

(ಅಸ್ಸೀರತುನ್ನಬವೀಯ ಲಿಇಬ್ನೆ ಕಸೀರ್, ಸಂಪುಟ–2, ಪುಟ–31, ಮಕ್ತಬ ದಾರುಲ್ ಮಾರಿಫ಼)

ನಂತರ ಅದೇ ಕೃತಜ್ಞತೆಯ ಭಾವನೆಯಿಂದಾಗಿ ಅವರು ರಾಜನ ಜನಾಝಾ ಗ಼ಾಯಿಬ್ ನಮಾಝ್ ಸಹ ನಿರ್ವಹಿಸಿದರು. ಅದರಂತೆ ಹಝ್ರತ್ ಅಬೂಹುರೈರಾ(ರ)ರಿಂದ ವರದಿಯಾಗಿದೆ, ನಬಿ(ಸ)ರಿಗೆ ನಜಾಶಿಯ ಮರಣದ ಸುದ್ದಿ ತಲುಪಿದಾಗ, ಅವರು ರಾಜನ ಜನಾಝಾ ಗ಼ಾಯಿಬ್ ನಮಾಝ್ ನಿರ್ವಹಿಸಿದರು ಮತ್ತು ಸಹಾಬಿಯರು  ನಬಿ(ಸ) ಹಿಂದೆ ಸಾಲುಗಟ್ಟಿ ನಿಂತರು ಮತ್ತು ಅವರು ಅದರಲ್ಲಿ ನಾಲ್ಕು ತಕ್ಬೀರ್‌ಗಳನ್ನು ಹೇಳಿದರು.

(ಮುಸ್ನದ್ ಅಹ್ಮದ್ ಬಿನ್ ಹಂಬಲ್, ಮುಸ್ನದ್ ಅಬೀ ಹುರೈರಃ, ಸಂಪುಟ–3, ಪುಟ–551, ಹದೀಸ್–9644 ಆಲಮುಲ್ ಕುತುಬ್)

ಅನ್ಸಾರಿಯರ ಕಾರ್ಯದ ಬಗ್ಗೆ ನಬಿ(ಸ)ರ ಕೃತಜ್ಞತೆಯ ಪ್ರದರ್ಶನವು ಒಂದು ವರದಿಯಲ್ಲಿ ಹೀಗೆ ಸಿಗುತ್ತದೆ: ರಸೂಲುಲ್ಲಾಹ್(ಸ)ರ ಪ್ರವಾದಿತ್ವದ ಹದಿಮೂರನೇ ವರ್ಷದಲ್ಲಿ, ನಬಿ(ಸ)ರ ಹಿಜ್ರತ್‌ಗಿಂತ ಮೊದಲು ಮದೀನಾದಿಂದ ಎಪ್ಪತ್ತು ಜನರು ನಬಿ(ಸ)ರ ಕೈಯಲ್ಲಿ ಬೈಅತ್ ಮಾಡಿದರು. ನಬಿ(ಸ) ಮದೀನಾಗೆ ಬಂದರೆ ನಾವು ನಮ್ಮ ಜೀವಾರ್ಪಣೆ ಮಾಡಿ ರಕ್ಷಿಸುತ್ತೇವೆ' ಎಂದು ಪ್ರತಿಜ್ಞೆ ಮಾಡಿದರು. ಈ ಸಂದರ್ಭದಲ್ಲಿ ಓರ್ವ ಅನ್ಸಾರಿ ಸಹಾಬಿ ಹೇಳಿದರು: 'ಯಾ ರಸೂಲಲ್ಲಾಹ್, ಮದೀನಾದ ಯಹೂದಿಯರೊಂದಿಗೆ ನಮ್ಮ ಹಳೆಯ ಸಂಬಂಧಗಳಿವೆ. ನಿಮ್ಮನ್ನು ಬೆಂಬಲಿಸುವುದರಿಂದ ಅವು ಕಡಿದುಹೋಗುವುವು. ಅಲ್ಲಾಹನು ನಿಮಗೆ ವಿಜಯವನ್ನು ನೀಡಿದರೆ ನೀವು ನಮ್ಮನ್ನು ಬಿಟ್ಟು ಮಕ್ಕಾಗೆ ಮರಳಿ ಹೋಗುವಿರಾ.? ನಬಿ(ಸ) ಹೇಳಿದರು: 'ಇಲ್ಲ ಇಲ್ಲ, ಎಂದಿಗೂ ಹಾಗಾಗುವುದಿಲ್ಲ. ನಿಮ್ಮ ರಕ್ತವೇ ನನ್ನ ರಕ್ತ, ನಿಮ್ಮ ಸ್ನೇಹಿತರೇ ನನ್ನ ಸ್ನೇಹಿತರು ಮತ್ತು ನಿಮ್ಮ ಶತ್ರುಗಳೇ ನನ್ನ ಶತ್ರುಗಳು.' (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶಾಮ್, ಪುಟ–315, ದಾರುಲ್ ಕುತುಬ್ ಇಲ್ಮಿಯಾ 2001) (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ–3, ಪುಟ–201, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ಹಝ್ರತ್ ಇಬ್ನು ಅಬ್ಬಾಸ್(ರ)ರಿಂದ ವರದಿಯಾಗಿದೆ, ನಬಿ(ಸ) ಶೌಚಾಲಯಕ್ಕೆ ಹೋದಾಗ ನಾನು ಅವರಿಗಾಗಿ ವುಝೂವಿನ ನೀರನ್ನು ಇಟ್ಟೆ. ಅವರು, 'ಇದನ್ನು ಯಾರು ಇಟ್ಟದ್ದು?' ಎಂದು ಕೇಳಿದರು. ನಾವು ತಿಳಿಸಿದೆವು. ಅದಕ್ಕಾಗಿ ನಬಿ(ಸ) ಅವರಿಗಾಗಿ 'ಅಲ್ಲಾಹುಮ್ಮ ಫಕ್ಕಿಹ್‌ಹು ಫಿದ್ದೀನ್' ಅಂದರೆ, ಹೇ ಅಲ್ಲಾಹ್, ಇವರಿಗೆ ಧರ್ಮದ ಅರಿವನ್ನು ನೀಡು ಎಂದು ಪ್ರಾರ್ಥಿಸಿದರು. (ಸಹೀಹ್ ಬುಖಾರಿ ಅನುವಾದ, ಕಿತಾಬುಲ್ ವುಝೂ, ಹದೀಶ್–143, ಸಂಪುಟ–1, ಪುಟ–233, ನಝಾರತ್ ಇಶಾಅತ್) ನಬಿ(ಸ) ಸಾಮಾನ್ಯ ಕೆಲಸಕ್ಕೂ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಿದ್ದರು.

ಒಂದು ವರದಿಯಿದೆ. ಖೈಬರ್ ಯುದ್ಧದ ನಂತರ ಯಾತ್ರಾ ಮಧ್ಯೆ ಹಝ್ರತ್ ಪೈಗಂಬರ್(ಸ)ರ ವಿವಾಹವು ಹಝ್ರತ್ ಸಫಿಯಾ(ರ)ರೊಂದಿಗೆ ನೆರವೇರಿತು. ವಿವಾಹದ ರಾತ್ರಿ ಹಝ್ರತ್ ಅಬೂ ಅಯ್ಯೂಬ್ ಖಾಲಿದ್ ಬಿನ್ ಝೈದ್(ರ) ಅವರು ರಾತ್ರಿಯಿಡೀ ಹಝ್ರತ್ ಪೈಗಂಬರ್(ಸ)ರ ಡೇರೆಯ ಹೊರಗೆ ಕಾವಲು ಕಾಯ್ದರು. ಬೆಳಿಗ್ಗೆ ರಸೂಲುಲ್ಲಾಹ್(ಸ) ಎಚ್ಚರಗೊಂಡು ಅಬೂ ಅಯ್ಯೂಬ್(ರ) ಹೊರಗೆ ಕಾವಲು ಕಾಯುತ್ತಿರುವುದನ್ನು ನೋಡಿದಾಗ, ಅವರೊಡನೆ ಹೀಗೆ ಕೇಳಿದರು: 'ಹೇ ಅಬೂಅಯ್ಯೂಬ್, ಎಲ್ಲವೂ ಕ್ಷೇಮ ತಾನೇ, ಏನಾಯಿತು?' ಅವರು ಹೇಳಿದರು: 'ಯಾ ರಸೂಲಲ್ಲಾಹ್(ಸ), ಆ ಮಹಿಳೆಯಿಂದ ನಿಮಗೆ ಏನಾದರೂ ಹಾನಿಯಾಗಬಹುದೆಂದು ನನಗೆ ಭಯವಾಯಿತು. ಏಕೆಂದರೆ ಖೈಬರ್ ಯುದ್ಧದಲ್ಲಿ ನೀವು ಆಕೆಯ ತಂದೆ, ಪತಿ ಮತ್ತು ಅವಳ ಜನರನ್ನು ಕೊಂದಿದ್ದೀರಿ. ಅವಳು ಈಗಷ್ಟೇ ಹೊಸದಾಗಿ ಇಸ್ಲಾಮ್ ಸ್ವೀಕರಿಸಿದ್ದಾಳೆ, ಹಾಗಾಗಿ ಆಕೆಯ ಕಡೆಯಿಂದ ನಿಮ್ಮ ಬಗ್ಗೆ ನನಗೆ ಭಯ ಹುಟ್ಟಿತು.' ಅವರ ನಿಷ್ಠೆಯನ್ನು ಕಂಡು ಹಝ್ರತ್ ಪೈಗಂಬರ್(ಸ) ಹೀಗೆ ಪ್ರಾರ್ಥಿಸಿದರು: 'ಹೇ ಅಲ್ಲಾಹ್, ಅಬೂಅಯ್ಯೂಬ್ ರಾತ್ರಿಯಿಡೀ ನನ್ನ ರಕ್ಷಣೆ ಮಾಡಿದಂತೆಯೇ ನೀನು ಅವನ ರಕ್ಷಣೆ ಮಾಡು' (ಅರ್‍ರೌಝು ಅಲ್‌ಉನುಫ್, ಸಂಪುಟ–4, ಪುಟ–85, ಅಬುಅಯ್ಯೂಬ್ ಯಹ್‌ರುಸ್ ಅರ್‍ರಸೂಲ್ ಲೈಲತು......, ದಾರುಲ್ ಕುತುಬ್ ಇಲ್ಮಿಯಾ)

ಮುತ್‌ಇಮ್ ಬಿನ್ ಆದಿ, ಖುರೈಶಿಯರ ಕ್ರೂರ ಒಪ್ಪಂದದ ಪ್ರತಿಯನ್ನು ಹರಿದುಹಾಕಿದ್ದ ಮತ್ತು ತಾಯಿಫ್‌ನಿಂದ ಮರಳುವಾಗ ಹಝ್ರತ್ ಪೈಗಂಬರ್(ಸ)ರಿಗೆ ಆಶ್ರಯ ನೀಡಿ ಮಕ್ಕಾಗೆ ಕರೆತಂದಿದ್ದ ವ್ಯಕ್ತಿಯಾಗಿದ್ದನು. ಅದರಂತೆ ಬದ್ರ್‌ನ ಖೈದಿಗಳು ನಬಿ(ಸ)ರ ಮುಂದೆ ಬಂದಾಗ, ಅವರು ಮುತ್‌ಇಮ್‌ನ ಉಪಕಾರಗಳನ್ನು ಪ್ರಸ್ತಾಪಿಸಿದರು. ಮುಹಮ್ಮದ್ ಬಿನ್ ಜುಬೈರ್(ರ) ತಮ್ಮ ತಂದೆ ಹಝ್ರತ್ ಜುಬೈರ್ ಬಿನ್ ಮುತ್‌ಇಮ್(ರ)ರಿಂದ ವರದಿ ಮಾಡಿದ್ದಾರೆ, ನಬಿ(ಸ) ಬದ್ರ್‌ನ ಖೈದಿಗಳ ಬಗ್ಗೆ ಹೇಳಿದರು: 'ಮುತ್‌ಇಮ್ ಬಿನ್ ಆದಿ ಜೀವಂತವಿದ್ದು ನನ್ನೊಡನೆ ಈ ಹೊಲಸು ಜನರ ಬಗ್ಗೆ ಶಿಫಾರಸು ಮಾಡಿದ್ದರೆ, ನಾನು ಅವನಿಗಾಗಿ ಇವರನ್ನು ಬಿಟ್ಟುಬಿಡುತ್ತಿದ್ದೆ.'

(ಸಹೀಹ್ ಬುಖಾರಿ ಅನುವಾದ, ಕಿತಾಬ್ ಫ಼ರಝುಲ್ ಖುಮ್ಸ್, ಬಾಬ್ ಮಾ ಮನ್ ನಬೀ(ಸ) ಅಲಲ್ ಅಸಾರಿ...., ಹದೀಸ್–3139, ಸಂಪುಟ–5, ಪುಟ–487–488, ನಝಾರತ್ ಇಶಾಅತ್) (ಅಸ್ಸೀರತುಲ್ ಹಲಬೀಯಾ, ಸಂಪುಟ–1, ಪುಟ–507 ಮತ್ತು 487, ಮಕ್ತಬ ದಾರುಲ್ ಕುತುಬ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಕೂಡ ಈ ಘಟನೆಯನ್ನು ಬರೆದಿದ್ದಾರೆ ಮತ್ತು ಈ ಘಟನೆಯನ್ನು ಬರೆದ ನಂತರ ಅವರು ಬರೆದಿದ್ದಾರೆ: ಮುತ್‌ಇಮ್ ಕಟ್ಟಾ ಬಹುದೇವಾರಾಧಕನಾಗಿದ್ದನು ಮತ್ತು ಅದೇ ಸ್ಥಿತಿಯಲ್ಲಿ ಮರಣಹೊಂದಿದನು, ಆದರೆ ಅವನ ಸ್ವಭಾವದಲ್ಲಿ ಸಾತ್ವಿಕತೆ ಇತ್ತು. ಆದ್ದರಿಂದ, ಯಾವ ಖುರೈಶಿಯರ ಕ್ರೂರ ಒಪ್ಪಂದದಿಂದಾಗಿ ಮುಸ್ಲಿಮರು ಅಬೀತಾಲಿಬ್‌ನ ಕಣಿವೆಯಲ್ಲಿ ಬಂಧಿಯಾಗಿದ್ದರೋ, ಅದನ್ನು ಹರಿದುಹಾಕಿದ್ದು ಮುತ್‌ಇಮ್ ಆಗಿದ್ದನು ಮತ್ತು ಹಝ್ರತ್ ಪೈಗಂಬರ್(ಸ) ತಾಯಿಫ್‌ನಿಂದ ಮರಳಿದಾಗಲೂ ಮುತ್‌ಇಮ್‌ರೇ ಆಶ್ರಯ ನೀಡಿ ಮಕ್ಕಾಗೆ ಕರೆತಂದಿದ್ದನು. ಈ ಉಪಕಾರದ ಸ್ಮರಣೆಯಿಂದ ಪ್ರಭಾವಿತರಾಗಿಯೇ ಹಝ್ರತ್ ಪೈಗಂಬರ್(ಸ) ಈ ಮಾತುಗಳನ್ನು ಹೇಳಿದ್ದರು. ವಾಸ್ತವದಲ್ಲಿ, ಹಝ್ರತ್ ಪೈಗಂಬರ್(ಸ)ರ ಒಂದು ವಿಶಿಷ್ಟ ಗುಣವೇನೆಂದರೆ, ಯಾರಾದರೂ ಅವರೊಂದಿಗೆ ಸ್ವಲ್ಪವಾದರೂ ಒಳ್ಳೆಯದನ್ನು ಮಾಡಿದರೆ, ಅವರು ಆತನ ಉಪಕಾರವನ್ನು ಎಂದಿಗೂ ಮರೆಯುತ್ತಿರಲಿಲ್ಲ. ಅವರಿಗೆ ಯಾವಾಗಲೂ, ಆತನ ಉಪಕಾರಕ್ಕೆ ಕೃತಜ್ಞತೆ ಸಲ್ಲಿಸುವ ಅವಕಾಶ ತಮಗೆ ಸಿಗುತ್ತಲೇ ಇರಬೇಕು ಎಂಬ ಆಸೆಯಿರುತ್ತಿತ್ತು. ಲೌಕಿಕ ಜನರಂತೆ, ಒಮ್ಮೆ ಯಾರಿಗಾದರೂ ಉಪಕಾರಕ್ಕೆ ಪ್ರತಿಯಾಗಿ ಒಳ್ಳೆಯದನ್ನು ಮಾಡಿದ ನಂತರ, 'ಸಾಕು, ಈಗ ಉಪಕಾರದ ಋಣ ತೀರಿತು' ಎಂದು ಹೇಳುವವರಾಗಿರಲಿಲ್ಲ, ಬದಲಾಗಿ ಅವರು ಯಾವಾಗಲೂ, ತಮ್ಮ ಇಡೀ ಜೀವನದುದ್ದಕ್ಕೂ ಆ ಉಪಕಾರದ ಋಣ ತೀರಿಸಲು ಪ್ರಯತ್ನಿಸುತ್ತಿದ್ದರು ಅಥವಾ ಪ್ರಸ್ತಾಪಿಸುತ್ತಿದ್ದರು. (ಸೀರತ್ ಖಾತಮನ್ನಬೀಯೀನ್(ಸ), ಪುಟ–365–366)

ಅಬ್ದುಲ್ಲಾ ಬಿನ್ ಅಬೀ ರಬೀಅ ಮಖ್‌ಜೂಮಿ(ರ) ತಮ್ಮ ತಂದೆಯಿಂದ ಮತ್ತು ಅವರು ತಮ್ಮ ಅಜ್ಜನಿಂದ ವರದಿ ಮಾಡುತ್ತಾರೆ: ನಬಿ(ಸ) ಹುನೈನ್ ಯುದ್ಧಕ್ಕಾಗಿ ತೆರಳಿದಾಗ, ಅವರಿಂದ ಮೂವತ್ತು ಅಥವಾ ನಲವತ್ತು ಸಾವಿರ ಸಾಲ ಪಡೆಯಲಾಯಿತು. ಹುನೈನ್‌ನಿಂದ ಮರಳಿದಾಗ ಅದನ್ನು ಪಾವತಿಸಿದರು. ನಂತರ ನಬಿ(ಸ) ಅವರೊಡನೆ ಹೀಗೆ ಹೇಳಿದರು: 'ಅಲ್ಲಾಹನು ನಿನಗಾಗಿ ನಿನ್ನ ಮನೆಯವರಲ್ಲಿ ಮತ್ತು ಸಂಪತ್ತಿನಲ್ಲಿ ಅಭಿವೃದ್ಧಿಯನ್ನು ಕರುಣಿಸಲಿ'. ಸಂಪತ್ತು ಮತ್ತು ಸಾಲದ ಪ್ರತಿಫಲವೆಂದರೆ ಸಂಪೂರ್ಣ ಮರುಪಾವತಿ ಮತ್ತು

ಪ್ರಶಂಸೆಯಾಗಿದೆ, ಅಂದರೆ ಸಾಲ ನೀಡಿದವನಿಗೆ ಕೃತಜ್ಞತೆ ಸಲ್ಲಿಸುವುದು ಸಹ ಅಗತ್ಯವಾಗಿದೆ. (ಸುನನ್ ಇಬ್ನೆ ಮಾಜ್ಜ, ಕಿತಾಬುಸ್ಸದಖಾತ್, ಬಾಬ್ ಹುಸ್ನೆ ಖಝಾ, ಹದೀಸ್–2424)

ಹಝ್ರತ್ ಅಮ್ರ್ ಬಿನ್ ಅಖ್ತಬ್(ರ) ವಿವರಿಸುತ್ತಾರೆ: ಒಮ್ಮೆ ರಸೂಲುಲ್ಲಾಹ್(ಸ) ನೀರು ಕೇಳಿದರು. ನಾನು ಅವರಿಗಾಗಿ ಒಂದು ಪಾತ್ರೆಯಲ್ಲಿ ನೀರು ತಂದೆ, ಅದರಲ್ಲಿ ಒಂದು ಕೂದಲಿತ್ತು. ನಾನು ಆ ಕೂದಲನ್ನು ತೆಗೆದೆ. ಇದು ಸಾಮಾನ್ಯ ವಿಷಯ. ಆ ಪಾತ್ರೆಯನ್ನು ರಸೂಲುಲ್ಲಾಹ್(ಸ)ರಿಗೆ ನೀಡಿದೆ. ಆಗ ರಸೂಲುಲ್ಲಾಹ್(ಸ), 'ಅಲ್ಲಾಹುಮ್ಮ ಜಮ್ಮಿಲ್‌ಹು' ಅಂದರೆ, ಹೇ ಅಲ್ಲಾಹ್ ಇವನನ್ನು ಸುಂದರಗೊಳಿಸು ಎಂದು ಪ್ರಾರ್ಥಿಸಿದರು. ಅವರು ಕೃತಜ್ಞತೆ ಸಲ್ಲಿಸದ ಯಾವುದೇ ಸಣ್ಣ ಅವಕಾಶವೂ ಇರುತ್ತಿರಲಿಲ್ಲ. ವರದಿಗಾರರು ಹೇಳುತ್ತಾರೆ, 'ನಂತರ ಹಝ್ರತ್ ಪೈಗಂಬರ್(ಸ)ರ ಈ ಪ್ರಾರ್ಥನೆಯ ಪ್ರಭಾವವನ್ನು ಅವರ ಮೇಲೆ ನಾನು ನೋಡಿದೆ. ಅವರು ತೊಂಬತ್ತಮೂರು ವರ್ಷಗಳ ಕಾಲ ಬದುಕಿದ್ದರು ಮತ್ತು ಅವರ ತಲೆ ಹಾಗೂ ಗಡ್ಡದಲ್ಲಿ ಒಂದು ಕೂದಲು ಕೂಡ ಬೆಳ್ಳಗಾಗಿರಲಿಲ್ಲ.' (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಮುಸ್ನದ್ ಉಮ್ರೊ ಬಿನ್ ಅಖ್ತಬ್ ಅಬುಝೈದ್, ಸಂಪುಟ–7, ಪುಟ–600, ಹದೀಸ್–23271, ಆಲಮುಲ್ ಕುತುಬ್ 1998)

ಅದೇ ರೀತಿ ಖತಾದಾ(ರ)ರಿಂದ ಒಂದು ವರದಿಯಿದೆ, ಅವರು ಹೇಳಿದರು, ನಾನು ಹಝ್ರತ್ ಅನಸ್(ರ)ರಿಂದ ಕೇಳಿದೆ: ಅನಸ್ ನಬಿ(ಸ)ರ ಸೇವಕ ಆಗಿದ್ದರು. ನಬಿ(ಸ) ಅನಸ್(ರ)ರಿಗಾಗಿ ಹೀಗೆ ಪ್ರಾರ್ಥಿಸಿದರು: 'ಹೇ ಅಲ್ಲಾಹ್, ಇವನ ಸಂಪತ್ತು ಮತ್ತು ಸಂತತಿಯನ್ನು ಹೆಚ್ಚಿಸು, ಮತ್ತು ನೀನು ಇವನಿಗೆ ಏನನ್ನು ನೀಡಿದ್ದೀಯೋ ಅದರಲ್ಲಿ ಇವನಿಗಾಗಿ ಅಭಿವೃದ್ಧಿಯನ್ನು ಕರುಣಿಸು'. (ಸಹೀಹ್ ಅಲ್‌ಬುಖಾರಿ ಅನುವಾದ, ಕಿತಾಬುದ್ದಾಅವಾತ್, ಬಾಬ್ ಖೌಲಲ್ಲಾಹು ತಬಾರಕ ವ ತಆಲ ವಸಲ್ಲು ಅಲೈಹಿಮ್....., ಹದೀಸ್ 6334, ಸಂಪುಟ–15, ಪುಟ–59, ನಝಾರತ್ ಇಶಾಅತ್)

ಈ ಪ್ರಾರ್ಥನೆಯು ಈಡೇರಿದ ಉಲ್ಲೇಖ ಹೀಗೆ ಸಿಗುತ್ತದೆ: ಹಝ್ರತ್ ಅನಸ್(ರ) ಹೇಳುತ್ತಾರೆ, 'ಅಲ್ಲಾಹನ ಆಣೆ, ಖಂಡಿತವಾಗಿಯೂ ನನ್ನ ಸಂಪತ್ತು ಬಹಳಷ್ಟಿದೆ ಮತ್ತು ನನ್ನ ಸಂತತಿ ಹಾಗೂ ನನ್ನ ಸಂತತಿಯ ಮಕ್ಕಳ ಸಂಖ್ಯೆ ಇಂದು ಸುಮಾರು ನೂರರಷ್ಟಿದೆ.' (ಸಹೀಹ್ ಮುಸ್ಲಿಮ್ ಅನುವಾದ, ಫಝಾಇಲುಸ್ಸಹಾಬ, ಬಾಬ್ ಮಿನ್ ಫಝಾಇಲ್ ಅನಸ್ ಬಿನ್ ಮಾಲಿಕ್(ರ), ಸಂಪುಟ–13, ಪುಟ–124, ಹದೀಸ್ (143)4517, ನೂರ್ ಫೌಂಡೇಶನ್)

ಹಝ್ರತ್ ಜಾಬಿರ್(ರ)ರಿಂದ ವರದಿಯಾಗಿದೆ: ನಬಿ(ಸ) ಹೇಳಿದರು, 'ಯಾರ ಮೇಲಾದರೂ ಉಪಕಾರ ಮಾಡಲಾದರೆ ಮತ್ತು ಅವನು ಅದನ್ನು ಪ್ರಸ್ತಾಪಿಸಿದರೆ, ಅವನು ಅದರ ಕೃತಜ್ಞತೆಯನ್ನು ಸಲ್ಲಿಸಿದನು. ಮತ್ತು ಯಾರು ಅದನ್ನು ಮುಚ್ಚಿಟ್ಟನೋ ಅವನು ಕೃತಜ್ಞತಾಗೇಡಿತನ ತೋರಿದನು'. (ಸುನನ್ ಅಬೀದಾವುದ್ ಕಿತಾಬುಲ್ ಅದಬ್, ಬಾಬ್ ಫೀ ಶುಕ್ರಿಲ್ ಮಾರೂಫ್, ಹದೀಸ್–4814)

ಹಝ್ರತ್ ಆಯಿಶಾ(ರ)ರಿಂದ ವರದಿಯಾಗಿದೆ: ನಬಿ(ಸ) ಉಡುಗೊರೆಯನ್ನು ಸ್ವೀಕರಿಸುತ್ತಿದ್ದರು ಮತ್ತು ಅದಕ್ಕೆ ಪ್ರತಿಯಾಗಿ ಉಡುಗೊರೆಯನ್ನು ನೀಡುತ್ತಿದ್ದರು. (ಸುನನ್ ಅಬೀದಾವುದ್ ಕಿತಾಬುಲ್ ಬುಯೂ, ಬಾಬ್ ಫೀ ಖಬೂಲಿಲ್ ಹದ್ಯಾ, ಹದೀಸ್–3536)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ವಿವರಿಸಿದರು: ರಸೂಲುಲ್ಲಾಹ್(ಸ) ಹೇಳಿದರು, ಯಾರಿಗಾದರೂ ಉಡುಗೊರೆ ನೀಡಲಾದರೆ, ಅವನಿಗೆ ಸಾಮರ್ಥ್ಯವಿದ್ದರೆ ಆ ಉಡುಗೊರೆಗೆ ಪ್ರತಿಯಾಗಿ ಏನನ್ನಾದರೂ ನೀಡಬೇಕು, ಸಾಮರ್ಥ್ಯವಿಲ್ಲದಿದ್ದರೆ ಉಡುಗೊರೆ ನೀಡಿದವನ ಪ್ರಶಂಸೆ ಮಾಡಬೇಕು. ಏಕೆಂದರೆ ಯಾರು ಆತನ ಪ್ರಶಂಸೆ ಮಾಡಿದನೋ ಅವನು ಕೃತಜ್ಞತೆ ಸಲ್ಲಿಸಿದನು, ಯಾರು ಅದನ್ನು ಮುಚ್ಚಿಟ್ಟನೋ ಅವನು ಕೃತಜ್ಞತಾಗೇಡಿತನ ತೋರಿದನು. (ಸುನನ್ ಅಬೀದಾವುದ್, ಕಿತಾಬುಲ್ ಅದಬ್, ಬಾಬ್ ಫೀಶುಕ್ರಿಲ್ ಮರಾಫ್, ಹದೀಸ್–4813)

ಸಮಾಜದಲ್ಲಿ ಪ್ರೀತಿ ಮತ್ತು ಸಹಿಷ್ಣುತೆಯನ್ನು ಮೂಡಿಸಲು ಅತ್ಯಗತ್ಯವಾಗಿರುವ ಮೂಲಭೂತ ನೈತಿಕತೆಗಳು ಇವಾಗಿವೆ. ಹಝ್ರತ್ ಅಬೂ ಹುರೈರಾ(ರ)ರಿಂದ ವರದಿಯಾಗಿದೆ: ಒಬ್ಬ ಹಳ್ಳಿಗನು ರಸೂಲುಲ್ಲಾಹ್(ಸ)ರಿಗೆ ಉಡುಗೊರೆಯಾಗಿ ಒಂದು ಒಂಟೆಯನ್ನು ನೀಡಿದನು. ಆಗ ನಬಿ(ಸ) ಅದಕ್ಕೆ ಪ್ರತಿಯಾಗಿ ಆತನಿಗೆ ಆರು ಒಂಟೆಗಳನ್ನು ನೀಡಿದರು. (ಜಾಮಿ ಅತ್ತಿರ್ಮಿಧಿ, ಅಬ್ವಾಬುಲ್ ಮನಾಖಿಬ್, ಹದೀಸ್–3945)

ಹಝ್ರತ್ ಅಬೂ ಹುರೈರಾ(ರ)ರಿಂದ ವರದಿಯಾಗಿದೆ: ಒಬ್ಬ ವ್ಯಕ್ತಿಯು ನಬಿ(ಸ)ರ ಸನ್ನಿಧಿಗೆ ಹಾಜರಾಗಿ ಅವರ ಬಳಿ ಬೇಡಿದನು. ರಸೂಲುಲ್ಲಾಹ್(ಸ) ಅವನಿಗೆ ಅರ್ಧ 'ವಸಕ್' ಧಾನ್ಯವನ್ನು (ಅಂದರೆ ಸುಮಾರು ಎಂಬತ್ತು ಕಿಲೋ) ಸಾಲವಾಗಿ ಪಡೆದು ನೀಡಿದರು. ನಂತರ ಸಾಲ ನೀಡಿದ ವ್ಯಕ್ತಿ ಅದನ್ನು ಕೇಳಲು ಬಂದಾಗ, ನೀವು ಅವನಿಗೆ ಒಂದು ವಸಕ್ ನೀಡಿದರು ಮತ್ತು ಹೀಗೆ ಹೇಳಿದರು: 'ಅರ್ಧ ಅವನ ಸಾಲದ ಮರುಪಾವತಿ ಮತ್ತು ಇನ್ನರ್ಧ ಅವನಿಗಾಗಿ ಉಡುಗೊರೆಯಾಗಿದೆ, ಕೃತಜ್ಞತೆಯ ಸಂಕೇತವಾಗಿದೆ. (ಅಶ್ಶಿಫಾ ಬಿತಅ್‌ರೀಫ್ ಹುಖೂಖಿಲ್ ಮುಸ್ತಫ ಲಿಖಾಝಿ ಅಯಾಝ್, ಪುಟ–77–78, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2002)

ಹಝ್ರತ್ ಅಬೂ ಹಿಂದ್(ರ)ರಿಂದ ವರದಿಯಾಗಿದೆ: ತಮೀಮ್ ಬಿನ್ ಔಸ್ ಅದ್ದಾರಿ(ರ) ಸಿರಿಯಾದಿಂದ ಮದೀನಾಗೆ ದೀಪಗಳು, ಆಲಿವ್ ಎಣ್ಣೆ ಮತ್ತು ಹೆಣೆದ ಹಗ್ಗಗಳನ್ನು ತಂದರು. ಅವರು ಮದೀನಾ ತಲುಪಿದಾಗ ಆಕಸ್ಮಿಕವಾಗಿ ಅದು ಶುಕ್ರವಾರದ ರಾತ್ರಿಯಾಗಿತ್ತು. ಅವರು ತಮ್ಮ ಗುಲಾಮನಿಗೆ ಆದೇಶಿಸಿದರು, ಅವನು ಹಗ್ಗಗಳನ್ನು ಸಿದ್ಧಪಡಿಸಿದನು, ಮಸ್ಜಿದ್ ನಬವಿಯಲ್ಲಿ ದೀಪಗಳನ್ನು ನೇತುಹಾಕಿದನು, ಅವು ದೀಪಗಳಾಗಿದ್ದವು, ಅವುಗಳಲ್ಲಿ ಎಣ್ಣೆ ಹಾಕಿ ಬತ್ತಿ ಇರಿಸಿದನು. ಸೂರ್ಯ ಅಸ್ತಮಿಸಿದಾಗ ತಮೀಮ್(ರ) ತಮ್ಮ ಗುಲಾಮನಿಗೆ, 'ಅವುಗಳನ್ನು ಬೆಳಗಿಸು' ಎಂದು ಆದೇಶಿಸಿದರು. ರಸೂಲುಲ್ಲಾಹ್(ಸ) ಮಸೀದಿಯ ಕಡೆಗೆ ಬಂದಾಗ, ಮಸೀದಿ ಆ ದೀಪಗಳಿಂದ ಬೆಳಗುತ್ತಿರುವುದನ್ನು ನೋಡಿದರು. ಇದನ್ನು ನೋಡಿ ನಬಿ(ಸ) ಬಹಳ ಸಂತೋಷಪಟ್ಟರು ಮತ್ತು 'ಇದನ್ನು ಮಾಡಿದವರು ಯಾರು?' ಎಂದು ಕೇಳಿದರು. 'ಯಾ ರಸೂಲಲ್ಲಾಹ್, ತಮೀಮ್ ದಾರಿ(ರ)' ಎಂದು ಜನರು ಹೇಳಿದರು. ನಬಿ(ಸ) ಅವರಿಗಾಗಿ ಪ್ರಾರ್ಥನೆ ಮಾಡಿದರು ಮತ್ತು ಹೀಗೆ ಹೇಳಿದರು: 'ನೀನು ಇಸ್ಲಾಮನ್ನು ಬೆಳಗಿಸಿದ್ದೀಯಾ. ಅಲ್ಲಾಹನು ಇಹಲೋಕ ಮತ್ತು ಪರಲೋಕದಲ್ಲಿ ನಿನ್ನನ್ನು ಬೆಳಗಿಸಲಿ'. ನಂತರ, 'ನನಗೆ ಯಾವುದಾದರೂ ಮಗಳಿದ್ದರೆ, ನಾನು ನಿನ್ನ ವಿವಾಹವನ್ನು ಅವಳೊಂದಿಗೆ ಮಾಡುತ್ತಿದ್ದೆ' ಎಂದು ಹೇಳಿದರು. ಅಂದರೆ, ಅವರು ಮಸೀದಿಯನ್ನು ಬೆಳಗಿಸಿದ ಕಾರ್ಯವನ್ನು ನಬಿ(ಸ) ಅಷ್ಟೊಂದು ಶ್ಲಾಘಿಸಿದರು. (ಅ ಲ್ ಜಾ ವಿ ಲಿಅಹ್ಕಾಮುಲ್ ಖುರ್‌ಆನ್ (ತಫ್ಸೀರುಲ್ ಖುರ್ತುಬಿ), ಸಂಪುಟ–2, ಪುಟ–2205–2206) (ಅತ್ತಬಖಾತುಲ್ ಕುಬ್ರ, ಸಂಪುಟ–7, ಪುಟ–286, ದಾರುಲ್ ಕುತುಬ್ ಇಲ್ಮಿಯಾ)

ಹಝ್ರತ್ ಆಯಿಶಾ(ರ)ರಿಂದ ವರದಿಯಾಗಿದೆ: ನಬಿ(ಸ) ರಾತ್ರಿ ನಮಾಝಿನಲ್ಲಿ ಎಷ್ಟೊಂದು ಹೊತ್ತು ನಿಂತಿರುತ್ತಿದ್ದರೆಂದರೆ ಅವರ ಪಾದಗಳು ಒಡೆಯುತ್ತಿದ್ದವು. ಇದನ್ನು ನೋಡಿ ಹಝ್ರತ್ ಆಯಿಶಾ(ರ) ಹೀಗೆ ಕೇಳಿದರು: 'ಯಾ ರಸೂಲಲ್ಲಾಹ್, ಅಲ್ಲಾಹನು ನಿಮ್ಮನ್ನು ಹಿಂದಿನ ಮತ್ತು ಮುಂದಿನ ಪಾಪಗಳಿಂದ ರಕ್ಷಿಸಿರುವಾಗ ನೀವೇಕೆ ಹೀಗೆ ಮಾಡುತ್ತೀರಿ?'. ನಬಿ(ಸ) ಹೇಳಿದರು: 'ನಾನು ಕೃತಜ್ಞ ದಾಸನಾಗುವುದನ್ನು ನಾನು ಇಷ್ಟಪಡಬಾರದೇ?' (ಸಹೀಹ್ ಅಲ್‌ಬುಖಾರಿ ಅನುವಾದ ಕಿತಾಬುತ್ತಫ್ಸೀರ್......, ಹದೀಸ್–4837, ಸಂಪುಟ–12, ಪುಟ–83, ನಝಾರತ್ ಇಶಾಅತ್)

ಅತಾ(ರ) ವರದಿ ಮಾಡುತ್ತಾರೆ: ಒಮ್ಮೆ ನಾನು ಇಬ್ನು ಉಮರ್(ರ) ಮತ್ತು ಉಬೈದುಲ್ಲಾ ಬಿನ್ ಉಮರ್(ರ)ರೊಂದಿಗೆ ಹಝ್ರತ್ ಆಯಿಶಾ(ರ)ರ ಸನ್ನಿಧಿಗೆ ಹಾಜರಾದೆ. ನಾನು ಉಮ್ಮುಲ್ ಮುಅ್‌ಮಿನೀನ್ ಹಝ್ರತ್ ಆಯಿಶಾ(ರ)ರೊಡನೆ, 'ರಸೂಲುಲ್ಲಾಹ್(ಸ)ರಲ್ಲಿ ನೀವು ನೋಡಿದ ಯಾವುದಾದರೂ ಅತ್ಯಂತ ವಿಶಿಷ್ಟವಾದ ವಿಷಯವನ್ನು ನನಗೆ ತಿಳಿಸಿ' ಎಂದು ಕೇಳಿದೆ. ಆಗ ಹಝ್ರತ್ ಆಯಿಶಾ(ರ), ನಬಿ(ಸ)ರ ನೆನಪಿನಿಂದ ಭಾವುಕರಾಗಿ ಅಳಲಾರಂಭಿಸಿದರು ಮತ್ತು ಹೀಗೆ ಹೇಳಿದರು: 'ಹಝ್ರತ್ ಪೈಗಂಬರ್(ಸ)ರ ಪ್ರತಿಯೊಂದು ನಡವಳಿಕೆಯೂ ವಿಶಿಷ್ಟವಾಗಿತ್ತು. ಒಮ್ಮೆ ಹಝ್ರತ್ ಪೈಗಂಬರ್(ಸ) ಒಂದು ರಾತ್ರಿ ನನ್ನ ಬಳಿ ಬಂದು ನನ್ನೊಂದಿಗೆ ಹಾಸಿಗೆಯಲ್ಲಿ ಮಲಗಿದರು. ನಬಿ(ಸ) ಹೀಗೆ ಕೇಳಿದರು: "ಹೇ ಆಯಿಶಾ, ಇಂದಿನ ರಾತ್ರಿ ನನ್ನ ಪ್ರಭುವನ್ನು ಆರಾಧಿಸಲು ನೀನು ನನಗೆ ಅನುಮತಿ ನೀಡುತ್ತೀಯಾ?" ನಾನು ಹೇಳಿದೆ: "ದೇವನಾಣೆ, ನನಗೆ ನಿಮ್ಮ ಆಸೆಯ ಗೌರವ ಮತ್ತು ನಿಮ್ಮ ಸಾಮೀಪ್ಯ ಇಷ್ಟ. ನನ್ನ ಕಡೆಯಿಂದ ನಿಮಗೆ ಅನುಮತಿಯಿದೆ". ಆಗ ನಬಿ(ಸ) ಎದ್ದು, ಚರ್ಮದ ಚೀಲದಿಂದ ವುಝೂ ಮಾಡಿ ನಮಾಝಿಗಾಗಿ ನಿಂತುಕೊಂಡರು. ನಮಾಝಿನಲ್ಲಿ ಎಷ್ಟೊಂದು ಅತ್ತಿರೆಂದರೆ ಅವರ ಕಣ್ಣೀರು ಅವರ ಎದೆಯ ಮೇಲೆ ಬೀಳಲಾರಂಭಿಸಿತು. ನಮಾಝ್ ನಂತರ ನಬಿ(ಸ) ಬಲಭಾಗಕ್ಕೆ ವಾಲಿಕೊಂಡು ಕುಳಿತಿದ್ದರು, ಅವರ ಬಲಗೈ ಅವರ ಬಲ ಕೆನ್ನೆಯ ಕೆಳಗಿತ್ತು. ನಂತರ ಅಳಲು ಪ್ರಾರಂಭಿಸಿದರು, ಎಷ್ಟರಮಟ್ಟಿಗೆ ಎಂದರೆ ಅವರ ಕಣ್ಣೀರು ನೆಲದ ಮೇಲೆ ಬೀಳಲಾರಂಭಿಸಿತು. ಕೊನೆಗೆ ಫಜರ್ ಅಝಾನ್ ನೀಡಿದ ನಂತರ ಬಿಲಾಲ್(ರ) ಬಂದರು. ಅವರು ನಬಿ(ಸ) ಈ ರೀತಿ ಕಣ್ಣೀರು ಸುರಿಸುತ್ತಿರುವುದನ್ನು ನೋಡಿದಾಗ, ಹೀಗೆ ಕೇಳಿದರು: ಯಾ ರಸೂಲಲ್ಲಾಹ್, ಅಲ್ಲಾಹನು ನಿಮ್ಮ ಹಿಂದಿನ ಮತ್ತು ಮುಂದಿನ ಎಲ್ಲ ಪಾಪಗಳನ್ನು ಕ್ಷಮಿಸಿರುವಾಗ, ನೀವೇಕೆ ಇಷ್ಟೊಂದು ಅಳುತ್ತಿದ್ದೀರಿ?" ಆಗ ರಸೂಲುಲ್ಲಾಹ್(ಸ) ಹೇಳಿದರು: "ನಾನು ಅಲ್ಲಾಹನ ಕೃತಜ್ಞ ದಾಸನಾಗಬಾರದೇ? ಮತ್ತು ನಾನೇಕೆ ಅಳಬಾರದು, ಇಂದು ರಾತ್ರಿ ನನ್ನ ಪ್ರಭುವು ಈ ಆಯತ್‌ಗಳನ್ನು ಇಳಿಸಿದ್ದಾನೆ". ಆ ಆಯತ್‌ಗಳು ಆಲಿ ಇಮ್ರಾನ್‌ನದ್ದು ಹೀಗಿವೆ:

ಇನ್ನ ಫೀ ಖಲ್ಖಿಸ್ಸಮಾವಾತಿ ವಲ್ ಅರ್ಝಿ ವಖ್ತಿಲಾಫಿಲ್ಲೈಲಿ ವನ್ನಹಾರಿ ಲ ಆಯಾತಿಲ್ಲಿ ಉಲಿಲ್ ಅಲ್ಬಾಬ್. ಅಲ್ಲಝೀನ ಯಝ್‌ಕುರೂನಲ್ಲಾಹ

ಖಿಯಾಮನ್ ವ ಖುಊದನ್ ವಅಲಾ ಜುನೂಬಿಹಿಮ್ ವಯತಫಕ್ಕರೂನ ಫೀ ಖಲ್ಖಿಸ್ಸಮಾವಾತಿ ವಲ್ ಅರ್‌ಝ್, ರಬ್ಬನಾ ಮಾ ಖಲಖ್‌ತ ಹಾಝಾ ಬಾತಿಲಾ, ಸುಬ್‌ಹಾನಕ ಫಖಿನಾ ಅಝಾಬನ್ನಾರ್.

ಇದರ ಅನುವಾದ ಹೀಗಿದೆ: 'ಖಂಡಿತವಾಗಿಯೂ ಆಕಾಶಗಳ ಹಾಗೂ ಭೂಮಿಯ ಸೃಷ್ಟಿಯಲ್ಲಿ ಮತ್ತು ರಾತ್ರಿ–ಹಗಲುಗಳ ಬದಲಾವಣೆಯಲ್ಲಿ ಬುದ್ಧಿವಂತರಿಗೆ ಹಲವು ದೃಷ್ಟಾಂತಗಳಿವೆ. ಆ ಜನರು ಅಲ್ಲಾಹನನ್ನು ನಿಂತಾಗಲೂ, ಕುಳಿತಾಗಲೂ ಮತ್ತು ತಮ್ಮ ಮಗ್ಗುಲಲ್ಲಿ ಮಲಗಿದಾಗಲೂ ಸ್ಮರಿಸುತ್ತಾರೆ. ಆಕಾಶಗಳ ಹಾಗೂ ಭೂಮಿಯ ಸೃಷ್ಟಿಯ ಕುರಿತು ಚಿಂತಿಸುತ್ತಾರೆ. ಹೇ ನಮ್ಮ ಪ್ರಭೂ, ನೀನು ಖಂಡಿತವಾಗಿಯೂ ಇದನ್ನು ನಿರರ್ಥಕವಾಗಿ ಸೃಷ್ಟಿಸಿಲ್ಲ. ನೀನು ಪರಿಶುದ್ಧನು. ಹಾಗಾಗಿ, ನರಕಾಗ್ನಿಯ ಶಿಕ್ಷೆಯಿಂದ ನಮ್ಮನ್ನು ರಕ್ಷಿಸು' ಎಂದು ಪ್ರಾರ್ಥಿಸುತ್ತಾರೆ.' (ತಫ್ಸೀರ್ ರೂಹುಲ್ ಬಯಾನ್, ಸಂಪುಟ–2, ಪುಟ–150, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2003) (ಅಖ್ಲಾಖುನ್ನಬೀ(ಸ) ವ ಆದಾಬಿಹೀ, ಪುಟ–408–409, ಹದೀಸ್–553, ದಾರುಲ್ ಲುಲು, ಖಾಹಿರ, 2016)

ನಂತರ ಹಝ್ರತ್ ಪೈಗಂಬರ್(ಸ) ಈ ಆಯತ್‌ಗಳನ್ನು ಓದಿದ ನಂತರ ಹೇಳಿದರು: 'ಯಾರು ಈ ಆಯತ್‌ಗಳನ್ನು ಓದುತ್ತಾನೋ ಆದರೆ ಅವುಗಳ ಮೇಲೆ ಚಿಂತನೆ ನಡೆಸುವುದಿಲ್ಲವೋ, ಆ ವ್ಯಕ್ತಿಗೆ ವಿನಾಶವಿದೆ.' (ರೂಹುಲ್ ಮಾನಿ, ಸಂಪುಟ–4, ಪುಟ–499–500, ದಾರ್ ಅಹ್ಯಾಉತ್ತುರಾಸ್ 1999)

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಹದೀಸನ್ನು ವಿವರಿಸುತ್ತಾ ಒಂದು ಕಡೆ ಹೇಳುತ್ತಾರೆ: ನಬಿ(ಸ) ಹೀಗೆ ಹೇಳಿದರು: ಹೇ ಆಯಿಶಾ, ಉಪಕಾರಿ ದಾಸನಾಗುವುದು ದೇವನ ಕೆಲಸವೇ? ದಾಸನು ತನ್ನ ಜವಾಬ್ದಾರಿಗಳನ್ನು ಪೂರೈಸಬೇಕಾಗಿಲ್ಲವೇ? ಹಝ್ರತ್ ಪೈಗಂಬರ್(ಸ)ರಂತಹ ಮನುಷ್ಯರು, ತಾವು ಮಾಡಿದ ಎಲ್ಲ ತ್ಯಾಗಗಳ ಹೊರತಾಗಿಯೂ, ದೇವನ ಬಗ್ಗೆ ಹೊಂದಿದ್ದ ಪ್ರೀತಿಯ ಅಪಾರ ಭಾವನೆಗಳ ಹೊರತಾಗಿಯೂ, ರಾತ್ರಿ ಎದ್ದು ಅಲ್ಲಾಹನ ಸನ್ನಿಧಿಯಲ್ಲಿ ತಮ್ಮ ಪಾದಗಳು ಊದಿಕೊಳ್ಳುವವರೆಗೆ ನಿಲ್ಲುವ ಅಗತ್ಯವನ್ನು ಹೊಂದಿದ್ದರು, ಹಗಲಿನಲ್ಲಿ ಆರಾಧನೆ ಮಾಡುತ್ತಿದ್ದರು ಮತ್ತು ತಮ್ಮ ಜೀವನವನ್ನು ದೇವನ ಸಾಮೀಪ್ಯ ಪಡೆಯಲು ಹೆಚ್ಚು ಹೆಚ್ಚು ಅರ್ಹರನ್ನಾಗಿ ಮಾಡುತ್ತಿದ್ದರು. ಹಾಗಿದ್ದಾಗ, ಈ ಜವಾಬ್ದಾರಿಗಳಿಂದ ತನ್ನನ್ನು ತಾನು ಮುಕ್ತನೆಂದು ಪರಿಗಣಿಸುವಂತಹ ಬೇರೆ ಯಾವ ಮನುಷ್ಯನಿದ್ದಾನೆ?' (ಖಿಯಾಮೆ ಪಾಕಿಸ್ತಾನ್ ಅವ್ರ್ ಹಮಾರಿ ಝಿಮ್ಮೆದಾರಿಯಾಂ, ಅನ್ವಾರುಲ್ ಉಲೂಮ್, ಸಂಪುಟ–19, ಪುಟ–439–440)

ಹಝ್ರತ್ ಮಸೀಹ್ ಮೌಊದ್(ಅ) ಈ ಬಗ್ಗೆ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ನಮಾಝ್‌ಗಳಲ್ಲಿ ಎಷ್ಟೊಂದು ಅಳುತ್ತಿದ್ದರು ಮತ್ತು ಎಷ್ಟೊಂದು ದೀರ್ಘವಾಗಿ ನಿಲ್ಲುತ್ತಿದ್ದರೆಂದರೆ ಅವರ ಪಾದಗಳ ಮೇಲೆ ಊತ ಉಂಟಾಗುತ್ತಿತ್ತು. ದೇವನು ನಿಮ್ಮ ಎಲ್ಲ ಪಾಪಗಳನ್ನು ಕ್ಷಮಿಸಿದ್ದಾನೆ, ಹಾಗಿದ್ದರೂ ಇಷ್ಟೊಂದು ಕಷ್ಟ ಮತ್ತು ಅಳುವಿಕೆ ಏತಕ್ಕಾಗಿ? ಎಂದು ಸಹಾಬಿಯರು ಕೇಳಿದರು. 'ನಾನು ದೇವನ ಕೃತಜ್ಞ ದಾಸನಾಗಬಾರದೇ?' ಎಂದು ನಬಿ(ಸ) ಕೇಳಿದರು. (ಮಲ್‌ಫೂಝಾತ್ ಹಝ್ರತ್ ಮಸೀಹ್ ಮೌಊದ್(ಅ), ಸಂಪುಟ–6, ಪುಟ–231)

ಹಝ್ರತ್ ಪೈಗಂಬರ್(ಸ)ರ ಈ ಸ್ಥಿತಿಯು, ನಾವು ಅಲ್ಲಾಹನ ಅನುಗ್ರಹಗಳಿಗೆ ಕೃತಜ್ಞರಾಗುತ್ತಾ ನಮ್ಮ ಕೃತಜ್ಞತೆಯನ್ನು ಉತ್ತುಂಗಕ್ಕೇರಿಸಬೇಕು ಎಂದು ನಮ್ಮೆಲ್ಲರೊಡನೆ ಆಗ್ರಹಿಸುತ್ತದೆ. ಕೃತಜ್ಞತೆ ಎಂದರೆ ಸುಮ್ಮನೆ ಕುಳಿತುಕೊಳ್ಳುವುದಲ್ಲ, ಕೃತಜ್ಞತೆಯು ಕಾರ್ಯದಲ್ಲಿ ಇನ್ನಷ್ಟು ಪ್ರಗತಿಯನ್ನು ಬಯಸುತ್ತದೆ. ಹಝ್ರತ್ ಪೈಗಂಬರ್(ಸ) ತಖ್ವದ ಅತ್ಯುನ್ನತ ಗುಣಮಟ್ಟದಲ್ಲಿದ್ದರು, ಆದ್ದರಿಂದ ಅವರು ಅತ್ಯಂತ ಕೃತಜ್ಞ ದಾಸನಾಗುವ ಅತ್ಯುನ್ನತ ಗುಣಮಟ್ಟವನ್ನೂ ಪಡೆದರು. 'ನೀವೂ ಅತ್ಯಂತ ಕೃತಜ್ಞ ದಾಸರಾಗಿರಿ ಎಂದು ನಬಿ(ಸ) ಉಪದೇಶಿಸಿದರು. ಅಲ್ಲಾಹನ ನಿಜವಾದ ದಾಸನಾಗುವ ಹಕ್ಕನ್ನು ಪೂರೈಸಬೇಕಾದರೆ, ಅಲ್ಲಾಹನು ನಿಮ್ಮ ಮೇಲೆ ಹೇಗೆ ಕೃಪೆ ತೋರುತ್ತಾನೋ, ಅಷ್ಟೇ ನಿಮ್ಮ ಆರಾಧನೆಯ ಗುಣಮಟ್ಟವನ್ನೂ ಹೆಚ್ಚಿಸಿ ಮತ್ತು ಕೃತಜ್ಞರಾಗಿರಿ. ದೇವನ ಕೃಪೆಗಳ ಪರಿಣಾಮವಾಗಿ ಆಲಸ್ಯ ಮೂಡಬಾರದು, ಬದಲಾಗಿ ಆರಾಧನೆ ಮತ್ತು ಕೃತಜ್ಞತೆಯಲ್ಲಿ ಮುಂದೆ ಸಾಗಬೇಕು.

ಹಾಗಾಗಿ, ನಾವು ಈ ಸೂತ್ರವನ್ನು ಪಾಲಿಸುತ್ತಿರುವವರೆಗೆ, ಇನ್‌ಶಾ ಅಲ್ಲಾಹ್ ವೈಯಕ್ತಿಕವಾಗಿಯೂ ಮತ್ತು ಸಾಮೂಹಿಕವಾಗಿಯೂ ಪ್ರಗತಿಯ ಹಾದಿಯನ್ನು ಸವೆಸುತ್ತಲೇ ಇರುತ್ತೇವೆ.

ಇದರ ಮುಂದಿನ ವಿವರಣೆಯಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಕಡೆ ಹೀಗೂ ಹೇಳಿದ್ದಾರೆ: 'ಯಾರು, "ಕರಮ್‌ಹಾಯೆ ತೂ ಮಾರಾ ಕರ್ದ್ ಗುಸ್ತಾಖ್" ಎಂದು ಹೇಳಿದನೋ ಆತ ದಡ್ಡನಾಗಿದ್ದಾನೆ'. ಇದು ಪರ್ಷಿಯನ್ ವಾಕ್ಯವಾಗಿದ್ದು, 'ನಿನ್ನ ಕೃಪೆಗಳೇ ನನ್ನನ್ನು ಉದ್ಧಟನನ್ನಾಗಿ ಮಾಡಿವೆ' ಎಂದರ್ಥ. ಆ ಕವಿ ಅಲ್ಲಾಹನನ್ನು ಕುರಿತು, 'ಅಲ್ಲಾಹನ ಕೃಪೆಯೇ ನನ್ನನ್ನು ಉದ್ಧಟನನ್ನಾಗಿ ಮಾಡಿತು' ಎಂದು ಹೇಳುತ್ತಾನೆ. ಕೃತಜ್ಞನಾಗುವ ಬದಲು ಉದ್ಧಟನಾದನು, ಏಕೆಂದರೆ ದೇವನ ಕೃಪೆಯು ಮನುಷ್ಯನನ್ನು ಉದ್ಧಟನನ್ನಾಗಿ ಮಾಡುವುದಿಲ್ಲ. ಅವನು ತಪ್ಪು ಹೇಳುತ್ತಿದ್ದಾನೆ. ದಂಗೆಕೋರನನ್ನಾಗಿ ಮಾಡುವುದಿಲ್ಲ, ಬದಲಾಗಿ ಇನ್ನಷ್ಟು ಕೃತಜ್ಞ ಮತ್ತು ವಿಧೇಯನನ್ನಾಗಿ ಮಾಡುತ್ತದೆ.

ಹಾಗಾಗಿ, ನೀವು ಮೊದಲಿಗಿಂತ ಹೆಚ್ಚು ಕೃತಜ್ಞರಾಗಿರಿ. ಏಕೆಂದರೆ ದೇವನು, 'ಲಇನ್ ಶಕರ್‌ತುಮ್ ಲಅಝೀದನ್ನಕುಮ್' (ನೀವು ಕೃತಜ್ಞತೆ ಸಲ್ಲಿಸಿದರೆ ಖಂಡಿತ ನಾನು ನಿಮಗೆ ಮತ್ತಷ್ಟು ಹೆಚ್ಚಿಸುವೆನು) ಎಂದು ಹೇಳುತ್ತಾನೆ. ಅಂದರೆ, ನಿಮಗೆ ಏನು ನೀಡಲಾಗಿದೆಯೋ, ಅದಕ್ಕೆ ನೀವು ಕೃತಜ್ಞತೆ ಸಲ್ಲಿಸಿದರೆ, ನಾನು ನಿಮಗೆ ಮತ್ತಷ್ಟು ಹೆಚ್ಚಿಸುವೆನು. (ಖುತ್‌ಬಾತೆ ಮಹ್ಮೂದ್, ಸಂಪುಟ–5, ಪುಟ–361–362)

ಅಲ್ಲಾಹನು ನಮ್ಮನ್ನು ನೈಜ ಕೃತಜ್ಞರನ್ನಾಗಿಸಲಿ. ನೈಜ ಆರಾಧಕರನ್ನಾಗಿಸಲಿ, ನಾವು ಸದಾ ಅವನ ಕೃಪೆಗಳನ್ನು ಪಡೆಯುವವರಾಗಿರೋಣ.

------------*****------------

*(ಪುಟ ಸಂಖ್ಯೆ 01ರ ತಫ್ಸೀರ್‌ನ ಉಳಿದ ಭಾಗ)*

ತೆಗೆದುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಪವಿತ್ರ ಖುರ್‌ಆನ್‌ನ ಇತರ ಆಯತ್‌ಗಳು ಈ ಅರ್ಥಕ್ಕೆ ವಿರುದ್ಧವಾಗಿವೆ. ಅವುಗಳಿಂದ ನಿಜವಾಗಿ ಮರಣ ಹೊಂದಿದವರು ಈ ಲೋಕದಿಂದ ಪುನಃ ಹಿಂದಿರುಗಲು ಸಾಧ್ಯವಿಲ್ಲ ಎಂಬುದು ಸಾಬೀತಾಗುತ್ತದೆ. ಈ ಆಯತ್‌ಗೆ ಮತ್ತೊಂದು ಅರ್ಥವೂ ಇರಬಹುದು: ಮೃತರಂತಿರುವವರನ್ನು ಜೀವಂತಗೊಳಿಸುವುದು. ಈ ಅರ್ಥವು ಸಾಮಾನ್ಯ ಮಾತುಕತೆಯ ಬಳಕೆಯಲ್ಲಿಯೂ ಕಂಡುಬರುತ್ತದೆ. ಕೆಲವೊಮ್ಮೆ ಒಂದು ವಸ್ತು ಮತ್ತೊಂದು ವಸ್ತುವಿನೊಂದಿಗೆ ಅಷ್ಟು ಸಾಮ್ಯತೆಯನ್ನು ಹೊಂದಿರುತ್ತದೆ ಎಂದರೆ, ಅದರ ಹೆಸರೇ ಇದಕ್ಕೂ ಅನ್ವಯಿಸುತ್ತದೆ. ಉದಾಹರಣೆಗೆ, ಸಾಮಾನ್ಯವಾಗಿ ಮಾತನಾಡುವಾಗ ಯಾರಿಗಾದರೂ ತೀವ್ರವಾದ ಹೊಡೆತ ಅಥವಾ ಗಾಯವಾದಾಗ, ಆ ವ್ಯಕ್ತಿಯು ತನ್ನ ನೋವು ಮತ್ತು ಸಂಕಟವನ್ನು ವ್ಯಕ್ತಪಡಿಸುತ್ತಾ, "ಅಯ್ಯೋ, ನಾನು ಸತ್ತುಹೋದೆ!" ಎಂದು ಹೇಳುತ್ತಾನೆ. ಇದರ ಅರ್ಥ ನಿಜವಾಗಿಯೂ ಅವನು ಸತ್ತನು ಎಂದಲ್ಲ; ಬದಲಾಗಿ "ನಾನು ಸತ್ತವನಂತಾಗಿದ್ದೇನೆ" ಎಂಬುದಾಗಿದೆ. ಆದ್ದರಿಂದ ಈ ಆಯತ್‌ನ ಅರ್ಥ ಹೀಗೂ ಆಗಬಹುದು: ಮೃತರಂತಿರುವವರನ್ನು ಅಲ್ಲಾಹನು ಜೀವಂತಗೊಳಿಸುತ್ತಾನೆ. ಅಂದರೆ, ಯಾರಾದರೂ ಬದುಕುಳಿಯುವ ಯಾವುದೇ ನಿರೀಕ್ಷೆಯೂ ಉಳಿದಿಲ್ಲವೆಂದು ತೋರುವ ಸ್ಥಿತಿಯಲ್ಲಿದ್ದರೆ, ಮತ್ತು ಲೌಕಿಕ ಜ್ಞಾನವು ಅವರ ನಾಶದ ತೀರ್ಪನ್ನು ನೀಡಿದ್ದರೂ, ಅಲ್ಲಾಹನು ತನ್ನ ಕೃಪೆಯಿಂದ ಅವರನ್ನು ರಕ್ಷಿಸುತ್ತಾನೆ.

**(ತಫ್ಸೀರ್–ಎ–ಕಬೀರ್, ಸಂಪುಟ 2, ಪುಟ 188, ಆನ್‌ಲೈನ್ ಆವೃತ್ತಿ)**

**ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ.

**(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

**"ತನ್ನಿಗಾಗಿ ಇಷ್ಟಪಡುವುದನ್ನೇ ತನ್ನ ಸಹೋದರನಿಗೂ ಇಷ್ಟಪಡುವವರೆಗೆ ಯಾರೂ ಪೂರ್ಣ ವಿಶ್ವಾಸಿಯಾಗುವುದಿಲ್ಲ"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed Saheb & Family, Bengaluru, Karnataka**

**"ಸೌಮ್ಯತೆ ಯಾವ ವಿಷಯದಲ್ಲಿದ್ದರೂ ಅದನ್ನು ಸುಂದರಗೊಳಿಸುತ್ತದೆ."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Late S.R Abdur Rauf Saheb & Family, Shimoga, Karnataka**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಹಝ್ರತ್ ಅಕ್ದಸ್ ಮಸೀಹ್ ಮೌಊದ್(ಅ.ಸ.) ಅವರ ಕಬೂಲಿಯತ್–ಎ–ದುವಾ (ದುವಾ ಸ್ವೀಕಾರದ) ಈ ಮುಅಜಿಝ಼ಾದ ನಂತರವೂ ಅವರು ಸುಮಾರು ಮೂವತ್ತೆರಡು ವರ್ಷಗಳ ಕಾಲ ಜೀವಿಸಿದರು ಮತ್ತು ಆರೋಗ್ಯಪೂರ್ಣ ಜೀವನ ನಡೆಸಿದರು. ಅವರು ಕರ್ನಾಟಕದ ಯಾದಗೀರಿ ನಿವಾಸಿಯಾಗಿದ್ದರು. ಖಾದಿಯಾನ್‌ನಿಂದ ಹಿಂದಿರುಗಿದ ನಂತರ, ಅಲ್ಲಾಹನ ಅನುಗ್ರಹದಿಂದ ಯಾದಗೀರ್ ಮತ್ತು ಇತರ ಪ್ರದೇಶಗಳಲ್ಲಿ ಜಮಾಅತ್‌ನ ಸೇವೆಗಳನ್ನು ನಿರ್ವಹಿಸುತ್ತಿದ್ದರು. ಯಾದಗೀರ್‌ನಲ್ಲಿ ಅವರು ಖತೀಬ್ ಆಗಿ ಖುತ್ಬಾ ಜುಮಾ ನೀಡುತ್ತಿದ್ದರು. ಅವರ ಇಬ್ಬರು ಮೊಮ್ಮಕ್ಕಳಾದ ಮಕರ್‌ಮ್ ಜುಬೈರ್ ಅಹ್ಮದ್ ಸಾಹಿಬ್ ಮತ್ತು ಖಾಲಿದ್ ಅಹ್ಮದ್ ಸಾಹಿಬ್ ಅವರು ಇಂದಿಗೂ ಯಾದಗೀರ್‌ನಲ್ಲಿ ಜೀವಂತವಾಗಿದ್ದು ಸಕ್ರಿಯ ಜೀವನ ನಡೆಸುತ್ತಿದ್ದಾರೆ. ಅಲ್‌ಹಮ್ದುಲಿಲ್ಲಾಹ್.

ಖಾದಿಯಾನ್ ದಾರುಲ್ ಅಮಾನ್‌ನಲ್ಲಿಯೂ ಅಲ್ಲಾಹನ ಅನುಗ್ರಹದಿಂದ ಅವರ ವಂಶದ ಕೆಲವು ಕುಟುಂಬಸ್ಥರು ವಾಸಿಸುತ್ತಿದ್ದಾರೆ. ಸುಭಾನಲ್ಲಾಹ್! ಮೃತರನ್ನು ಜೀವಂತಗೊಳಿಸುವ ಈ ಮಹಾನ್ ಮುಅಜಿಜಾದ ಎಂತಹ ಅದ್ಭುತ ನಿಶಾನೆ ಇದು! ಇಂತಹ ಮೃತರನ್ನು ಜೀವಂತಗೊಳಿಸುವ ಸುಮಾರು ಇಪ್ಪತ್ತು ಅಥವಾ ಅದಕ್ಕಿಂತಲೂ ಹೆಚ್ಚಿನ ನಿಶಾನೆಗಳನ್ನು ಹಝ್ರತ್ ಅಕ್ದಸ್ ಮಸೀಹ್ ಮೌಊದ್ (ಅ.ಸ.) ಅವರ ಮೂಲಕ ಅಲ್ಲಾಹನು ಪ್ರಕಟಿಸಿದ್ದಾನೆ.

ಆದ್ದರಿಂದ ಹಝ್ರತ್ ಈಸಾ (ಅ.ಸ.) ಅವರ ವಿಷಯದಲ್ಲಿಯೂ ಇದೇ ರೀತಿಯ ಇಹ್ಯಾ ಎ ಮೌತಾ (ಮೃತರನ್ನು ಜೀವಂತಗೊಳಿಸುವುದು) ಸಾಬೀತಾಗುತ್ತದೆ. ಇದರ ಅರ್ಥ ಅವರು ನಿಜವಾಗಿ ಸತ್ತವರನ್ನು ಪುನಃ ಜೀವಂತಗೊಳಿಸುತ್ತಿದ್ದರು ಎಂಬುದಲ್ಲ. ಹಝ್ರತ್ ಅಕ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ವಾಸ್ತವವಾಗಿ... ಇಹ್ಯಾ ಎ ಮೌತಾ ವಿಷಯದಲ್ಲಿ ನಮ್ಮ ನಂಬಿಕೆ ಏನೆಂದರೆ ನಿಜವಾದ ಮೃತನನ್ನು ಪುನಃ ಜೀವಂತಗೊಳಿಸಲಾಗಿದೆ ಎಂಬುದಲ್ಲ... ಇಹ್ಯಾ ಎ ಮೌತಾ ಎಂದರೆ: (1) ಆಧ್ಯಾತ್ಮಿಕ ಜೀವನವನ್ನು ನೀಡುವುದು. (2) ದುವಾ ಮೂಲಕ, ಮರಣ ಹೊಂದಿದವರಲ್ಲಿ ಸೇರಿಸಲ್ಪಟ್ಟಿದ್ದಾನೆಂದು ಹೇಳಬಹುದಾದಂತಹ ಮನುಷ್ಯನಿಗೆ ಶಿಫಾ ನೀಡುವುದು; ಸಾಮಾನ್ಯ ಮಾತುಕತೆಯಲ್ಲಿ 'ಅಮೂಕನು ಸತ್ತು ಮತ್ತೆ ಬದುಕಿದನು' ಎಂದು ಹೇಳುವಂತೆ. ಇಹ್ಯಾ ಎ ಮೌತಾ ಎಂದರೆ ಅಪಾಯಕಾರಿ ಸ್ಥಿತಿಯಲ್ಲಿದ್ದ ಮೃತಪ್ರಾಯ ವ್ಯಕ್ತಿಯು ಆರೋಗ್ಯವಂತರಾಗುವುದೂ ಆಗಿದೆ." (ಬದರ್, 7 ಫೆಬ್ರವರಿ 1907, ಪುಟ–4)

ವಾಸ್ತವವಾಗಿ, ಈ ನಿಶಾನೆಗಳ ಪ್ರಕಟಣೆಯು ಒಂದೆಡೆ ಸಯ್ಯಿದುನಾ ಹಝ್ರತ್ ಅಕ್ದಸ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ(ಅ.ಸ.) ಅವರ ಸತ್ಯತೆಯನ್ನು ಪ್ರಕಟಿಸುತ್ತದೆ. ಮತ್ತೊಂದೆಡೆ, ಅವರು ಯಾರ ಗುಲಾಮಿಯ ಬಗ್ಗೆ ಹೆಮ್ಮೆಪಡುತ್ತಾರೋ ಆ ನೇತಾರ ಮತ್ತು ಪ್ರಿಯ ಪ್ರವಾದಿ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರೂ ಸತ್ಯದ ಪ್ರಕಾಶವಾಗಿದ್ದು, ಸತ್ಯತೆಯ ಒಂದು ಮಹಾನ್ ಮಿನಾರಾಗಿದ್ದರು ಎಂಬುದಕ್ಕೂ ಈ ನಿಶಾನೆಗಳು ಸಾಕ್ಷಿಯಾಗುತ್ತವೆ.

ಹಝ್ರತ್ ಅಕ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಖುದಾವಂದ್ ಕರೀಮ್ ಈ ಸ್ವೀಕೃತ ರಸೂಲ್‌ರ ಅನುಸರಣೆ ಮತ್ತು ಪ್ರೀತಿಯ ಬರಕತ್‌ನಿಂದ ಹಾಗೂ ತನ್ನ ಪವಿತ್ರ ವಚನವನ್ನು ಅನುಸರಿಸುವ ಪರಿಣಾಮದಿಂದ ಈ ವಿನೀತನನ್ನು ತನ್ನ ಸಂಭಾಷಣೆಗಳೊಂದಿಗೆ ವಿಶೇಷವಾಗಿ ಸಂಬೋಧಿಸಿದ್ದಾನೆ. ಲುದ್‌ದನ್ನೀ ಜ್ಞಾನಗಳಿಂದ ಸನ್ಮಾನಿಸಿದ್ದಾನೆ, ಅನೇಕ ಗುಪ್ತ ರಹಸ್ಯಗಳ ಅರಿವನ್ನು ನೀಡಿದ್ದಾನೆ ಮತ್ತು ಅನೇಕ ಸತ್ಯಗಳು ಹಾಗೂ ಮಆರಿಫ್‌ಗಳಿಂದ ಈ ಅಲ್ಪನ ಹೃದಯವನ್ನು ತುಂಬಿದ್ದಾನೆ. ಅನೇಕ ಬಾರಿ ನನಗೆ ತಿಳಿಸಿದ್ದಾನೆ: ಈ ಎಲ್ಲಾ ದಾನಗಳು, ಕೃಪೆಗಳು, ಅನುಗ್ರಹಗಳು, ಉಪಕಾರಗಳು, ದಯೆಗಳು, ಗಮನಗಳು, ಸಹಾಯಗಳು, ಬಹುಮಾನಗಳು, ಮುಕಾಲಮಾತ್ ಮತ್ತು ಮುಖಾತಬಾತ್ ಎಲ್ಲವೂ ಹಝ್ರತ್ ಖಾತಮುಲ್ ಅಂಬಿಯಾ ಅವರ ಅನುಸರಣೆ ಮತ್ತು ಪ್ರೀತಿಯ ಬರಕತ್‌ನಿಂದಲೇ ದೊರೆತಿವೆ."

"ಜಮಾಲ್ ಹಮ್‌ನಶೀಂ ದರ್ ಮನ್ ಅಸರ್ ಕರ್ದ್
ವಗರ್ ನ ಮನ್ ಹಮಾಂ ಖ಼ಾಕಮ್ ಕೆ ಹಸ್ತಮ್"

ಅರ್ಥಾತ್: "ಸಂಗಾತಿಯ ಸೌಂದರ್ಯ ನನ್ನ ಮೇಲೆ ತನ್ನ ಪ್ರಭಾವ ಬೀರಿದೆ; ಇಲ್ಲದಿದ್ದರೆ ನಾನು ಇದ್ದ ಅದೇ ಧೂಳಾಗಿದ್ದೇನೆ."

**(ಬರಾಹೀನ್ ಅಹ್ಮದಿಯ್ಯಾ, ಪುಟ–623, ಅಡಿಟಿಪ್ಪಣಿ ಸಂಖ್ಯೆ–11)**

––––––––––––*****––––––––––––

## ಓದುಗರೇ! ದಯವಿಟ್ಟು ಗಮನಹರಿಸಿ
## ಬದರ್ ವಾರಪತ್ರಿಕೆಯ ಸಹಾಯಕ್ಕಾಗಿ ಮನವಿ

**ಬದರ್ ವಾರಪತ್ರಿಕೆ**ಗೆ ಈ ವಿಶಿಷ್ಟ ಗೌರವ ಲಭಿಸಿದೆ: ಇದು ಯುಗದ ದೈವಿಕವಾಗಿ ನಿಯುಕ್ತರಾದವರು, ಪವಿತ್ರ ಪ್ರವಾದಿ ಮುಹಮ್ಮದ್(ಸ) ಅವರ ಸತ್ಯಸೇವಕರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪವಿತ್ರ ಆಶ್ರಯ ಮತ್ತು ಪೋಷಣೆಯಲ್ಲಿ ಬೆಳೆದು ಬಂದ ಪತ್ರಿಕೆಯಾಗಿದೆ. ಆರಂಭದಿಂದ ಇಂದಿನವರೆಗೂ, ಮೊದಲು ನಬುವ್ವತ್ (ಪ್ರವಾದಿತ್ವದ) ಮತ್ತು ನಂತರ ಖಿ಼ಲಾಫ಼ತ್ ಅಲಾ ಮಿನ್‌ಹಾಜೆ ನಬುವ್ವತ್‌ನ (ಪ್ರವಾದಿತ್ವದ ಮಾರ್ಗದರ್ಶನದಂತೆ ನಡೆಯುವ ಖಲೀಫಾತ್‌ನ) ಪವಿತ್ರ ನೆರಳಿನಲ್ಲಿ ಈ ಪತ್ರಿಕೆಯು ತನ್ನ ಧಾರ್ಮಿಕ ಪ್ರಚಾರ ಮತ್ತು ನೈತಿಕ–ಆಧ್ಯಾತ್ಮಿಕ ತರಬೇತಿಯ ಕರ್ತವ್ಯಗಳನ್ನು ನಿರಂತರವಾಗಿ ನಿರ್ವಹಿಸುತ್ತಾ ಬಂದಿದೆ. ಈ ಪತ್ರಿಕೆಯ ಮೂಲಕ ಅನೇಕ ಸತ್ಯಾನ್ವೇಷಕ ಮತ್ತು ಸತ್ಕುಲದ ಆತ್ಮಗಳು ಅಹ್ಮದಿಯ್ಯತ್ ಅನ್ನು ಸ್ವೀಕರಿಸಿ ಅದರ ಅನುಯಾಯಿಗಳಾದವು. ಈ ಪತ್ರಿಕೆಯ ಮೂಲಕ ಅಹ್ಮದಿಯ್ಯತ್‌ನ ಖಲೀಫರ ಮಾರ್ಗದರ್ಶನಗಳು ಮತ್ತು ಉಪದೇಶಗಳ ಬೆಳಕಿನಲ್ಲಿ ಅಹ್ಮದಿ ಕುಟುಂಬಗಳ ಧಾರ್ಮಿಕ ಹಾಗೂ ನೈತಿಕ ತರಬೇತಿ ನಡೆಯುತ್ತಿದೆ. ಮುಂದೆಯೂ ಸಹ, ದೇವರ ಇಚ್ಛೆಯಿದ್ದರೆ, ಈ ಸೇವೆ ನಿರಂತರವಾಗಿ ಮುಂದುವರಿಯಲಿದೆ.

ಪತ್ರಿಕೆಯ ತಯಾರಿ, ಮುದ್ರಣ, ಪ್ರಕಟಣೆ, ಪ್ಯಾಕಿಂಗ್ ಮತ್ತು ಓದುಗರಿಗೆ ತಲುಪಿಸುವ ಕಾರ್ಯಗಳಲ್ಲಿ ಬಹಳಷ್ಟು ವೆಚ್ಚವಾಗುತ್ತದೆ. ಕೇವಲ ಸಾಮಾನ್ಯ ಚಂದಾದಾರಿಕೆ ಶುಲ್ಕದಿಂದ ಈ ಎಲ್ಲಾ ವೆಚ್ಚಗಳನ್ನು ಪೂರೈಸುವುದು ಸಾಧ್ಯವಿಲ್ಲ. ಆದ್ದರಿಂದ, ಈ ದೈವಿಕವಾಗಿ ನಿಯುಕ್ತರಾದವರ ಪತ್ರಿಕೆಯ ವೆಚ್ಚಗಳನ್ನು ಭರಿಸಲು ಸಹಾಯ ಮಾಡುವ ವಿಶೇಷ ಸಹಾಯಕರ ಅಗತ್ಯ ಅತ್ಯಂತ ತೀವ್ರವಾಗಿದೆ. ಈ ಪತ್ರಿಕೆಗೆ ಸಹಾಯ ಮಾಡುವವರನ್ನು ಪರಮಾತ್ಮನು ಎಂದಿಗೂ ನಿರಾಶೆಗೊಳಿಸುವುದಿಲ್ಲ. ಏಕೆಂದರೆ ಪರಮಾತ್ಮನ ವಾಗ್ದಾನವೇನೆಂದರೆ: **ಇನ್ನಿ ಮುಈನುನ್ ಮನ್ ಇರಾದ ಇಆನತುಕ**–"ನಿನಗೆ ಸಹಾಯ ಮಾಡುವವನಿಗೆ ನಾನು ಸಹಾಯ ಮಾಡುತ್ತೇನೆ." ಈ ಸಹಾಯಕರ ಎಲ್ಲಾ ವ್ಯವಹಾರಗಳ ರಕ್ಷಕನಾಗಿ ಪರಮಾತ್ಮನೇ ಸ್ವತಃ ಇರುವನು. ತನ್ನ ವಾಗ್ದಾನದಂತೆ, ಅವರ ವ್ಯಾಪಾರ, ಉದ್ಯೋಗ, ತೋಟ, ಬೆಳೆ ಮತ್ತು ಸಂಪತ್ತಿನಲ್ಲಿ ಅನೇಕ ಪಟ್ಟು ಹೆಚ್ಚಳ ಮತ್ತು ಸಮೃದ್ಧಿಯನ್ನು ಅನುಗ್ರಹಿಸುವನು, ಇನ್‌ಶಾಅಲ್ಲಾಹ್.

ಆದ್ದರಿಂದ, ಈ ಬರ್ಕತಪೂರ್ಣ ಸೇವೆಯಲ್ಲಿ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಹಕರಿಸಿ, ಈ ಪತ್ರಿಕೆಯ ಪ್ರಕಟಣೆ ಮತ್ತು ಪ್ರಸಾರವನ್ನು ಮುಂದುವರಿಸಲು ನೆರವಾಗುವಂತೆ ಎಲ್ಲಾ ಸಹೃದಯ ಓದುಗರಲ್ಲಿ ಹೃತ್ಪೂರ್ವಕ ಮನವಿ ಮಾಡಲಾಗಿದೆ.

**ಯಾವುದೇ ರೀತಿಯ ಮಾಹಿತಿ ಅಥವಾ ಮಾರ್ಗದರ್ಶನಕ್ಕಾಗಿ ಬದರ್ ವಾರಪತ್ರಿಕೆಯ ಕಚೇರಿ ವ್ಯವಸ್ಥಾಪಕರನ್ನು ಸಂಪರ್ಕಿಸಿರಿ.**
**ಸಂಪರ್ಕ ಸಂಖ್ಯೆ: 9815639670**

## 131ನೇ ಜಲ್ಸಾ ಸಾಲಾನ ಖಾದಿಯಾನ್
## 25, 26, 27 ಡಿಸೆಂಬರ್ 2026ರಂದು ಆಯೋಜಿಸಲಾಗುವುದು

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 131ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 25, 26 ಮತ್ತು 27ನೇ ಡಿಸೆಂಬರ್ 2026 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಮರ್ಕಝಿಯ ಖಾದಿಯಾನ್)**

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮು**ಅವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ.

**MUSLIM TELEVISION AHMADIYYA INTERNATIONAL**
**www.mta.tv**

## ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

### ಮದೀನದ ನಿವಾಸಿಗಳ ಇಸ್ಲಾಮ್ ಧರ್ಮ ಸ್ವೀಕಾರ

ಇದೇ ಕಾಲದಲ್ಲಿ ಹಝ್ರತ್ ಪೈಗಂಬರರಿಗೆ(ಸ) ಪದೇ ಪದೇ ಅಲ್ಲಾಹನಿಂದ "ನಿಮ್ಮ ವಲಸೆಯ ಕಾಲ ಸಮೀಪಿಸುತ್ತಿದೆ" ಎಂದು ತಿಳಿಸಲಾಗುತ್ತಿತ್ತು. ಅವರ ವಲಸೆಯ ಪ್ರದೇಶ ಒಂದು ನಗರವಾಗಿರುವುದೆಂದೂ ಅಲ್ಲಿ ನೀರಿನ ಬಾವಿಗಳೂ ಖರ್ಜೂರದ ತೋಟಗಳೂ ಇರುವುವೆಂದೂ ತಿಳಿಸಲಾಗಿತ್ತು. ತಾನು ವಲಸೆ ಹೋಗುವ ನಗರ ಯಮಾಮ ಆಗಿರಬಹುದೆಂದು ಅವರು ಮೊದಲು ಯೋಚಿಸಿದ್ದರು.[19] ಆದರೆ ಬೇಗನೆ ಈ ಯೋಚನೆ ಅವರ ಹೃದಯದಿಂದ ದೂರೀಕರಿಸಲ್ಪಟ್ಟಿತು. ಅಲ್ಲಾಹನ ಭವಿಷ್ಯವಾಣಿಯ ಪ್ರಕಾರ ಯಾವ ನಗರ ತನ್ನ ವಲಸೆ ಹೋಗುವಿಕೆಗೆ ನಿಗದಿತವಾಗಿದ್ದರೂ ಆ ನಗರ ಇಸ್ಲಾಮಿನ ಕೇಂದ್ರವಾಗಲು ತನ್ನನ್ನು ಮುಂದಕ್ಕೊಡ್ಡುವುದು ಎಂದು ಅವರು ಪ್ರತೀಕ್ಷಿಸುತ್ತಾ ಇದ್ದರು. ಇದರ ಮಧ್ಯೆ ಹಜ್ಜ್ ಕಾಲ ಬಂತು. ಅರಬ್ ದೇಶದ ನಾಲ್ದೆಸೆಗಳಿಂದಲೂ ಜನರು ಹಜ್ಜ್‌ಗಾಗಿ ಮಕ್ಕದಲ್ಲಿ ಜಮಾಯಿಸಲು ತೊಡಗಿದರು. ಹಝ್ರತ್ ಪೈಗಂಬರ್(ಸ) ತಮ್ಮ ಸ್ವಭಾವದ ಪ್ರಕಾರ ಎಲ್ಲಿಯಾದರೂ ಜನರ ಗುಂಪು ನಿಂತಿರುವುದನ್ನು ಕಂಡರೆ ಅವರ ಸಮೀಪಕ್ಕೆ ಹೋಗಿ ಅವರಿಗೆ ಏಕದೇವ ವಿಶ್ವಾಸದ ಉಪದೇಶ ನೀಡುತ್ತಿದ್ದರು ಮತ್ತು ಅಲ್ಲಾಹನ ರಾಜ್ಯಭಾರದ ಶುಭವಾರ್ತೆ ನೀಡುತ್ತಿದ್ದರು. ದೌರ್ಜನ್ಯ, ದುಷ್ಕೃತ್ಯ, ಗಲಭೆ ಗೊಂದಲ ಮತ್ತು ಕಿರುಕುಳದಿಂದ ತಮ್ಮನ್ನು ತಡೆದಿಟ್ಟುಕೊಳ್ಳಲು ಉಪದೇಶಿಸುತ್ತಿದ್ದರು. ಕೆಲವರು ಅವರ ಮಾತುಗಳನ್ನು ಆಲಿಸಿ ಆಶ್ಚರ್ಯ ಸೂಚಿಸುತ್ತಾ ದೂರ ಹೋಗುತ್ತಿದ್ದರು. ಕೆಲವರು ಹಝ್ರತ್ ಪೈಗಂಬರರ(ಸ) ಮಾತಿಗೆ ಕಿವಿಗೊಡುತ್ತಿರುವಾಗ ಮಕ್ಕದ ಜನರು ಅವರನ್ನು ಅಲ್ಲಿಂದ ದೂರ ಸರಿಸುತ್ತಿದ್ದರು. ಬೇರೆ ಕೆಲವರು (ಮಕ್ಕದವರ ಮಾತನ್ನು ಮೊದಲು ಕೇಳಿದವರು) ಹಝ್ರತ್ ಪೈಗಂಬರರ(ಸ) ಮಾತುಗಳನ್ನು ಪರಿಹಾಸ ಮಾಡುತ್ತಾ ದೂರ ಸರಿಯುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಹಝ್ರತ್ ಪೈಗಂಬರ್(ಸ) ಮಿನಾ ಕಣಿವೆ ಪ್ರದೇಶದಲ್ಲಿ ತಿರುಗಾಡುತ್ತಿರುವಾಗ ಆರು–ಏಳು ಜನ ಮದೀನದ ನಿವಾಸಿಗಳನ್ನು ಅಲ್ಲಿ ಕಂಡರು. ಹಝ್ರತ್ ಪೈಗಂಬರ್(ಸ) ಅವರೊಂದಿಗೆ "ನಿಮ್ಮ ಗೋತ್ರ ಯಾವುದು?" ಎಂದು ಕೇಳಿದರು. ಅವರು "ನಾವು ಖಝ್ರಜ್ ಗೋತ್ರದವರು" ಎಂದು ಹೇಳಿದರು. "ನೀವು ಯಹೂದಿಯರೊಂದಿಗೆ ಒಪ್ಪಂದವನ್ನು ಮಾಡಿಕೊಂಡವರಲ್ಲವೇ?" ಎಂದು ಹಝ್ರತ್ ಪೈಗಂಬರ್(ಸ) ವಿಚಾರಿಸಿದಾಗ ಅವರು ಹೌದೆಂದರು. ಆಗ ಹಝ್ರತ್ ಪೈಗಂಬರ್, "ನೀವು ಸ್ವಲ್ಪ ಹೊತ್ತು ಕುಳಿತು ನನ್ನ ಮಾತನ್ನು ಕೇಳುವಿರೋ?" ಎಂದು ವಿಚಾರಿಸಿದರು. ಆ ಜನರು ಹಝ್ರತ್ ಪೈಗಂಬರರ(ಸ) ಬಗ್ಗೆ ಮೊದಲೇ ತಿಳಿದುಕೊಂಡಿದ್ದರು. ಅವರ ಹೃದಯಗಳು ಹಝ್ರತ್ ಪೈಗಂಬರರ(ಸ) ಕುರಿತು ಹೆಚ್ಚು ತಿಳಿದುಕೊಳ್ಳುವ ಆಸಕ್ತಿಯನ್ನು ಹೊಂದಿದ್ದುವು. ಆದುದರಿಂದ ಅವರು ಹಝ್ರತ್ ಪೈಗಂಬರರ(ಸ) ಮಾತಿಗೆ ಒಪ್ಪಿ ಅವರ ಮಾತುಗಳನ್ನು ಅವರ ಸಮೀಪ ಕುಳಿತುಕೊಂಡು ಕೇಳತೊಡಗಿದರು. ಹಝ್ರತ್ ಪೈಗಂಬರ್(ಸ) ಹೀಗೆ ಉಪದೇಶಿಸಿದರು:

"ಅಲ್ಲಾಹನ ರಾಜ್ಯಭಾರ ಬೇಗನೆ ಸ್ಥಾಪಿತವಾಗಲಿದೆ. ಹುಸಿದೈವಗಳು ಈ ಪ್ರಪಂಚದಿಂದ ಅಳಿಸಲ್ಪಡುವುವು. ಏಕದೇವ ಸಿದ್ಧಾಂತ ಲೋಕದಲ್ಲಿ ಸ್ಥಾಪಿಸಲ್ಪಡುವುದು. ಒಳಿತು ಮತ್ತು ಭಯ ಭಕ್ತಿ ಮತ್ತೊಮ್ಮೆ ಲೋಕದಲ್ಲಿ ಸ್ಥಾಪಿತವಾಗುವುದು. ಮದೀನದ ಜನರು ಈ ಮಹತ್ತಾದ ಕೊಡುಗೆಯನ್ನು ಸ್ವೀಕರಿಸಲು ಸಿದ್ಧರಾಗಿದ್ದಾರೆಯೇ?"

ಮದೀನದ ಜನರು ಹಝ್ರತ್ ಪೈಗಂಬರರ(ಸ) ಮಾತುಗಳನ್ನು ಆಲಿಸಿ ಪ್ರಭಾವಿತರಾದರು. ಅವರು ಹೇಳಿದರು: "ನಿಮ್ಮ ಉಪದೇಶಗಳನ್ನು ನಾವು ಸ್ವೀಕರಿಸುತ್ತೇವೆ. ಮದೀನದಲ್ಲಿ ಇಸ್ಲಾಮಿಗೆ ಆಶ್ರಯ ನೀಡುವ ಕುರಿತು ನಾವು ಮದೀನಕ್ಕೆ ಹೋದನಂತರ ನಮ್ಮ ಕೋಮಿನವರೊಂದಿಗೆ ಚರ್ಚಿಸಿ ಮುಂದಿನ ವರ್ಷ ನಿಮಗೆ ನಮ್ಮ ತೀರ್ಮಾನವನ್ನು ತಿಳಿಸುವೆವು."

ಈ ಜನರು ಮದೀನಕ್ಕೆ ಹೋದನಂತರ ತಮ್ಮ ಸಂಬಂಧಿಕರಿಗೂ ಸ್ನೇಹಿತರಿಗೂ ಹಝ್ರತ್ ಪೈಗಂಬರರ(ಸ) ಉಪದೇಶಗಳ ಕುರಿತು ತಿಳಿಸಲು ತೊಡಗಿದರು. ಆ ಕಾಲದಲ್ಲಿ ಮದೀನದಲ್ಲಿ ಔಸ್ ಮತ್ತು ಖಝ್ರಜ್ ಎಂಬ ಎರಡು ಅರಬಿ ಗೋತ್ರಗಳು ವಾಸಿಸುತ್ತಿದ್ದುವು. ಅಲ್ಲಿ ಮೂರು ಯಹೂದಿ ಗೋತ್ರಗಳಾದ ಬನೂ ಖುರೈಝ, ಬನೂ ನಝೀರ್ ಮತ್ತು ಬನೂ ಖೈನ್‌ಖಾಅ್ ಸಹ ವಾಸಿಸುತ್ತಿದ್ದುವು.

ಔಸ್ ಮತ್ತು ಖಝ್ರಜ್ ಗೋತ್ರಗಳು ಪರಸ್ಪರ ಹೋರಾಡುತ್ತಿದ್ದುವು. ಬನೂ ಖುರೈಝ ಮತ್ತು ಬನೂ ನಝೀರ್, ಔಸ್ ಗೋತ್ರದೊಂದಿಗೆ ಮತ್ತು ಬನೂ ಖೈನ್‌ಖಾಅ್, ಖಝ್ರಜ್ ಗೋತ್ರದೊಂದಿಗೆ ಸೇರಿದ್ದವು. ದೀರ್ಘಕಾಲದ ಹೋರಾಟದ ನಂತರ, ತಾವೆಲ್ಲರೂ ಪರಸ್ಪರ ರಾಜಿ ಮಾಡಿಕೊಳ್ಳಬೇಕು ಎಂಬ ಭಾವನೆ ಅವರಲ್ಲಿ ಮೂಡಿಬರುತ್ತಿತ್ತು. ಕೊನೆಗೆ ಪರಸ್ಪರ ಸಮಾಲೋಚನೆಯ ನಂತರ ಖಝ್ರಜ್ ಗೋತ್ರದ ಮುಖಂಡನಾದ ಅಬ್ದುಲ್ಲಾ ಬಿನ್ ಉಬಯ್ಯಿಬ್ನು ಸುಲೂಲ್ ಎಂಬವನನ್ನು ಸಂಪೂರ್ಣ ಮದೀನದ ದೊರೆಯೆಂದು ಅಂಗೀಕರಿಸಲು ತೀರ್ಮಾನಿಸಲಾಯಿತು. ಯಹೂದಿಯರೊಂದಿಗೆ ಬಾಂಧವ್ಯವಿದ್ದ ಕಾರಣ ಔಸ್ ಮತ್ತು ಖಝ್ರಜ್ ಗೋತ್ರಗಳ ಜನರು ಬೈಬಲಿನ ಭವಿಷ್ಯವಾಣಿಗಳನ್ನು ಆಲಿಸುತ್ತಾ ಇದ್ದರು. ಯಹೂದಿಯರು ತಮಗುಂಟಾಗುವ ಆಪತ್ತುಗಳನ್ನು ಮತ್ತು ಕಷ್ಟಗಳನ್ನು ವಿವರಿಸುತ್ತಾ ಕೊನೆಗೆ ಮೂಸಾ ಪ್ರವಾದಿಯ ಹಾಗಿರುವ ಒಬ್ಬ ಪ್ರವಾದಿ ಬರಲಿರುವ ಕುರಿತು ಹೇಳುತ್ತಿದ್ದರು. ಆ ಪ್ರವಾದಿ ಆಗಮಿಸುವ ಕಾಲ ಸಮೀಪಿಸಿದೆ ಎಂದೂ ಆ ಪ್ರವಾದಿ ಬಂದರೆ ತಾವು ಪುನಃ ಲೋಕದಲ್ಲಿ ಜಯಗಳಿಸುವೆವು ಎಂದೂ ತಮ್ಮ ವಿರೋಧಿಗಳು ನಾಶಗೊಳಿಸಲ್ಪಡುವರು ಎಂದೂ ಯಹೂದಿಯರು ಹೇಳುತ್ತಿದ್ದರು.

ಹಜ್ಜ್‌ಯಾತ್ರೆ ಮಾಡಿ ಬಂದವರಿಂದ ಹಝ್ರತ್ ಪೈಗಂಬರರ(ಸ) ಕುರಿತು ಮದೀನದವರು ತಿಳಿದಾಗ ಹಝ್ರತ್ ಪೈಗಂಬರರ(ಸ) ಸತ್ಯತೆಯ ಬಗ್ಗೆ ಅವರ ಹೃದಯಗಳಲ್ಲಿ ವಿಶ್ವಾಸ ಮನೆಮಾಡಿತು. ಅವರು, "ನಮಗೆ ಯಹೂದಿಯರು ವಿವರಿಸುತ್ತಿದ್ದ ಆ ಪ್ರವಾದಿ ಇವರೆಂಬುದಾಗಿ ತಿಳಿಯುತ್ತದೆ" ಎಂದು ಹೇಳಿದರು. ಅನೇಕ ಯುವಕರು ಹಝ್ರತ್ ಪೈಗಂಬರರ(ಸ) ಉಪದೇಶಗಳನ್ನು ತಿಳಿದು ಪ್ರಭಾವಿತರಾದರು. ಯಹೂದಿಯರಿಂದ ಅವರು ಆಲಿಸುತ್ತಿದ್ದ ಭವಿಷ್ಯವಾಣಿಗಳು ಅವರು ಸತ್ಯವಿಶ್ವಾಸವನ್ನು ಸ್ವೀಕರಿಸುವುದಕ್ಕೆ ಸಹಾಯಕವಾದುವು.

ಮುಂದಿನ ವರ್ಷ ಹಜ್ಜ್ ವೇಳೆಯಲ್ಲಿ ಮದೀನದವರು ಮಕ್ಕಕ್ಕೆ ಬಂದಾಗ, ಅವರಲ್ಲಿ ಹನ್ನೆರಡು ಮಂದಿ ಹಝ್ರತ್ ಪೈಗಂಬರರ(ಸ) ಧರ್ಮವನ್ನು ಸೇರಲು ಮುಂದಾದರು. ಅವರಲ್ಲಿ ಹತ್ತು ಜನ ಖಝ್ರಜ್ ಗೋತ್ರಕ್ಕೆ ಮತ್ತು ಇಬ್ಬರು ಔಸ್ ಗೋತ್ರಕ್ಕೆ ಸೇರಿದವರಾಗಿದ್ದರು. ಮಿನಾದಲ್ಲಿ ಅವರು ಹಝ್ರತ್ ಪೈಗಂಬರರನ್ನು(ಸ) ಭೇಟಿಯಾದರು. ಅವರು ಹಝ್ರತ್ ಪೈಗಂಬರರ ಕೈಯ ಮೇಲೆ ಕೈ ಇಟ್ಟು ತಮ್ಮ ನಿಷ್ಠೆಯ ಪ್ರಮಾಣ ಮಾಡುತ್ತಾ, ತಾವು ಏಕದೇವನ ಹೊರತು ಬೇರೆ ಯಾರನ್ನೂ ಆರಾಧಿಸಲಾರೆವೆಂದೂ ಕಳ್ಳತನ ಮಾಡಲಾರೆವೆಂದೂ ದುಷ್ಕೃತ್ಯಗಳನ್ನು ಮಾಡಲಾರೆವೆಂದೂ ಹೆಮ್ಮಕ್ಕಳನ್ನು ಕೊಲ್ಲಲಾರೆವೆಂದೂ ಪರಸ್ಪರ ಸುಳ್ಳು ಆರೋಪ ಮಾಡಲಾರೆವೆಂದೂ ಏಕದೇವನಿಂದ ನೇಮಿಸಲ್ಪಟ್ಟ ಪ್ರವಾದಿಯ ಇನ್ನಿತರ ಉಪದೇಶಗಳಿಗೆ ಮತ್ತು ಆಜ್ಞೆಗಳಿಗೆ ಅವಿಧೇಯರಾಗಲಾರೆವೆಂದೂ ದೃಢ ಪ್ರತಿಜ್ಞೆ ಮಾಡಿದರು. ಅವರು ತಮ್ಮ ನಗರಕ್ಕೆ ಮರಳಿ ಹೋದಾಗ ತಮ್ಮ ನಗರದ ನಿವಾಸಿಗಳಿಗೆ ಹೆಚ್ಚು ಉತ್ಸಾಹದಿಂದ ಧರ್ಮ ಸಂದೇಶವನ್ನು ತಲಪಿಸಲು ತೊಡಗಿದರು.[21] ಮದೀನದ ಮನೆಗಳಿಂದ ವಿಗ್ರಹಗಳು ಹೊರಕ್ಕೆಸೆಯಲ್ಪಡತೊಡಗಿದುವು. ವಿಗ್ರಹಗಳ ಮುಂದೆ ತಲೆಬಾಗುತ್ತಿದ್ದವರು ಈಗ ತಲೆಎತ್ತಿ ನಡೆಯತೊಡಗಿದರು. ಏಕದೇವನ ಮುಂದೆ ಹೊರತು ಬೇರೆ ಯಾರ ಮುಂದೆಯೂ ಅವರು ತಲೆಬಾಗಲು ಸಿದ್ಧರಾಗಲಿಲ್ಲ. ಯಹೂದಿಯರು ಆಶ್ಚರ್ಯ ಚಕಿತರಾದರು. ಶತಮಾನ ಕಾಲದ ಸ್ನೇಹಸಂಬಂಧ ಮತ್ತು ಶತಮಾನಗಳ ಕಾಲದ ಧಾರ್ಮಿಕ ತತ್ವಗಳ ಪ್ರಚಾರದಿಂದ ಅವರು ಮಾಡಲಾಗದ ಪರಿವರ್ತನೆಯನ್ನು ಇಸ್ಲಾಮ್ ಧರ್ಮ ಕೆಲವೇ ದಿನಗಳಲ್ಲಿ ಮಾಡಿ ತೋರಿಸಿತು. ಏಕದೇವ ವಿಶ್ವಾಸದ ಕುರಿತು ಉಪದೇಶ ಮದೀನದ ನಿವಾಸಿಗಳ ಹೃದಯಗಳಲ್ಲಿ ಮನೆಮಾಡುತ್ತಾ ಹೋಗುತ್ತಿತ್ತು. ಒಬ್ಬರ ನಂತರ ಇನ್ನೊಬ್ಬರಂತೆ ಜನರು ಬಂದು ಮುಸ್ಲಿಮರೊಂದಿಗೆ, "ನಿಮ್ಮ ಧರ್ಮವನ್ನು ನಮಗೆ ಕಲಿಸಿರಿ" ಎಂದು ಹೇಳಲುತೊಡಗಿದರು. ಆಗ ಮದೀನದ ಮುಸ್ಲಿಮರು ಇಸ್ಲಾಮ್ ಧರ್ಮದ ತತ್ವಗಳನ್ನು ಸಂಪೂರ್ಣವಾಗಿ ತಿಳಿದಿರಲಿಲ್ಲ. ನೂರಾರು ಅಥವಾ ಸಾವಿರಾರು ಜನರಿಗೆ ಇಸ್ಲಾಮ್ ಧರ್ಮದ ಕುರಿತು ಸವಿಸ್ತಾರವಾಗಿ ತಿಳಿಸುವಷ್ಟು ಮದೀನದ ನವಮುಸ್ಲಿಮರ ಸಂಖ್ಯೆ ಇರಲಿಲ್ಲ. ಆದುದರಿಂದ ಅವರು ಮಕ್ಕಕ್ಕೆ ಒಬ್ಬರನ್ನು ಕಳುಹಿಸಿ ಒಬ್ಬ ಧರ್ಮ ಪ್ರಚಾರಕನನ್ನು ಕಳುಹಿಸಿಕೊಡಲು ಹಝ್ರತ್ ಪೈಗಂಬರರೊಂದಿಗೆ(ಸ) ಅಪೇಕ್ಷಿಸಿದರು. ಅಬಿಸೀನಿಯಾ ದೇಶಕ್ಕೆ ವಲಸೆ ಹೋಗಿ ಹಿಂದಿರುಗಿದ ಮುಸ್‌ಅಬ್ ಎಂಬ ತಮ್ಮ ಶಿಷ್ಯನನ್ನು ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಧರ್ಮಪ್ರಚಾರಕ್ಕಾಗಿ ಕಳುಹಿಸಿದರು. ಹಝ್ರತ್ ಮುಸ್‌ಅಬ್(ರ) ಮಕ್ಕದಿಂದ ಹೊರಗೆ ಕಳುಹಿಸಲ್ಪಟ್ಟ ಪ್ರಥಮ ಧರ್ಮಪ್ರಚಾರಕರಾಗಿದ್ದರು.

(ಮುಂದುವರಿಯುವುದು)

**ಪ್ರೀತಿ ಎಲ್ಲರಲ್ಲೂ, ದ್ವೇಷವಿಲ್ಲ ಯಾರಲ್ಲೂ**
**Love for All, Hatred for None**

## ಹಝ್ರತ್ ಮಸೀಹ್ ಮೌಊದರ(ಅಲೈಹಿಸ್ಸಲಾಮ್) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

(42) **ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್**. ಶೇಖ್ ಅಬ್ದುರ್ ರಹ್ಮಾನ್ ಸಾಹಿಬ್ ಮಿಸ್ರಿ ಅವರು ನನಗೆ ತಿಳಿಸಿದಂತೆ, ಒಮ್ಮೆ ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಝುಹರ್ ನಮಾಝ್ ನಂತರ ಮಸೀದಿಯಲ್ಲಿ ಕುಳಿತಿದ್ದರು. ಆ ದಿನಗಳಲ್ಲಿ ನೀವು ಶೇಖ್ ಸಅದುಲ್ಲಾಹ್ ಲುಧಿಯಾನವಿಯವರ ಬಗ್ಗೆ ಹೀಗೆ ಬರೆದಿದ್ದಿರಿ: "ಅವನು ಅಬ್ತರ್ ಆಗಿಯೇ ಉಳಿಯುವನು ಮತ್ತು ಈಗ ಜೀವಂತವಾಗಿರುವ ಅವನ ಮಗನು ನಪುಂಸಕನಾಗಿದ್ದಾನೆ; ಅಂದರೆ ಅವನ ವಂಶವು ಮುಂದೆ ಮುಂದುವರಿಯುವುದಿಲ್ಲ." ನಾನು ವಿನಮ್ರವಾಗಿ ಹೇಳುವುದೇನೆಂದರೆ, ಸಅದುಲ್ಲಾಹ್ ಬಹಳ ಕಠಿಣ ವಿರೋಧಿಯಾಗಿದ್ದನು ಮತ್ತು ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರ ವಿರುದ್ಧ ಬಹಳ ಅಸಭ್ಯವಾಗಿ ಮಾತನಾಡುತ್ತಿದ್ದನು. ಆದರೆ ಆ ಸಮಯದಲ್ಲಿ ನಿಮ್ಮ ಈ ಬರಹ ಇನ್ನೂ ಪ್ರಕಟವಾಗಿರಲಿಲ್ಲ. ಆಗ ಮೌಲವಿ ಮುಹಮ್ಮದ್ ಅಲಿ ಸಾಹಿಬ್ ಅವರು ಹಝ್ರತ್ ಸಾಹಿಬ್ ಅವರಿಗೆ ಹೇಳಿದರು: "ಈ ರೀತಿಯಾಗಿ ಬರೆಯುವುದು ಕಾನೂನಿಗೆ ವಿರುದ್ಧವಾಗಿದೆ. ಅವನ ಮಗನು ನಿಮ್ಮ ವಿರುದ್ಧ ಮೊಕದ್ದಮೆ ಹೂಡಿದರೆ, ಅವನು ನಿಜವಾಗಿಯೂ ನಪುಂಸಕನೆಂಬುದಕ್ಕೆ ಯಾವ ಸಾಕ್ಷ್ಯವನ್ನು ನೀಡಬಹುದು?" ಹಝ್ರತ್ ಸಾಹಿಬ್ ಅವರು ಮೊದಲಿಗೆ ಮೃದುಭಾವದಿಂದ ಸೂಕ್ತ ರೀತಿಯಲ್ಲಿ ಉತ್ತರಿಸುತ್ತಿದ್ದರು. ಆದರೆ ಮೌಲವಿ ಮುಹಮ್ಮದ್ ಅಲಿ ಸಾಹಿಬ್ ಅವರು ಪದೇಪದೇ ಅದೇ ವಿಷಯವನ್ನು ಮುಂದಿಟ್ಟುಕೊಂಡು ತಮ್ಮ ಅಭಿಪ್ರಾಯದ ಮೇಲೆ ಒತ್ತಾಯಿಸಿದಾಗ, ಹಝ್ರತ್ ಸಾಹಿಬ್ ಅವರ ಮುಖವು ಕೆಂಪಾಯಿತು ಮತ್ತು ನೀವು ಕೋಪದ ಧ್ವನಿಯಲ್ಲಿ ಹೀಗೆ ಹೇಳಿದರು: **"ನಬಿಯು ಆಯುಧವನ್ನು ಹಿಡಿದು ಹೊರಗೆ ಬಂದ ನಂತರ, ಮತ್ತೆ ಆ ಆಯುಧವನ್ನು ಕೆಳಗಿಡುವುದಿಲ್ಲ."**

(43) **ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್**. ಹಝ್ರತ್ ವಾಲಿದಾ ಸಾಹಿಬಾ ಅವರು ನನಗೆ ತಿಳಿಸಿದಂತೆ, ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ಹೇಳುತ್ತಿದ್ದರು: "ನಮ್ಮ ತಂದೆಯವರು ಆರಂಭಿಕ ಕಾಲದಲ್ಲಿ ವಿದ್ಯಾಭ್ಯಾಸಕ್ಕಾಗಿ ಹೊರಗೆ ಹೋದಾಗ, ಬಹುಶಃ ಇದು ದೆಹಲಿಯ ವಿಷಯವಾಗಿರಬಹುದು, ಅವರು ಒಂದು ಮಸೀದಿಯಲ್ಲಿ ತಂಗಿದ್ದರು. ಅವರ ಬಳಿಯಿದ್ದ ಆಹಾರ ಸಾಮಗ್ರಿ ಮುಗಿದುಹೋಗಿದ್ದರಿಂದ ಹಲವು ಬಾರಿ ಉಪವಾಸದಿಂದಿರಬೇಕಾಯಿತು. ಕೊನೆಗೆ ಯಾರೋ ಅವರನ್ನು ವಿದ್ಯಾರ್ಥಿಯೆಂದು ಭಾವಿಸಿ ಒಂದು ಚಪಾತಿಯನ್ನು ನೀಡಿದರು. ಅದು ಹಳಸಿಹೋಗಿ ಒಣಗಿ ಬಹಳ ಗಟ್ಟಿಯಾಗಿತ್ತು. ತಂದೆಯವರು ಅದನ್ನು ತೆಗೆದುಕೊಂಡರು. ಆದರೆ ಇನ್ನೂ ಅದನ್ನು ತಿಂದಿರಲಿಲ್ಲ. ಆಗ ಅವರ ಜೊತೆಗಿದ್ದ, ಖಾದಿಯಾನ್‌ನವನಾಗಿದ್ದ ಒಬ್ಬ ಸಂಗಾತಿಯೂ ಇದೇ ರೀತಿಯಾಗಿ ಹಸಿವಿನಿಂದ ಬಳಲುತ್ತಿದ್ದನು. ಅವನು ಹೇಳಿದನು: 'ಮಿರ್ಜಾ ಜೀ, ಸಾಡಾ ವೀ ಧಿಯಾನ್ ರಖ್ಣಾ.' ಅಂದರೆ, 'ಮಿರ್ಜಾ ಸಾಹಿಬ್, ನಮ್ಮನ್ನೂ ಗಮನದಲ್ಲಿಟ್ಟುಕೊಳ್ಳಿ.' ಇದನ್ನು ಕೇಳಿದಾಗ ತಂದೆಯವರು ಆ ಚಪಾತಿಯನ್ನು ಅವನ ಕಡೆಗೆ ಎಸೆದರು. ಅದು ಅವನ ಮೂಗಿನ ಮೇಲೆ ಬಿತ್ತು ಮತ್ತು ಬಿದ್ದ ತಕ್ಷಣ ಅಲ್ಲಿಂದ ರಕ್ತನಾಳವೊಂದು ಒಡೆದು ರಕ್ತ ಹರಿಯತೊಡಗಿತು." ನಾನು ವಿನಮ್ರವಾಗಿ ಹೇಳುವುದೇನೆಂದರೆ, ವಾಲಿದಾ ಸಾಹಿಬಾ ಅವರು ಆ ಸಂಗಾತಿಯೂ ಖಾದಿಯಾನ್‌ನ ಯಾವುದೋ ಮಿರ್ಜಾ ಆಗಿದ್ದನು ಎಂದು ವಿವರಿಸಿದ್ದರು. ಆದರೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿ (ರ.ಅ.) ಅವರು ನಾನು ಹಝ್ರತ್ ಸಾಹಿಬ್ ಅವರಿಂದ ಕೇಳಿದ್ದೇನೆ ಎಂದು ಹೇಳುತ್ತಿದ್ದರು: ಅವನು ಯಾವುದೋ ಕ್ಷೌರಿಕ ಅಥವಾ ಮರಾಸಿ ಆಗಿದ್ದನು. ಹಝ್ರತ್ ಸಾಹಿಬ್ ಅವರು ಈ ಘಟನೆಯನ್ನು ಹಾಸ್ಯದ ರೀತಿಯಲ್ಲಿ ಹೇಳುತ್ತಾ, "ಇಂತಹ ಸಂದರ್ಭದಲ್ಲಿಯೂ ಈ ಜನರಿಗೆ ನಗುವಿನ ಮಾತೇ ಹೊಳೆಯುತ್ತದೆ" ಎಂದು ಹೇಳುತ್ತಿದ್ದರು.

(44) **ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್**. ವಾಲಿದಾ ಸಾಹಿಬಾ ಅವರು ನನಗೆ ತಿಳಿಸಿದಂತೆ, ನಿಮ್ಮ ತಾತನವರು ಕಾದಿಯಾನ್‌ನ ಆಸ್ತಿಯ ಮೇಲಿನ ಮಾಲಿಕತ್ವದ ಹಕ್ಕುಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಆರಂಭಿಕ ಕಾಲದಲ್ಲಿ ಅನೇಕ ಮೊಕದ್ದಮೆಗಳನ್ನು ಹೂಡಿದರು. ಕಾಶ್ಮೀರದ ಉದ್ಯೋಗದಲ್ಲಿದ್ದಾಗ ಮತ್ತು ಅದರ ನಂತರ ಅವರು ಸಂಗ್ರಹಿಸಿದ್ದ, ಸುಮಾರು ಒಂದು ಲಕ್ಷ ರೂಪಾಯಿಗಳಾಗಿದ್ದ ಎಲ್ಲಾ ಹಣವನ್ನೂ ಈ ಮೊಕದ್ದಮೆಗಳ ಮೇಲೆ ಖರ್ಚು ಮಾಡಿದರು. ವಾಲಿದಾ ಸಾಹಿಬಾ ಅವರು ಹೇಳುತ್ತಿದ್ದರು: ಹಝ್ರತ್ ಸಾಹಿಬ್ ಅವರು ಹೇಳುತ್ತಿದ್ದರಂತೆ, ಆ ಕಾಲದಲ್ಲಿ ಅಷ್ಟು ಹಣದಿಂದ ಅದರ ನೂರು ಪಟ್ಟು ದೊಡ್ಡ ಆಸ್ತಿಯನ್ನು ಖರೀದಿಸಬಹುದಾಗಿತ್ತು. ನಾನು ವಿನಮ್ರವಾಗಿ ಹೇಳುವುದೇನೆಂದರೆ, ತಾತನವರಿಗೆ ಒಂದು ವಿಚಾರವಿತ್ತು: ಏನೇ ಆಗಲಿ, ಖಾದಿಯಾನ್ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳ ಪುರಾತನ ಪೈತೃಕ ಹಕ್ಕುಗಳು ಕೈತಪ್ಪಬಾರದು. ತಾತನವರು, "ಖಾದಿಯಾನ್‌ನ ಮಾಲಿಕತ್ವವು ನನಗೆ ಒಂದು ರಾಜ್ಯಕ್ಕಿಂತಲೂ ಉತ್ತಮವಾಗಿದೆ" ಎಂದು ಹೇಳುತ್ತಿದ್ದರು ಎಂದು ನಾವು ಕೇಳಿದ್ದೇವೆ. ಇದಲ್ಲದೆ, ಖಾದಿಯಾನ್ ನಮ್ಮ ಪೂರ್ವಜರು ವಾಸಸ್ಥಾಪನೆ ಮಾಡಿದ ಸ್ಥಳವಾಗಿದೆ. ಅವರು ಬಾಬರಿ ಯುಗದ ಅಂತ್ಯದಲ್ಲಿ ಭಾರತಕ್ಕೆ ಬಂದಿದ್ದರು. ಖಾದಿಯಾನ್ ಮತ್ತು ಅದರ ಸುತ್ತಮುತ್ತ ಹಲವು ಮೈಲುಗಳವರೆಗೆ ಇರುವ ಹಳ್ಳಿಗಳು ನಮ್ಮ ಪೂರ್ವಜರ ಬಳಿಯಲ್ಲಿ ರಾಜ್ಯ ಅಥವಾ ಜಾಗೀರ್ ರೂಪದಲ್ಲಿ ಇದ್ದವು. ರಾಮಗಢಿಯಾ ಸಿಖ್ಖರ ಕಾಲದಲ್ಲಿ ನಮ್ಮ ಕುಟುಂಬವು ಬಹಳಷ್ಟು ಸಂಕಷ್ಟಗಳನ್ನು ಅನುಭವಿಸಿತು ಮತ್ತು ತೀವ್ರವಾಗಿ ನಾಶವಾಯಿತು. ಆದರೆ ನಂತರ ರಾಜಾ ರಂಜಿತ್ ಸಿಂಗ್ ಅವರ ಆಳ್ವಿಕೆಯ ಕಾಲದಲ್ಲಿ ನಮ್ಮ ಜಾಗೀರ್‌ನ ಒಂದು ಭಾಗವನ್ನು ನಮ್ಮ ಪೂರ್ವಜರಿಗೆ ಮರಳಿ ನೀಡಲಾಯಿತು. ಆದರೆ ಬ್ರಿಟಿಷ್ ಆಳ್ವಿಕೆಯ ಆರಂಭದಲ್ಲಿ ಮತ್ತೆ ಹಲವು ಹಕ್ಕುಗಳನ್ನು ವಶಪಡಿಸಿಕೊಳ್ಳಲಾಯಿತು. ಅನೇಕ ಮೊಕದ್ದಮೆಗಳ ನಂತರ, ತಾತನವರು ಬಹಳಷ್ಟು ಹಣವನ್ನು ಖರ್ಚು ಮಾಡಿದ ಬಳಿಕ, ಕೇವಲ ಕಾದಿಯಾನ್ ಮತ್ತು ಅದರೊಂದಿಗೆ ಸಂಬಂಧಿಸಿದ ಎರಡು ಹಳ್ಳಿಗಳ ಮೇಲಿನ ಮಾಲಿಕತ್ವದ ಹಕ್ಕುಗಳು, ಹಾಗೂ ಖಾದಿಯಾನ್ ಸಮೀಪದ ಮೂರು ಹಳ್ಳಿಗಳ ಮೇಲಿನ ತಹಸೀಲ್ದಾರಿ ಹಕ್ಕುಗಳು ನಮ್ಮ ಕುಟುಂಬಕ್ಕೆ ಅಂಗೀಕರಿಸಲ್ಪಟ್ಟವು. ಈ ಹಕ್ಕುಗಳು ಇಂದಿಗೂ ಉಳಿದಿವೆ. ಆದರೆ ಮಧ್ಯದಲ್ಲಿ ನಮ್ಮದೇ ಸಂಬಂಧಿಕರು ಹೂಡಿದ ಮೊಕದ್ದಮೆಗಳ ಕಾರಣದಿಂದ, ನಮ್ಮ ತಾಯಾ ಸಾಹಿಬ್ ಅವರ ಕಾಲದಲ್ಲಿ ಖಾದಿಯಾನ್‌ನ ಆಸ್ತಿಯ ದೊಡ್ಡ ಭಾಗವು ಮಿರ್ಝಾ ಅಝಮ್ ಬೇಗ್ ಲಾಹೌರಿ ಅವರ ಕುಟುಂಬದ ವಶಕ್ಕೆ ಹೋಯಿತು ಮತ್ತು ಸುಮಾರು ಮೂವತ್ತೈದು ವರ್ಷಗಳ ಕಾಲ ಅದೇ ಕುಟುಂಬದಲ್ಲಿ ಉಳಿಯಿತು. ಆದರೆ ಇತ್ತೀಚೆಗೆ, ಅಲ್ಲಾಹ್ ತಆಲಾ ಅವರ ಅನುಗ್ರಹದಿಂದ, ಆ ಭಾಗವೂ ನಮಗೆ ಮರಳಿ ದೊರೆತಿದೆ. ವಾಲಿದಾ ಸಾಹಿಬಾ ಅವರು ಹೇಳುತ್ತಿದ್ದರು: ನಿಮ್ಮ ತಾಯಾ ಸಾಹಿಬ್ ಅವರ ಕಾಲದಲ್ಲಿ ಖಾದಿಯಾನ್‌ನ ಆಸ್ತಿಯ ದೊಡ್ಡ ಭಾಗವು ಮಿರ್ಝಾ ಅಝಮ್ ಬೇಗ್ ಅವರ ಕೈಗೆ ಹೋದಾಗ, ನಿಮ್ಮ ತಾಯಾ ಸಾಹಿಬ್ ಅವರಿಗೆ ಬಹಳ ಆಘಾತವಾಯಿತು. ಇದರಿಂದ ಅವರು ಅಸ್ವಸ್ಥರಾದರು ಮತ್ತು ಸುಮಾರು ಎರಡು ವರ್ಷಗಳ ನಂತರ ಅದೇ ಅನಾರೋಗ್ಯದಲ್ಲಿ ನಿಧನರಾದರು. ಆದರೆ ಡಿಕ್ರಿ ವಿರುದ್ಧವಾಗಿದ್ದರೂ ಸಹ, ತಮ್ಮ ಜೀವನಕಾಲದಲ್ಲಿ ಅವರು ಎದುರಾಳಿ ಪಕ್ಷಕ್ಕೆ ಆಸ್ತಿಯ ಸ್ವಾಧೀನವನ್ನು ನೀಡಲಿಲ್ಲ. ನಾನು ವಿನಮ್ರವಾಗಿ ಹೇಳುವುದೇನೆಂದರೆ, ಇದು ಅದೇ ಮೊಕದ್ದಮೆ ಮತ್ತು ಅದೇ ಡಿಕ್ರಿಯಾಗಿದೆ; ಹಝ್ರತ್ ಮಸೀಹ್ ಮೌಊದ್ (ಅ.ಸ.) ಅವರು ತಮ್ಮ ಗ್ರಂಥಗಳಲ್ಲಿ ಇದರ ಉಲ್ಲೇಖ ಮಾಡಿದ್ದಾರೆ. ನೀವು ನಿಮ್ಮ ಸಹೋದರರಿಗೆ, "ವಿರೋಧಿಸಬೇಡಿ ಮತ್ತು ಹಕ್ಕನ್ನು ಒಪ್ಪಿಕೊಳ್ಳಿ" ಎಂದು ತಡೆದಿದ್ದಿರಿ. ಏಕೆಂದರೆ ಅಲ್ಲಾಹ್ ತಆಲಾ ನಿಮಗೆ ಈ ಮೊಕದ್ದಮೆಯ ಅಂತ್ಯವು ವಿರುದ್ಧವಾಗಲಿದೆ ಎಂದು ತಿಳಿಸಿದ್ದನು. ಆದರೆ ಹಝ್ರತ್ ಸಾಹಿಬ್ ಅವರು ಹೇಳುತ್ತಿದ್ದರು: "ನನ್ನ ಸಹೋದರರು ಕಾರಣವನ್ನು ಹೇಳಿ ಒಪ್ಪಲಿಲ್ಲ." ನಂತರ ಡಿಕ್ರಿ ಹೊರಬಂದ ಸುದ್ದಿ ಬಂದಾಗ ಹಝ್ರತ್ ಸಾಹಿಬ್ ಅವರು ತಮ್ಮ ಹುಜ್ರಾದಲ್ಲಿ ಇದ್ದರು. ತಾಯಾ ಸಾಹಿಬ್ ಅವರು ಹೊರಗಿನಿಂದ ನಡುಗುತ್ತಾ ಡಿಕ್ರಿಯ ಕಾಗದವನ್ನು ಕೈಯಲ್ಲಿ ಹಿಡಿದು ಒಳಗೆ ಬಂದರು. ಆ ಕಾಗದವನ್ನು ಹಝ್ರತ್ ಸಾಹಿಬ್ ಅವರ ಮುಂದೆ ಇಟ್ಟು ಹೀಗೆ ಹೇಳಿದರು: "ಲೇ ಘುಲಾಮ್ ಅಹ್ಮದ್, ಜೋ ತೂ ಕಹಂದಾ ಸೀ, ಓಹೋ ಈ ಹೋ ಗಯಾ ಏ." ಅಂದರೆ: "ತೆಗೆದುಕೋ ಗುಲಾಮ್ ಅಹ್ಮದ್, ನೀನು ಏನು ಹೇಳುತ್ತಿದ್ದೆಯೋ ಅದೇ ಆಗಿಬಿಟ್ಟಿದೆ." ನಂತರ ಅವರು ಪ್ರಜ್ಞೆ ತಪ್ಪಿ ಬಿದ್ದರು. ವಾಲಿದಾ ಸಾಹಿಬಾ ಅವರು ಹೇಳುತ್ತಿದ್ದರು: ತಾಯಾ ಸಾಹಿಬ್ ಅವರ ನಿಧನದ ನಂತರ ಹಝ್ರತ್ ಸಾಹಿಬ್ ಅವರು ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಅವರನ್ನು ಕರೆದು, "ಸ್ವಾಧೀನವನ್ನು ಒಪ್ಪಿಸಿಕೊಡಿ" ಎಂದು ಹೇಳಿದರು. ಅದರಂತೆ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಅವರು ಡಿಕ್ರಿಗೆ ಅನುಸಾರವಾಗಿ ಸ್ವಾಧೀನವನ್ನು ಒಪ್ಪಿಸಿದರು. ನಂತರ ಆಸ್ತಿಯ ಒಂದು ಭಾಗವನ್ನು ಬಹಳ ಕಡಿಮೆ ಬೆಲೆಗೆ ಮಾರಾಟ ಮಾಡಿ, ಖರ್ಚಿನ ಹಣವನ್ನೂ ಪಾವತಿಸಿದರು.

(ತಿದ್ದುಪಡಿ ಸೂಚನೆ: ಈ ವರದಿಯಲ್ಲಿ ನನ್ನ ಕಡೆಯಿಂದ "ಖಾದಿಯಾನ್ ಮತ್ತು ಅದರೊಳಗೆ ಸೇರಿರುವ ಎರಡು ಹಳ್ಳಿಗಳ ಮೇಲಿನ ಮಾಲಿಕತ್ವದ ಹಕ್ಕುಗಳು ಅಂಗೀಕರಿಸಲ್ಪಟ್ಟವು" ಎಂಬ ವಾಕ್ಯವನ್ನು ದಾಖಲಿಸಲಾಗಿದೆ. ಇದು ಸರಿಯಲ್ಲ. ಇದು ಬರವಣಿಗೆಯ ತಪ್ಪಿನಿಂದ ಸೇರಿಕೊಂಡಿದೆ. ವಾಸ್ತವವಾಗಿ ಖಾದಿಯಾನ್‌ಗೆ ಸಂಬಂಧಿಸಿದ ಎರಡು ಹಳ್ಳಿಗಳಾದ ಖಾದಿರಾಬಾದ್ ಮತ್ತು ಅಹ್ಮದಾಬಾದ್ ಎರಡನ್ನೂ ತಾತನವರು ಬ್ರಿಟಿಷ್ ಆಳ್ವಿಕೆ ಸ್ಥಾಪನೆಯ ನಂತರ ವಸಾಹತು ಮಾಡಿಸಿದ್ದರು. ಆದ್ದರಿಂದ "ಮತ್ತು ಅದರೊಳಗೆ ಸೇರಿರುವ ಎರಡು ಹಳ್ಳಿಗಳು" ಎಂಬ ಪದಗಳನ್ನು ಅಳಿಸಲಾಗಿದೆ ಎಂದು ಪರಿಗಣಿಸಬೇಕು.)

**(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 9902678609
e-mail:
akhbaarbadarkannadaqdn@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2026-28 Vol No.07, Thursday, 01 October 2026, Issue No. 40

Act. MANAGER
ATHAR AHMAD SHAMIM.
Mobile : +91 99156 39670
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

* ಅಲ್ಬೇನಿಯಾದ ಅತಿಥಿ ಸಿಲ್ವಿ, ಹಲವು ವರ್ಷಗಳ ನಂತರ ಎರಡನೇ ಬಾರಿಗೆ ಜಲ್ಸಕ್ಕೆ ಬಂದರು. ಅವರು ಹೇಳಿದರು: ಇವು ನನಗೆ ನನ್ನ ಜೀವನದ ಅತ್ಯುತ್ತಮ ಕ್ಷಣಗಳು. ಜಲ್ಸದ ವ್ಯವಸ್ಥೆಗಳು ತುಂಬಾ ಚೆನ್ನಾಗಿದ್ದವು. ಜಲ್ಸದ ಬಳಿ ನನ್ನ ನಿವಾಸದಿಂದಾಗಿ, ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ಮೊದಲ ಬಾರಿಗೆ ಫಜ್ರ್, ಮಗ್ರಿಬ್ ಮತ್ತು ಇಶಾ ನಮಾಝ್‌ಗಳನ್ನು ನಿರ್ವಹಿಸಲು ನನಗೆ ಅವಕಾಶ ಸಿಕ್ಕಿತು. ಆಹಾರವು ತುಂಬಾ ಚೆನ್ನಾಗಿತ್ತು ಮತ್ತು ಶುಚಿತ್ವದ ಗುಣಮಟ್ಟವೂ ತುಂಬಾ ಚೆನ್ನಾಗಿತ್ತು.

* ಅಲ್ಬೇನಿಯಾದಿಂದ ಬಂದ ಅತಿಥಿ, ತಿರಾನಾ ವಿಶ್ವವಿದ್ಯಾಲಯದ ನೈಸರ್ಗಿಕ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ. ಡಾ. ರೆಕ್ಷೆಪ್ ಶ್ಕುರ್ತಿ, ಅವರು ತಮ್ಮ ಪತ್ನಿಯೊಂದಿಗೆ ಬಂದರು. ಅವರು ಹೇಳಿದರು: ಸಭೆ ತುಂಬಾ ಭವ್ಯವಾಗಿತ್ತು. ನಾನು ಹತ್ತು ವರ್ಷಗಳಿಂದ ಉಪವಾಸ ಮಾಡುತ್ತಿದ್ದೇನೆ ಮತ್ತು ಇಸ್ಲಾಂನ ಇತರ ನಿಯಮಗಳನ್ನು ಪಾಲಿಸಲು ಪ್ರಯತ್ನಿಸುತ್ತೇನೆ, ಆದರೆ ಅವೆಲ್ಲವೂ ಅಲ್ಲ. ಇಲ್ಲಿ ನಾನು ಇಸ್ಲಾಂ ಅನ್ನು ನೋಡಿದ್ದೇನೆ. ನೀವು ಇತರ ಮುಸ್ಲಿಮರಾದ ಖಲೀಫತ್‌ಗಿಂತ ಸ್ಪಷ್ಟ ವ್ಯತ್ಯಾಸವನ್ನು ಹೊಂದಿದ್ದೀರಿ ಮತ್ತು ಅದಕ್ಕಾಗಿಯೇ ನಿಮ್ಮಲ್ಲಿ ಏಕತೆಯೂ ಇದೆ.

* ಇಮರ್ ಗ್ಜೆರ್ಜಿ, ಅಲ್ಬೇನಿಯನ್ ಅಹ್ಮದಿ. ಅವರು ಹೇಳಿದರು: ಈ ಜಲ್ಸವು ಆತ್ಮಕ್ಕೆ ಆಹಾರವಾಗಿತ್ತು. ಹೋಟೆಲ್ ಹತ್ತಿರದಲ್ಲಿದ್ದರಿಂದ, ನನಗೆ ಹುಝೂರ್ ಅವರೊಂದಿಗೆ ಝುಹ್ರ್ ಮತ್ತು ಅಸರ್ ನಮಾಝ್‌ಗಳನ್ನು ನಿರ್ವಹಿಸಲು ಅವಕಾಶ ಸಿಕ್ಕಿತು, ಜೊತೆಗೆ ಮಗ್ರಿಬ್ ಮತ್ತು ಇಶಾ ನಮಾಝ್‌ಗಳನ್ನು ನಿರ್ವಹಿಸಲು ಅವಕಾಶ ಸಿಕ್ಕಿತು. ಜಲ್ಸದ ವ್ಯವಸ್ಥೆಗಳು ತುಂಬಾ ಚೆನ್ನಾಗಿದ್ದವು. ಆದಾಗ್ಯೂ, ಜಲ್ಸದ ನಕ್ಷೆ ಮತ್ತು ಕೆಲವು ಸೈನ್‌ಬೋರ್ಡ್‌ಗಳು ಇಂಗ್ಲಿಷ್ ಮತ್ತು ಜರ್ಮನ್ ಭಾಷೆಯಲ್ಲಿದ್ದರೆ ಉತ್ತಮವಾಗಿತ್ತು.

* ಅಲ್ಬೇನಿಯಾದ ನರ್ಸ್ ಮತ್ತು ಅತಿಥಿ ಎರ್ಮಿರಾ ಅಲಿಬಾಶಿ ಹೇಳುತ್ತಾರೆ: ನಾನು ಮೊದಲು ಜಲ್ಸಕ್ಕೆ ಬಂದಿದ್ದೇನೆ. ಈ ಬಾರಿ ನಾನು ಅದೇ ಆಧ್ಯಾತ್ಮಿಕ ಹಂಬಲದಿಂದಾಗಿ ಮತ್ತೆ ಜಲ್ಸಕ್ಕೆ ಬಂದಿದ್ದೇನೆ. ಈ ಬಾರಿ ನಾನು ಮೊದಲ ಬಾರಿಗೆ ನಮಾಝನ್ನು ನಿರ್ವಹಿಸಿದೆ. ನನ್ನೊಂದಿಗೆ ಖುದ್ಸಿಯಾ ಸಾಹಿಬಾ ಹುಝೂರ್ ಅನ್ವರ್(ಅತಬಿಅ) ಅವರ ಧ್ವನಿಯನ್ನು ಕೇಳುತ್ತಾ ನಮಾಝ್ ನಿರ್ವಹಿಸುತ್ತಿದ್ದರು ಮತ್ತು ನಾನು ಅವರನ್ನು ನೋಡುತ್ತಾ ಅವರನ್ನು ಅನುಕರಿಸುತ್ತಿದ್ದೆ. ಮೊದಲ ಬಾರಿಗೆ, ನನ್ನ ಆತ್ಮದ ಪ್ರತಿಯೊಂದು ಕಣವೂ ಚಲಿಸುವಂತೆ ತೋರುತ್ತಿತ್ತು. ನಾನು ಸಜದ ಮಾಡುತ್ತಾ ಅಳುತ್ತಾ ಪ್ರಾರ್ಥಿಸುತ್ತಿದ್ದೆ ಮತ್ತು ನನ್ನ ಎಲ್ಲಾ ದ್ವೇಷ ಕರಗುತ್ತಿರುವಂತೆ ತೋರುತ್ತಿತ್ತು. ಸರ್ವಶಕ್ತನಾದ ಅಲ್ಲಾಹನು ನನ್ನ ನಂಬಿಕೆಯಲ್ಲಿ ನನಗೆ ಶಕ್ತಿಯನ್ನು ನೀಡಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಹುಝೂರ್ ಅನ್ವರ್(ಅತಬಿಅ) ಅವರೊಂದಿಗಿನ ನನ್ನ ಭೇಟಿಯ ಸಮಯದಲ್ಲಿ, ನಾನು ಯಾವಾಗಲೂ ನನ್ನ ಗೌರವಾನ್ವಿತ ತಂದೆಯನ್ನು ನೋಡುತ್ತಿರುವಂತೆ ಭಾಸವಾಗುತ್ತದೆ.

* ಅಲ್ಬೇನಿಯಾದ ಅತಿಥಿ ಮಹಿಳೆ ಡ್ರೈಟ್ ಶ್ಕುರ್ತಿ ಪ್ರೌಢಶಾಲಾ ಶಿಕ್ಷಕಿ. ಅವರು ಹೇಳಿದರು: ಜಲ್ಸದ ವ್ಯವಸ್ಥೆಗಳು ತುಂಬಾ ಹೆಚ್ಚಿದ್ದವು. ಶಾಲಾ ಶಿಕ್ಷಕಿಯಾಗಿ, ಇಂದಿನ ಮಕ್ಕಳು ಎಷ್ಟು ಆಕ್ರಮಣಕಾರಿ ಎಂದು ನನಗೆ ತಿಳಿದಿದೆ. ಆದರೆ ಇಲ್ಲಿ, ಮಕ್ಕಳು ತುಂಬಾ ಶಾಂತವಾಗಿದ್ದರು, ಅವರು ತಮ್ಮ ಕರ್ತವ್ಯಗಳಲ್ಲಿ ಮಗ್ನರಾಗಿದ್ದರು. ಇದು ನನಗೆ ತುಂಬಾ ಆಶ್ಚರ್ಯಕರವಾಗಿತ್ತು. ಜಲ್ಸದ ಸಮಯದಲ್ಲಿ ಕುತೂಹಲವು ನನ್ನನ್ನು ಸಾಮಾನ್ಯ ಊಟದ ಕೋಣೆಗೆ ಕರೆದೊಯ್ದಿತು, ಅದು ಮಾರುಕಟ್ಟೆಯ ಮೊದಲು ಇತ್ತು. ಅಲ್ಲಿಯೂ ಸಹ, ಸಾವಿರಾರು ಪುರುಷರು ಆಹಾರ ತಿನ್ನುವುದನ್ನು ನಾನು ನೋಡಿದೆ, ಆದರೆ ನಾನು ಯಾವುದೇ ಜಗಳಗಳು, ಕಸಿದುಕೊಳ್ಳುವಿಕೆ ಇತ್ಯಾದಿಗಳನ್ನು ನೋಡಲಿಲ್ಲ. ಅವರೆಲ್ಲರೂ ಕೆಲಸ ಮಾಡುವುದು ಮಾತ್ರ ತಿಳಿದಿರುವ ಜೇನುನೊಣಗಳಂತೆ ತೋರುತ್ತಿತ್ತು. ಜನರು ಯಾವುದೇ ಕೆಲಸಕ್ಕೆ ಸಿದ್ಧರಾಗಿದ್ದರು ಮತ್ತು ಅವರ ನೈತಿಕತೆ ತುಂಬಾ ಹೆಚ್ಚಾಗಿತ್ತು, ಅವರಿಗೆ ಸ್ವಲ್ಪ ಒತ್ತಡ ಬಂದರೂ ಸಹ ಅವರು ತಕ್ಷಣ ಮತ್ತು ಎಚ್ಚರಿಕೆಯಿಂದ ಕ್ಷಮಿಸಿ ಎಂದು ಹೇಳುತ್ತಿದ್ದರು.

**ಕೊಸೊವೊದಿಂದ ಆಗಮಿಸಿದ್ದ ನಿಯೋಗದ ಭೇಟಿ**

ಕಾರ್ಯಕ್ರಮದ ಪ್ರಕಾರ, ಕೊಸೊವೊದ ನಿಯೋಗದ ಸದಸ್ಯರು ಹುಝೂರ್ ಅನ್ವರ್(ಅತಬಿಅ) ಅವರನ್ನು ಭೇಟಿ ಮಾಡುವ ಭಾಗ್ಯವನ್ನು ಹೊಂದಿದ್ದರು. ಕೊಸೊವೊದ 36 ಜನರ ನಿಯೋಗವು ಜಲ್ಸದಲ್ಲಿ ಸೇರಿದ್ದರು.

ನಾನು ಈ ಜಲ್ಸಾಗೆ ಬಂದಿರುವುದು ಇದೇ ಮೊದಲು ಎಂದು ಅತಿಥಿಯೊಬ್ಬರು ಹೇಳಿದರು. ಜಲ್ಸವು ಬಹಳ ಚೆನ್ನಾಗಿ ಆಯೋಜಿಸಲಾಗಿತ್ತು. ಇದು ಮುಸ್ಲಿಮರಿಗೆ ಒಂದು ಉದಾಹರಣೆಯಾಗಿದೆ. ಮುಸ್ಲಿಂ ಸಮುದಾಯವು ಇದನ್ನು ಉದಾಹರಣೆಯಾಗಿ ತೆಗೆದುಕೊಳ್ಳಬೇಕು.

ಇದರ ಬಗ್ಗೆ, ಹುಝೂರ್ ಅನ್ವರ್(ಅತಬಿಅ) ಹೇಳಿದರು, ಇದಕ್ಕಾಗಿಯೇ ಹಝ್ರತ್ ಮಸೀಹ್ ಮೌಊದ್(ಅ) ಅವರು ಮುಸ್ಲಿಂ ಸಮುದಾಯವನ್ನು ಒಂದೇ ಕೈಯಲ್ಲಿ ಒಗ್ಗೂಡಿಸಲು ಬಂದಿದ್ದಾರೆ. ಈ ನಿಟ್ಟಿನಲ್ಲಿ, ಭೂಮಿಯ ಮೇಲಿನ ಎಲ್ಲಾ ಮುಸ್ಲಿಮರನ್ನು ಒಂದೇ ಧರ್ಮದ ಮೇಲೆ ಒಗ್ಗೂಡಿಸಲು ಅವರು ದೈವವಾಣಿ ಪಡೆದರು.

ಒಟ್ಟಿನಲ್ಲಿ ಈಗ ಮುಸ್ಲಿಮರನ್ನು ಒಗ್ಗೂಡಿಸಲು ಒಂದೇ ಒಂದು ಕೈ ಇದೆ. ಅದು ಹಝ್ರತ್ ಪೈಗಂಬರ್(ಸ) ರ ಗುಲಾಮರ ಕೈ. ಅವರು ಒಂದೇ ಸ್ಥಳದಲ್ಲಿ ಒಟ್ಟುಗೂಡಿದರೆ, ಅವರು ಹಝ್ರತ್ ಮಸೀಹ್ ಮೌಊದ್(ಅ)ರನ್ನು ಅನುಸರಿಸಿದರೆ, ಏಕತೆ ಸೃಷ್ಟಿಯಾಗುತ್ತದೆ, ಇಲ್ಲದಿದ್ದರೆ ಅವರು ಚದುರಿಹೋಗುತ್ತಾರೆ.

ಕೊಸೊವೊದಿಂದ ಬರುತ್ತಿದ್ದ ಪತ್ರಕರ್ತರೊಬ್ಬರು ಐವತ್ತು ಸಾವಿರ ಜನರು ಸೇರಿದ್ದರು ಎಂದು ಹೇಳಿದರು. ಒಂದೇ ಒಂದು ಸಮಸ್ಯೆಯೂ ಇರಲಿಲ್ಲ. ಇದು ಆಶ್ಚರ್ಯಕರವಾಗಿತ್ತು. ಇದರ ಬಗ್ಗೆ, ಹುಝೂರ್ ಅನ್ವರ್(ಅತಬಿಅ) ಅವರು ಹಿಂತಿರುಗಿ ಜಲ್ಸದ ಪರಿಸ್ಥಿತಿಗಳ ಕುರಿತು ಲೇಖನ ಬರೆಯಲು ಹೇಳಿದರು. ಎಚ್ಚರಿಕೆಯಿಂದ ಮತ್ತು ಬುದ್ಧಿವಂತಿಕೆಯಿಂದ ಸಂಪೂರ್ಣ ಪರಿಚಯವನ್ನು ಮಾಡಲಾಗುತ್ತದೆ. ಇದರ ಬಗ್ಗೆ, ನಾನು ಖಂಡಿತವಾಗಿಯೂ ಸಂದೇಶವನ್ನು ತಿಳಿಸುತ್ತೇನೆ ಎಂದು ಹೇಳಿದರು.

ಹುಝೂರ್ ಅನ್ವರ್(ಅತಬಿಅ) ಹೇಳಿದರು: ವಿರೋಧವಿದೆ, ಆದರೆ ವಿರೋಧದಲ್ಲಿ ಪ್ರಗತಿ ಇದೆ. ಇನ್ಶಾ ಅಲ್ಲಾಹ್, ಅದು ಚೆನ್ನಾಗಿರುತ್ತದೆ. ನೀವು ನಿಮ್ಮ ವಲಯಕ್ಕೆ ಸಂದೇಶವನ್ನು ಸೀಮಿತ ಪ್ರಮಾಣದಲ್ಲಿ ತಿಳಿಸಬಹುದು.

* ಕೊಸೊವೊದಿಂದ ಬರುವ ಅತಿಥಿ, ಇತಿಹಾಸ ಶಿಕ್ಷಕರಾದ ಶ್ರೀ ಬುರಿಮ್ ಬ್ರೂಜೈ ಹೇಳುತ್ತಾರೆ: ಜಲ್ಸದ ಮೂರು ದಿನಗಳು ನನ್ನ ಜೀವನದ ಅಸಾಧಾರಣ ದಿನಗಳು. ಇಸ್ಲಾಮಿಕ್ ನಂಬಿಕೆಗಳ ಮೇಲೆ ಬೆಳಕು ಚೆಲ್ಲುವ ಖಲೀಫಾ ಅವರ ಭಾಷಣಗಳು ತುಂಬಾ ಚೆನ್ನಾಗಿದ್ದವು. ಸರ್ವಶಕ್ತನಾದ ಅಲ್ಲಾಹನು ನಮ್ಮ ಖಲೀಫಾ ಅವರನ್ನು ಆಶೀರ್ವದಿಸಲಿ. ಅನೇಕ ಹೊಸ, ಅದ್ಭುತ ಜನರನ್ನು ಭೇಟಿಯಾಗುವ ಸಂತೋಷ ನನಗೆ ಸಿಕ್ಕಿತು. ಸಾಮುದಾಯಿಕ ವಾತಾವರಣವು ನಿಜವಾಗಿಯೂ ಸ್ಫೂರ್ತಿದಾಯಕವಾಗಿತ್ತು, ಮತ್ತು ಈ ದಿನಗಳು ನನ್ನ ಹೃದಯದಲ್ಲಿ ಆಳವಾದ ಪ್ರಭಾವ ಬೀರಿವೆ. ಈ ಕಾರ್ಯಕ್ರಮವು ಆಧ್ಯಾತ್ಮಿಕ ಪೋಷಣೆಯನ್ನು ಒದಗಿಸುವುದಲ್ಲದೆ, ಸಮಾನ ಮನಸ್ಸಿನ ಜನರಲ್ಲಿ ಪರಸ್ಪರ ಸಂಪರ್ಕವನ್ನು ಬೆಳೆಸುವ ಅವಕಾಶವನ್ನು ಒದಗಿಸಿರುವುದರಿಂದ ಭವಿಷ್ಯದಲ್ಲಿ ಮತ್ತೊಮ್ಮೆ ಜಲ್ಸ ಸಾಲಾನದಲ್ಲಿ ಭಾಗವಹಿಸಲು ನಾನು ಎದುರು ನೋಡುತ್ತಿದ್ದೇನೆ.

ಈ ದಿನಗಳಲ್ಲಿ ಖಲೀಫಾ ಅವರ ಭಾಷಣಗಳು ಮತ್ತು ಇತರ ಭಾಷಣಗಳಿಂದ ನಾನು ಕಲಿತದ್ದನ್ನು ನಾನು ಖಂಡಿತವಾಗಿಯೂ ಹಿಂತಿರುಗಿ ನನ್ನ ಸ್ನೇಹಿತರಿಗೆ ಹೇಳುತ್ತೇನೆ.

(ಮುಂದುವರಿಯುವುದು)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.